ಸಂಪುಟ 20 ಸಂಚಿಕೆ 45
ನವೆಂಬರ್ 7, 1999 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ

# ಐಕ್ಯರಂಗ




## ಪೋಪ್ ಭೇಟಿ ಯಾಕೀ ಬೊಬ್ಬೆ?




## ವಿಮೆಯನ್ನು ವಿದೇಶಿಯರಿಗೆ ಒತ್ತೆಯಿಡುವ ಮಸೂದೆಗೆ ವಿರೋಧ

## ಕನ್ನಡಕ್ಕೆ-ಕರ್ನಾಟಕಕ್ಕೆ ಒದಗಿರುವ ಗಂಡಾಂತರ



## ಬಿಜೆಪಿ: ವಿರೋಧಿ ಪಕ್ಷದ ನಾಯಕತ್ವಕ್ಕೆ ಇಷ್ಟು ಕಿತ್ತಾಟವೇ?

## ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ ಮಸೂದೆಗೆ ಸಿಪಿಐ(ಎಂ) ರಾಜ್ಯ ಸಮಿತಿ ಖಂಡನೆ

ರಾಷ್ಟ್ರಾದ್ಯಂತ ಕಾರ್ಮಿಕ ವರ್ಗ, ವಿಶೇಷವಾಗಿ ವಿಮಾ ನೌಕರರು ವ್ಯಕ್ತಪಡಿಸಿದ ಪ್ರಬಲ ಪ್ರತಿಭಟನೆಗಳನ್ನು ಜನಾಭಿಪ್ರಾಯಗಳನ್ನು ಧಿಕ್ಕರಿಸಿ ಕೇಂದ್ರದ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರವು ಸಂಸತ್ತಿನಲ್ಲಿ ಮಂಡಿಸಿದ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ ಮಸೂದೆಯನ್ನು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಸಭೆಯು ಖಂಡಿಸಿದೆ.

ಎಲ್‌ಐಸಿ ಮತ್ತು ಜಿಐಸಿಯ ಎಲ್ಲಾ ವರ್ಗದ ನೌಕರರು ಈ ಮಸೂದೆಯ ವಿರುದ್ಧ ಅಕ್ಟೋಬರ್ 29.10.99 ರಂದು ಒಂದು ದಿನದ ಮುಷ್ಕರ ನಡೆಸಿದ್ದಾರೆ. ಮುಷ್ಕರ ಸಂಪೂರ್ಣ ಯಶಸ್ವಿಯಾಗಿದೆ. ವಿಮಾ ನೌಕರರ ಐಕ್ಯ ಹೋರಾಟವನ್ನು ಸಿಪಿಐ(ಎಂ) ರಾಜ್ಯ ಸಮಿತಿ ಶ್ಲಾಘಿಸುತ್ತದೆ ಮತ್ತು ನೌಕರರನ್ನು ಅಭಿನಂದಿಸಿದೆ.

ಕೇಂದ್ರ ಸರಕಾರ, WTO ಮತ್ತು IMF ಶರತ್ತುಗಳಿಗೆ ಮಣಿದು ಬಹುರಾಷ್ಟ್ರೀಯ ಸಂಸ್ಥೆಗಳಿಗೆ, ಬಂಡವಾಳಶಾಹಿಗಳಿಗೆ ವಿಮಾರಂಗವನ್ನು ತೆರೆಯುವುದನ್ನು ರಾಜ್ಯ ಸಮಿತಿಯು ಉಗ್ರವಾಗಿ ಖಂಡಿಸಿದೆ. ಹಿಂದೆ ಸಂಯುಕ್ತ ರಂಗ ಸರಕಾರ ವಿಮಾ ಪ್ರಾಧಿಕಾರ ಮಸೂದೆಯನ್ನು ತಂದಾಗ ಅದನ್ನು ಸ್ವದೇಶಿಯ ಹೆಸರಿನಲ್ಲಿ ವಿರೋಧಿಸಿ ಅದೇ ಮಸೂದೆಯನ್ನು ಈಗ ತರುತ್ತಿರುವುದು ಬಿಜೆಪಿಯ ಗೋಸುಂಬೆತನ ಹಾಗೂ ಸಂದರ್ಭಸಾಧಕತೆಯನ್ನು ತೋರಿಸುತ್ತದೆ ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಹೇಳಿದೆ.

ಪ್ರಜಾಪ್ರಭುತ್ವದ ಬಗ್ಗೆ ಉದ್ದುದ್ದ ಭಾಷಣ ಮಾಡುವ ಸರಕಾರ ಒಂದು ಕೋಟಿ 54 ಲಕ್ಷ ನಾಗರೀಕರು ಸಹಿ ಮಾಡಿ ವಿಮಾ ಖಾಸಗೀಕರಣದ ವಿರುದ್ಧ ಕೊಟ್ಟಿರುವ ಮನವಿಯನ್ನು ಧಿಕ್ಕರಿಸಿರುವುದು ಬಿಜೆಪಿಗೆ ಪ್ರಜಾಪ್ರಭುತ್ವ ಮೌಲ್ಯಗಳಲ್ಲಿ ನಂಬಿಕೆ ಇಲ್ಲ ಎಂಬುದನ್ನು ಎತ್ತಿ ತೋರಿಸುತ್ತದೆ.

ರಾಷ್ಟ್ರೀಕೃತ ಎಲ್‌ಐಸಿ ಮತ್ತು ಜಿಐಸಿ ಗಳಲ್ಲಿ ಪಾಲಿಸಿದಾರರ ಸೇವೆಯಾಗಲೀ, ಲಾಭವಾಗಲೀ, ದಕ್ಷತೆಯಾಗಲೀ ಎಲ್ಲದರಲ್ಲೂ ಉತ್ತಮ ಮಟ್ಟವನ್ನು ಮುಟ್ಟಿದೆ, ದೇಶದ ಎಲ್ಲಾ ರಂಗಗಳೂ ಆರ್ಥಿಕ ಹಿಂಜರಿತವನ್ನು ಅನುಭವಿಸುತ್ತಿರುವಾಗ ಎಲ್‌ಐಸಿ ಯ ಕಳೆದ ಹದಿನಾಲ್ಕು ವರ್ಷಗಳಲ್ಲಿ ಪಾಲಿಸಿ ಹೆಚ್ಚಳದಲ್ಲಿ 13.13% ಮೊದಲ ವರ್ಷದ ಪ್ರಮೀಯಂ (FPI) ನಲ್ಲಿ 22.55% ಹೆಚ್ಚಳ ಹಾಗೂ ಒಟ್ಟಾರೆ ಪ್ರೀಮಿಯಂ ವರಮಾನದಲ್ಲಿ 20.66% ಹೆಚ್ಚಳ ತೋರಿಸಿದೆ.

1956 ರಲ್ಲಿ 5 ಕೋಟಿ ಮೂಲಬಂಡವಾಳ, ಕಳೆದ ವರ್ಷ ( 99 ರಲ್ಲಿ) ನೀಡಿದ ಲಾಭದ ಅಂಶ 235.70 ಕೋಟಿ ರೂ! 4700 ಪ್ರತಿಶತ ಲಾಭಾಂಶ, ಎಲ್‌ಐಸಿಯು ಭಾರತದಲ್ಲಿ ಬಹುದೊಡ್ಡ ಆರ್ಥಿಕ ಸಂಸ್ಥೆಯಾಗಿದ್ದು ಅದರ ಜೀವನಿಧಿ ಈಗ ಒಂದು ಲಕ್ಷ ಇಪ್ಪತ್ತೇಳು ಸಾವಿರ ಕೋಟಿರೂ. ಮೀರಿದೆ. ಅದೇ ರೀತಿ ಸಾಮಾನ್ಯ ವಿಮೆಯಲ್ಲಿ 21.5 ಕೋಟಿ ಬಂಡವಾಳಕ್ಕೆ ಸುಮಾರು 47 ರಷ್ಟು ಪ್ರತಿಶತ ಬೆಳವಣಿಗೆ ತೋರಿಸಿದೆ.

ವಿದೇಶಗಳಲ್ಲಿ ಅಮೆರಿಕಾ ರೀತಿ ಜಪಾನಲ್ಲಿ ಹಲವಾರು ವಿಮಾ ಕಂಪನಿಗಳು ಮುಚ್ಚಿಹೋಗಿವೆ. ಜಪಾನಿನ ಬಹು ದೊಡ್ಡ ಕಂಪನಿಯಾದ ನಿಸ್ಸಾನ್ ಕಂಪನಿ ಮುಳುಗಿರುವುದು ಕಳೆದ ವರ್ಷ. ಭಾರತದಲ್ಲಿ ಖಾಸಗೀ ವಿಮಾ ಕಂಪನಿಗಳು ಪಾಲಿಸಿದಾರರ ಹಣವನ್ನು ಸುರಕ್ಷಿತವಾಗಿ ಹಿಂತಿರುಗಿಸುತ್ತವೆ ಎನ್ನುವುದು ಸಂಶಯಾಸ್ಪದ.

ವಿಮಾ ಖಾಸಗೀಕರಣವು ದೇಶದ ಆರ್ಥಿಕ ಸಾರ್ವಭೌಮತೆಗೆ, ಸ್ವಾಯತ್ತತೆಗೆ ಧಕ್ಕೆ ಎಂದು ಸಭೆ ಸ್ಪಷ್ಟ ಅಭಿಪ್ರಾಯ ಪಟ್ಟಿದೆ.


ವಿಮಾ ನೌಕರರು ಖಾಸಗೀಕರಣದ ವಿರುದ್ಧ ನಡೆಸುತ್ತಿರುವ ಹೋರಾಟಕ್ಕೆ ರಾಜ್ಯ ಸಮಿತಿ ಸಂಪೂರ್ಣ ಬೆಂಬಲ ಕೊಡುವುದಲ್ಲದೇ ವಿಮಾ ಪ್ರಾಧಿಕಾರ ಮಸೂದೆಯನ್ನು ವಾಪಸು ತೆಗೆದುಕೊಳ್ಳಬೇಕು ಎಂದು ಕೇಂದ್ರ ಸರಕಾರವನ್ನು ಒತ್ತಾಯಿಸಿದೆ.

## ಚಳಿಗಾಲದ ಅಧಿವೇಶನದ ಮೊದಲ ದಿನ 'ಪಾರ್ಲಿಮೆಂಟ್ ಚಲೋ' ಎರಡೂವರೆ ಲಕ್ಷ ವಿಮಾ ನೌಕರರ ಪ್ರತಿಭಟನಾ ಮುಷ್ಕರ

ಲೋಕಸಭೆಯಲ್ಲಿ ವಿಮಾ ಮಸೂದೆ ಮಂಡಿಸುತ್ತಲೇ ದೇಶಾದ್ಯಂತ ವಿಮಾ ನೌಕರರು ಸ್ವಯಂಸ್ಫೂರ್ತವಾಗಿ ಆಫೀಸುಗಳಿಂದ ಹೊರಬಂದು ಪ್ರತಿಭಟನೆ ನಡೆಸಿದರು. ವಿಮಾ ಕ್ಷೇತ್ರದ ಅತಿ ದೊಡ್ಡ ಯೂನಿಯನ್ AIIEA ಮರುದಿನ(ಅಂದರೆ ಅಕ್ಟೋಬರ್ 29 ರಂದು) ದೇಶಾದ್ಯಂತ ಒಂದು ದಿನದ ಮುಷ್ಕರಕ್ಕೆ ಕರೆ ಕೊಟ್ಟಿತು. ದೇಶಾದ್ಯಂತ ಈ ಕರೆಗೆ ವಿಮಾ ನೌಕರರು ಒಕ್ಕೊರಲಿನಿಂದ ಓಗೊಟ್ಟರು. ಕ್ಲಾಸ್ I ಅಧಿಕಾರಿಗಳು ಸೇರಿದಂತೆ ವಿಮಾ ಕ್ಷೇತ್ರದ ಕಚೇರಿಗಳು ದೇಶಾದ್ಯಂತ ಸ್ತಬ್ಧವಾಗಿದ್ದವು. ಎಲ್ಲಾ ಕಡೆ ಭಾರಿ ರ್‍ಯಾಲಿಗಳು ನಡೆದವು. ದೆಹಲಿಯಲ್ಲಿ 'ಜೀವನ ಭಾರತಿ' ಕಂಪನಿ ಎದುರು ಪಟೇಲ್ ಚೌಕದಲ್ಲಿ ದೊಡ್ಡ ರ್‍ಯಾಲಿ ನಡೆಯಿತು. ಸಾವಿರಾರು ವಿಮಾ ನೌಕರರನ್ನು ಉದ್ದೇಶಿಸಿ ಪ್ರಮುಖ ನಾಯಕರು - ಇಂದ್ರಜಿತ್ ಗುಪ್ತ, ರೂಪ್‌ಚಂದ್ ಪಾಲ್, ಗುರುದಾಸ್ ದಾಸ್ ಗುಪ್ತ, ಸೀತಾರಾಂ ಯೆಚೂರಿ, ಹನ್ನನ್ ಮುಲ್ಲಾ - ಮಾತನಾಡಿದರು.

ದೇಶಾದ್ಯಂತ ಸಫಲ ಮುಷ್ಕರಕ್ಕೆ AIIEA ವಿಮಾ ನೌಕರರನ್ನು ಅಭಿನಂದಿಸಿದ್ದು ಮುಂದಿನ ಹಂತದ ಹೋರಾಟಗಳಿಗೆ ಸಜ್ಜಾಗಬೇಕೆಂದು ಕರೆ ನೀಡಿದೆ. ಚಳಿಗಾಲದ ಪಾರ್ಲಿಮೆಂಟಿನ ಅಧಿವೇಶನದ ಮೊದಲ ದಿನ ಪಾರ್ಲಿಮೆಂಟು ಚಲೋಗೆ ಕರೆ ನೀಡಿದೆ. ಈ ಪಾರ್ಲಿಮೆಂಟು ಚಲೋಗೆ ಬ್ಯಾಂಕ್ ನೌಕರರು ಸೇರಿದಂತೆ ಆರ್ಥಿಕ ಕ್ಷೇತ್ರದ ಎಲ್ಲಾ ನೌಕರರ ಜತೆ ಜಂಟಿ ಕಾರ್ಯಕ್ರಮ ಹಮ್ಮಿಕೊಳ್ಳಲು ಆಲುಉಣಆ ನಿರ್ಧರಿಸಿವೆ.

AIIEA ಒಂದು ಹೇಳಿಕೆಯಲ್ಲಿ ಅರ್ಥಮಂತ್ರಿ ಯಶವಂತಾ ಸಿನ್ಹಾ ವಾಶಿಂಗ್‌ಟನ್‌ನಲ್ಲಿ ವಿಮಾ ನೌಕರರ ಬಗ್ಗೆ ಮಾಡಿದ ಟಿಪ್ಪಣಿಯನ್ನು ಕಟುವಾಗಿ ಟೀಕಿಸಿವೆ. ವಿಮಾ ನೌಕರರನ್ನ 'ನೋಡಿಕೊಳ್ಳಲಾಗಿದೆ' ಎಂದು ಸಿನ್ಹಾ ಹೇಳಿದ್ದ ಎಂದು ವರದಿಯಾಗಿದೆ. ವಿಮಾ ನೌಕರರ ಚಳುವ ಐಕ್ಯತೆಯಿಂದಿದೆ ಹಾಗೂ ಬಲಶಾಲಿಯಾಗಿದೆ ಅದನ್ನು 'ನೋಡಿಕೊಳ್ಳುವುದು' ಅಷ್ಟು ಸುಲಭವಲ್ಲ ವಿಮಾ ನೌಕರರ ಚಳುವಳಿಯನ್ನು ರಾಜ ಗೊಳಿಸಲಾಗಿದೆ, ಗೆದ್ದುಕೊಳ್ಳಲಾಗಿದೆ ಎಂದು ಸಿನ್ ತಮ್ಮ ವಾಶಿಂಗ್‌ಟನ್ ಧಣಿಗಳಿಗೆ ಹೇ ಬಯಸುತ್ತಾರೆ. ಆದರೆ ಅದಕ್ಕೆ ಪ್ರಯತ್ನ ಮಾಡು ತಾಕತ್ತೂ ಸಿನ್ಹಾರಿಗಿಲ್ಲ - ಅದನ್ನು ಸಾಧಿಸುವುದ ಒತ್ತಟ್ಟಿಗಿರಲಿ - ಎಂದು AIIEA ಪ್ರಕಟಣೆ ಹೇಳಿದ



ವಿಮಾ ಖಾಸಗೀಕರಣ ವಿರುದ್ಧ ಒಂದೂವರೇ ಕೋಟಿ ಸಹಿ ಇರುವ ಮನವಿ ಪತ್ರಗಳ ಚೀಲಗಳ ಪ್ರದರ್ಶನ

# ವಿಮಾ ಕ್ಷೇತ್ರವನ್ನು ವಿದೇಶಿಯರಿಗೆ ಒತ್ತೆ ಇಡುವ ಮಸೂದೆಗೆ ವ್ಯಾಪಕ ವಿರೋಧ

ವಿಮಾ ಕ್ಷೇತ್ರವನ್ನು ವಿದೇಶಿಯರಿಗೆ ಒತ್ತೆ ಇಡುವ ವಿಮಾ ನಿಯಂತ್ರಣ ಮತ್ತು ಬೆಳವಣಿಗೆ ಮಸೂದೆ 1999 ನ್ನು ಬಿಜೆಪಿ ಸರ್ಕಾರ ಪಾರ್ಲಿಮೆಂಟಿನಲ್ಲಿ ಎಡಪಕ್ಷಗಳ ನಾಯಕತ್ವದಲ್ಲಿ ಕಾಂಗ್ರೆಸ್ಸೇತರ ವಿರೋಧ ಪಕ್ಷಗಳ ತೀವ್ರ ವಿರೋಧವನ್ನು ಲೆಕ್ಕಿಸದೆ ಪಾರ್ಲಿಮೆಂಟಿನಲ್ಲಿ ಮಂಡಿಸಿದೆ. ಬೋಫೋರ್ಸ್ ಚಾರ್ಜ್‌ಶೀಟ್‌ನಲ್ಲಿ ರಾಜೀವ ಗಾಂಧಿಯನ್ನು ಹೆಸರಿಸಿದ್ದರಿಂದ ಕಾಂಗ್ರೆಸ್ ಈ ಮಸೂದೆಯನ್ನು ಮಂಡಿಸುವುದರಲ್ಲಿ ಬಿಜೆಪಿ ಸರ್ಕಾರದೊಂದಿಗೆ ಸಹಕರಿಸುವುದಿಲ್ಲ ಎಂಬ ವ್ಯಾಪಕ ನಿರೀಕ್ಷೆಯನ್ನು ಹುಸಿಮಾಡಿ, ದೇಶವನ್ನು ಒತ್ತೆಯಿಡುವಲ್ಲಿ ಎರಡೂ ಪಕ್ಷಗಳಲ್ಲಿ ಯಾವ ವ್ಯತ್ಯಾಸ ಇರದಿರುವುದನ್ನು ಪುನಃ ತೋರಿಸಿಕೊಟ್ಟಿದೆ.

ಮಸೂದೆಯನ್ನು ಮಂಡಿಸುವ ಮೊದಲೇ ಪಾರ್ಲಿಮೆಂಟಿನಲ್ಲಿ ಒಂದುವರೆ ಗಂಟೆಗಳ ಕಾಲ ತೀವ್ರ ಚರ್ಚೆಯಾಯಿತು. ಮಸೂದೆಯನ್ನು ವಿರೋಧಿಸಿ ಒಂದುವರೆ ಕೋಟಿ ಜನ ಸಹಿ ಹಾಕಿದ ಅರ್ಜಿಯನ್ನು ಮಸೂದೆಗಿಂತ ಮೊದಲು ಪಾರ್ಲಿಮೆಂಟು ಚರ್ಚಿಸಬೇಕು ಎಂದು ಎಡಪಕ್ಷಗಳು ಸೇರಿದಂತೆ ಕಾಂಗ್ರೆಸ್ಸೇತರ ವಿರೋಧ ಪಕ್ಷಗಳ ನಾಯಕರು ತೀವ್ರವಾಗಿ ಆಗ್ರಹಿಸಿದರು. ಅದನ್ನು ಸ್ಪೀಕರ್ ತಿರಸ್ಕರಿಸಿ, ಕಾಂಗ್ರೆಸ್ ಬೆಂಬಲದಿಂದ ಮಸೂದೆಯನ್ನು ಮಂಡಿಸಿದಾಗ, ಕಾಂಗ್ರೆಸ್ಸೇತರ ವಿರೋಧ ಪಕ್ಷಗಳ ಸದಸ್ಯರು ಸಭಾತ್ಯಾಗ ನಡೆಸಿ ಪ್ರತಿಭಟಿಸಿದರು.

ಆಮೇಲೆ ಮಾತನಾಡುತ್ತಾ ಸಿಪಿಐ(ಎಂ) ನಾಯಕ ಸೋಮನಾಥ ಚಟರ್ಜಿ ಬಿಜೆಪಿಯನ್ನು ಸಂದರ್ಭಕ್ಕೆ ತಕ್ಕಂತೆ ಬಣ್ಣ ಬದಲಾಯಿಸುವ ಊಸುರುವಳ್ಳಿಗೆ ಹೋಲಿಸಿದರು. 1997 ರಲ್ಲಿ ಸಂಯುಕ್ತ ರಂಗ ಸರ್ಕಾರ ಮಂಡಿಸಿದ ವಿಮಾ ಮಸೂದೆಯನ್ನು ವಿರೋಧಿಸಿದ್ದ ಬಿಜೆಪಿ, ತನ್ನ 1998 ರ ಚುನಾವಣಾ ಘೋಷಣಾ ಪತ್ರದಲ್ಲಿ ವಿಮಾ ಕ್ಷೇತ್ರವನ್ನು ವಿದೇಶಿಕಂಪನಿಗಳಿಗೆ ತೆರೆಯುವುದನ್ನು ವಿರೋಧಿಸಿತ್ತು, ಈಗ ಬ ಬದಲಾಯಿಸಿ ಇತರ ಆದ್ಯತೆಯ ವಿಚಾರ ಗಮನಕೊಡುವುದು ಬಿಟ್ಟು, ವಿಮಾ ಕ್ಷೇತ್ರವನ ವಿದೇಶಿಗಳಿಗೆ ಒತ್ತೆ ಯಿಡುವುದನ್ನು ತನ್ನ ಮೊದ ಆದ್ಯತೆಯಾಗಿಸಿಕೊಂಡಿದೆ.

ಸಿಪಿಐ(ಎಂ)ನ ಸೋಮನಾಥ ಚಟರ್ಜಿ ರೂಪಚಂದ್ ಪಾಲ್, ಸರಳಾಮಾಹೇಶ್ವರಿ, ಸಿಪಿಐ ಗೀತಾ ಮುಖರ್ಜಿ, ಸಮಾಜವಾದಿ ಪಾರ್ಟಿ ಮುಲಾಯಂ ಸಿಂಗ್ ಯಾದವ್, ಆರ್‌ಜೆಡಿ ರಘುವಂಶ ಸಿಂಗ್ ಯಾದವ್ ವಿಮಾ ಮಸೂ ವಿದೇಶಿಯರಿಗೆ ಒತ್ತೆ ಇಡುವ ಕ್ರಮ ಎಂ ವಿರೋಧಿಸಿದರು. ವಿಮಾ ಕ್ಷೇತ್ರ ಸಾರ್ವಜನಿಕ ಕ್ಷೇತ್ರದ ಉತ್ತಮವಾಗಿ ನಡೆಯುತ್ತಿದೆ, 1956 ರಲ್ಲಿ ಕೇವಲ ಕೋಟಿ ರೂ. ಬಂಡವಾಳ ಹಾಕಿದ ಎಲ್‌ಐಸಿ ಇಂ 105 ಲಕ್ಷ ಕೋಟಿ ರೂ. ಬಂಡವಾಳ ಹೊಂದಿದೆ. ಬಂಡವಾಳವನ್ನು ಗುಳುಂ ಮಾಡಲು ವಿದೇಶಿ ವಿಮ ಕಂಪನಿಗಳ ತರಾತುರಿ ಅರ್ಥವಾಗುವಂತಹದು. ಉ ತಂತ್ರಜ್ಞಾನ ಇಲ್ಲದ, ವಿಶೇಷ ವಿದೇಶಿ ಪರಿಣತೆಯ ಅ ಇಲ್ಲದ ಈ ಉದ್ದಿಮೆಯನ್ನು ಖಾಸಗೀಕರಿಸುವ, ವಿದೇ ಕಂಪನಿಗಳಿಗೆ ತೆರೆಯುವುದರಲ್ಲಿ ಬಿಜೆಪಿ ಸರ್ಕಾರ ತರಾತುರಿಯನ್ನು ಸದಸ್ಯರು ಪ್ರಶ್ನಿಸಿದರು. ಸಾಮಾ ಜವಾಬ್ದಾರಿಯನ್ನು ನಿರ್ವಹಿಸುತ್ತದೆ ಎನ್ನುವುದ ಪ್ರಶ್ನಿಸಿದ ಸದಸ್ಯರು ಅಮೆರಿಕದಲ್ಲಿ ಪ್ರತಿತಿಂಗಳು ಒ ಜೀವವಿಮಾ ಕಂಪನಿ ದೀವಾಳಿಯಾಗುತ್ತಿರುವುದ ಎತ್ತಿ ತೋರಿಸಿದರು. ಅಲ್ಲಿ ಹಲವು ಕಂಪನಿಗಳ ಮ ಪೈಪೋಟಿ ಇರುವುದು ನಿಜವಲ್ಲ ಎಂದು ಅ ಸಂಖ್ಯೆಗಳ ಜತೆ ವಿವರಿಸಿದರು.(ಶೇಕಡಾ 6 ರ ವಿಮಾ ಕಂಪನಿಗಳು ಶೇಕಡಾ 95 ವಿಮಾ ಕ್ಷೇತ್ರ ವಹಿವಾಟು ನಡೆಸುತ್ತವೆ) ನಮ್ಮ ಮೇಲೆ ವಿಮ ಕ್ಷೇತ್ರದಲ್ಲಿ ತೆರೆಯುವುದರ ಬಗ್ಗೆ ಒತ್ತಡ ಹಾಕುತ್ತಿರ ದೇಶಗಳಲ್ಲೇ, ವಿದೇಶಿ ಕಂಪನಿಗಳಿಗೆ ತೆರೆದಿಲ್ಲ ವಿ ಕ್ಷೇತರ ಎಂದರು(ಅಮೆರಿಕ, ಜಪಾನ್‌ಗಳಲ್ಲಿ ಕೇವ ಶೇಕಡಾ 3 ರಷ್ಟು ಬ್ರಿಟನ್, ಫ್ರಾನ್ಸ್, ಸ್ವಿಜರ್‌ಲ್ಯಾಂ ಗಳಲ್ಲಿ ಕೇವಲ ಶೇಕಡಾ 5 ರಷ್ಟು ವಿಮಾ ವಹಿವಾ ವಿದೇಶಿ ವಿಮಾ ಕಂಪನಿಗಳ ಕೈಯಲ್ಲಿದೆ.

## ವಾಜಪೇಯಿ- ಯಶವಂತ ಸಿನ್ಹರ ಭೂತ ದಹನ

ಲಾಭದಾಯಕ ಜೀವ ವಿಮ ನಿಗಮವನ್ನು ವಿದೇಶಿ ಕಂಪನಿಗಳಿಗೆ ತೆರೆಯುವ ಕೇಂದ್ರ ಸರ್ಕಾರದ ಸ್ವದೇಶಿ ವಿರೋಧಿ ನೀತಿ ಖಂಡಿಸಿ ಕರ್ನಾಟಕದ್ಯಾಂತ ವಿಮಾ ನೌಕರರು ಯಶಸ್ವಿ ಪ್ರತಿಭಟನೆ ನಡೆಸಿದರು.

**ಬೆಂಗಳೂರು:** ಜೆ.ಸಿ. ರಸ್ತೆಯ ಜೀವ ವಿಮಾ ನಿಗಮ ಕಛೇರಿ ಮುಂದೆ ಪ್ರತಿಭಟನಾ ಪ್ರದರ್ಶನ ನಡೆಸಿದ ನೌಕರರು, ಮಹಾತ್ಮಗಾಂಧಿ ಪ್ರತಿಮೆ ವರೆಗೆ ಬೃಹತ್ ಮೆರವಣಿಗೆ ನಡೆಸಿ, ಕೇಂದ್ರ ಸರ್ಕಾರ ಕೂಡಲೇ ಈ ಕರಾಳ ಮಸೂದೆಯನ್ನು ಹಿಂದೆ ಪಡೆಯುವಂತೆ ಆಗ್ರಹಿಸಿ ಘೋಷಣೆ ಕೂಗುತ್ತಿದ್ದರು. ಕೆ.ವಿ. ಶ್ರೀನಿವಾಸನ್ ಹಾಗೂ ಬಸವರಾಜ್ ಮೆರವಣಿಗೆಯ ಮಂಚೂಣಿಯಲ್ಲಿದ್ದರು.



ಈ ಪ್ರತಿಭಟನಾ ಸಭೆಯನ್ನುದ್ದೇಶಿಸ್ ಸಿಪಿಐ(ಎಂ) ನ ವಿ.ಜೆ.ಕೆ.ನಾಯರ್ ಸಿಪಿಐನ ವೆಂಕಟರಾಮ್, ಅನಂತ ಸುಬ್ಬರಾವ್ ಹಮನುಲ್ಲಾ ಖಾನ್, ಎಂ. ಚಂದನ್ , ಬಾಲಕೃಷ್ಣ ಮತ್ತು ಭಗವಾನ್ ಮೊದಲಾದವರು ಮಾತನಾಡಿ ಕೇಂದ್ರ ಸರ್ಕಾರ ಈ ಮಸೂದೆಯನ್ನು ಹಿಂದೆ ಪಡೆಯುವಂತೆ ಆಗ್ರಹಿಸಿದರು.

ಪ್ರತಿ ಭಟನೆಯಲ್ಲಿ AIIEA ಸೇರಿದಂತೆ ಕ್ಲಾಸ್ ಗ ಅಧಿಕಾರಿಗಳ ಸಂಘ, ಅಖಿಲ ಭಾರತ LIC ಎಂಪ್ಲಾಯಿಸ್ ಫೆಡರೇಷನ್, LIC ಅಭಿವೃದ್ಧಿ ಅಧಿಕಾರಿಗಳ ಸಂಘಟನೆ, ಸಾಮಾನ್ಯ ವಿಮಾ ನೌಕರರ ಸಂಘ ಸೇರಿದಂತೆ ಎಲ್ಲ ನೌಕರರು ಪಾಲ್ಗೊಂಡರು.


**ರಾಯಚೂರು:** ನಿತ್ಯ ಲಾಭದಾಯಕವಾಗಿರುವ ಜೀವಾ ವಿಮಾ ನಿಗಮವನ್ನು ವಿದೇಶಿ ಕಂಪನಿಗಳಿಗೆ ತೆರೆದಿಡುವ ಹುನ್ನಾರ ನಡೆಸಿರುವ ಹಣಕಾಸು ಸಚಿವ ಯಶವಂತಸಿನ್ಹಾ- ಪ್ರದಾನಿ ವಾಜಪೇಯಿ ಜೋಡಿ ಭೂತದಹನ ನಡೆಸಿ ಪ್ರತಿಭಟನೆ ವ್ಯಕ್ತಪಡಿಸಿದರು. ಉಡುಪಿ, ಮಂಗಳೂರು, ಮೈಸೂರು, ಧಾರವಾಡ, ಬೆಳಗಾಂ ಮತ್ತು ತುಮಕೂರು ಸೇರಿದಂತೆ ರಾಜ್ಯದೆಲ್ಲಡೆ ಪ್ರತಿಭಟನೆ ವ್ಯಕ್ತಗೊಂಡ ಬಗ್ಗೆ ವರದಿಯಾಗಿದೆ.

# ಬಾಬಾಬುಡಾನ್ ಗಿರಿಯಲ್ಲಿ ಮತ್ತೊಂದು ಅನಗತ್ಯ ವಿವಾದ

ಬಾಬಾಬುಡಾನ್‌ಗಿರಿ ಮತ್ತೆ ಸುದ್ದಿಯಲ್ಲಿದೆ. ನೂರಾರು ವರ್ಷಗಳಿಂದ ಹಿಂದೂ ಹಾಗೂ ಮುಸಲ್ಮಾನ ಕೋಮಿನ ಜನ ಯಾವುದೇ ಬೇದಭಾವವಿಲ್ಲದೆ ಗೌರವಿಸಿಕೊಂಡು ಬಂದ ಕ್ಷೇತ್ರ, ಇಲ್ಲಿ ಬೀಸುವ ಗಾಳಿಯಲ್ಲಿ, ಹರಿವ ನೀರಿನಲ್ಲಿ, ಹರಡಿರುವ ಹಸಿರಿನಲ್ಲಿ ಭಾವೈಕ್ಯತೆಯೇ ತುಂಬಿಕೊಂಡಿತ್ತು. ಆದರೆ ಶಾಂತಿಯ ಶತ್ರುಗಳು ಕಳೆದ ಒಂದೆರಡು ವರ್ಷಗಳಿಂದ ಇಲ್ಲಿಗೂ ಲಗ್ಗೆಯಿಟ್ಟು ಇಲ್ಲೊಂದು ನರಕವನ್ನು ಸೃಷ್ಟಿಸಲು ಹೊರಟಿವೆ.

**ಕಳೆದ ವರ್ಷ ದತ್ತ ಜಯಂತಿಯ ಸಂದರ್ಭದಲ್ಲಿ ದತ್ತ ಪೀಠವನ್ನು ವಿಮೋಚನೆ ಮಾಡುವ ಹೆಸರಿನಲ್ಲಿ ಬಾಬಾಬುಡಾನ್ ಗಿರಿಯನ್ನು ಕೋಮುದಳ್ಳುರಿಗೆ ತಳ್ಳುವ ಪ್ರಯತ್ನ ನಡೆಯಿತು. ರಾಜ್ಯದ ಕೆಲವು ಮೂಲೆಗಳಿಂದ ರಥಯಾತ್ರೆಗಳನ್ನು ಸಂಘಟಿಸಿ ಅವುಗಳು ಬಾಬಾಬುಡಾನ್ ಗಿರಿಯಲ್ಲಿ ಸಂಧಿಸುವ ದಿನ ಸೇರುವ ಲಕ್ಷಾಂತರ ಜನರನ್ನು ಬಳಸಿಕೊಂಡು ಕ್ಷೇತ್ರವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವ ಯೋಜನೆಯಿತ್ತು. ಭಜರಂಗದಳ ಮತ್ತಿತರ ಹಿಂದೂ ಸಂಘಟನೆಗಳ ಈ ಯೋಜನೆಗೆ ಜನ ಬೆಂಬಲ ದೊರೆಯಲಿಲ್ಲ. ಆನಂತರ ಜರುಗಿದ ದತ್ತ ಜಯಂತಿ ಹಾಗೂ ಉರುಸ್ ಸಂದರ್ಭಗಳಲ್ಲೂ ಸಹ ಯಾವುದೇ ಅಹಿತಕರ ಘಟನೆಗಳು ನಡೆಯಲಿಲ್ಲ.**

ಚಿಕ್ಕಮಗಳೂರಿನಲ್ಲಿ ಬಿಜೆಪಿ ಮತ್ತು ಭಜರಂಗ ದಳ ಕಾರ್ಯಕರ್ತರು ಅಕ್ಟೋಬರ್ 25 ರಂದು ಅಂಗಡಿಗಳನ್ನು ಮುಚ್ಚಿಸಿ ರಸ್ತೆ ತಡೆ ಮಾಡಿದರು



ಬಾಬಾಬುಡಾನ್ ಗಿರಿ ಪೀಠದ ವಿವಾದಕ್ಕೆ ಇದೀಗ ಮತ್ತೆ ಚಾಲನೆ ಸಿಕ್ಕಿದೆ. ಇಲ್ಲಿನ ದರ್ಗಾದ ಆಡಳಿತಾಧಿಕಾರಿ ಸೈಯ್ಯದ್ ಪೀರ್ ಮೊಹಮ್ಮದ್ ಶಾಖಾದ್ರಿ ಅವರು ತೀವ್ರ ಅಸ್ವಸ್ಥರಾಗಿ ಅಕ್ಟೋಬರ್ 25 ರಂದು ಬೆಳಿಗ್ಗೆ ಖಾಸಗಿ ಆಸ್ಪತ್ರೆಯೊಂದರಲ್ಲಿ ಅಸುನೀಗಿದರು. ಪರಂಪರಾಗತ ಪದ್ಧತಿಯ ಪ್ರಕಾರ ಅವರ ಶವಸಂಸ್ಕಾರವನ್ನು ದರ್ಗಾದ ಆವರಣದಲ್ಲೇ ನಡೆಸಲು ಅವರ ಬಂಧುಗಳು ಸಿದ್ಧತೆ ನಡೆಸಿದರು. 1943 ರಲ್ಲಿ ಹಿಂದಿನ ಶಾಖಾದ್ರಿಯವರು ಸತ್ತಾಗಲೂ ಅವರನ್ನು ಅಲ್ಲಿಯೇ ಹೂಳಲಾಗಿತ್ತು. ಮುಜರಾಯಿ ಆಯುಕ್ತರ ಶಿಫಾರಸು ಹಾಗೂ ಸರ್ಕಾರದ ನಿರ್ದೇಶನದಂತೆ ಜಿಲ್ಲಾಧಿಕಾರಿಗಳು ಶವಸಂಸ್ಕಾರಕ್ಕೆ ಜಿಲ್ಲಾಧಿಕಾರಿ ಅನುಮತಿ ನೀಡಿದ್ದರು. ಬಿಗಿ ಭದ್ರತೆಯಲ್ಲಿ ದರ್ಗಾದ ಆವರಣದಲ್ಲೇ ಶವಸಂಸ್ಕಾರ ನೆರವೇರಿತು. ಬಜರಂಗದಳ ಹಾಗೂ ವಿಶ್ವ ಹಿಂದೂ ಪರಿಷತ್ತಿನ ಕಾರ್ಯಕರ್ತರಿಗೆ ಈ ವಿಷಯ ತಿಳಿದ ಕೂಡಲೇ ಹಠಾತ್ತಾಗಿ ಅವರು ಚಿಕ್ಕಮಂಗಳೂರು ನಗರ ಬಂದ್‌ಗೆ ಕರೆ ನೀಡಿದರು. ನಗರದಲ್ಲಿ ಮೆರವಣಿಗೆ ಹೊರಡಿಸಿ ಅಂಗಡಿಗಳನ್ನು ಮುಚ್ಚಿಸಲಾಯಿತು. ನಗರದ ಬಸ್ ನಿಲ್ದಾಣದ ಬಳಿ ಪ್ರತಿಭಟನಾ ಸಭೆ ನಡೆಸಿ ರಸ್ತೆ ತಡೆ ಮಾಡಲಾಯಿತು. ನಗರದಲ್ಲಿ ವಾತಾವರಣ ಪ್ರಕ್ಷುಬ್ಧಗೊಳಲಾಂಭಿಸಿದಾಗ ಪೋಲೀಸರು ಮಧ್ಯೆ ಪ್ರವೇಶಿಸಿ ಸುಮಾರು 65 ಮಂದಿ ಪ್ರತಿಭಟನಾಕಾರರನ್ನು ವಶಕ್ಕೆ ತೆಗೆದುಕೊಂಡರು. ಅಲ್ಲಿಂದ ಪರಿಸ್ಥಿತಿ ನಿಯಂತ್ರಣಕ್ಕೆ ಬಂದು ಯಾವುದೇ ಅಹಿತಕರ ಘಟನೆಗಳು ಸಂಭವಿಸಲಿಲ್ಲ. ಆದಾಗ್ಯೂ ಹೊತ್ತಿಸಲಾದ ಬೆಂಕಿ ಆರದಂತೆ ನುಣಚಿಕೊಳ್ಳಲು ಜಿಲ್ಲೆಯ ಬೇರೆ ಬೇರೆ ಕಡೆಗಳಲ್ಲಿ ಬಂದ್ ಮೊದಲಾದ ಪ್ರದರ್ಶನಗಳನ್ನು ಬಿಜೆಪಿ ಬಳಗದವರು ನಡೆಸುತ್ತಾ ಇದ್ದಾರೆ. ಮೃತ ಶಾಖಾದ್ರಿಯ ಪುತ್ರನನ್ನು ಆಡಳಿತಾಧಿಕಾರಿಯಾಗಿ ನೇಮಿಸುವುದನ್ನು ಸಂಘಪರಿವಾರದ ಸಂಘಟನೆಗಳು ವಿರೋಧಿಸುತ್ತಿವೆ. ಶಾಖಾದ್ರಿ ಅವರು ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಸರ್ಕಾರಕ್ಕೆ ಮನವಿ ಸಲ್ಲಿಸಿ ತನ್ನ ಮಗನನ್ನು ಮುಂದಿನ ಉತ್ತರಾಧಿಕಾರಿಯಾಗಿ ನೇಮಿಸಬೇಕೆಂದು ಕೋರಿದ್ದರು.

**ಕೋಮುವಾದಿ ಶಕ್ತಿಗಳಿಗೆ ಇಲ್ಲಿ ಶಾಂತಿಯನ್ನು ಕದಡಲು ಇನ್ನೊಂದು ಅವಕಾಶ ಸಿಕ್ಕಿರುವುದು ಆತಂಕದ ವಿಷಯವಾಗಿದೆ. ಸಂಘ ಪರಿವಾರದವರ ಯೋಜನೆಗಳ ಆಪಾಯವನ್ನು ಕಡೆಗಣಿಸುವಂತಿಲ್ಲ. ವಾಜಪೇಯಿ ನೇತೃತ್ವದ, ಸರ್ಕಾರ ಕೇಂದ್ರದಲ್ಲಿ ಅದಿಕಾರಕ್ಕೆ ಬಂದದ್ದು. ಈ ಶಕ್ತಿಗಳಿಗೆ ಕುಮ್ಮಕ್ಕು ನೀಡಿದೆ. ರಾಜ್ಯದಲ್ಲಿ ಜನತೆ ಕೋಮುವಾದಿ ಶಕ್ತಿಗಳನ್ನು ನಿರ್ಣಾಯಕವಾಗಿ ತಿರಸ್ಕರಿಸಿ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತಂದಿದೆ. ಆದ್ದರಿಂದ ಕೋಮುವಾದಿ ಶಕ್ತಿಗಳನ್ನು ನಿಯಂತ್ರಿಸಿ ರಾಜ್ಯದಲ್ಲಿ ಜನ ನೆಮ್ಮದಿಯಿಂದ ಬದುಕುವಂತೆ ಮಾಡಲು ರಾಜ್ಯ ಸರ್ಕಾರ ಎಲ್ಲ ನೈತಿಕ ಮತ್ತು ಕಾನೂನುದತ್ತ ಅಧಿಕಾರವನ್ನು ಬಳಸಿಕೊಂಡು ಈ ಅನುಚಿತ ಬೆಳವಣಿಗೆಯನ್ನು ಹತ್ತಿಕ್ಕುವ ಕರ್ತವ್ಯವನ್ನು ನಿರ್ದಾಕ್ಷಣ್ಯವಾಗಿ ನಿರ್ವಹಿಸುವಂತಾಬೇಕು.**

- ನಿತ್ಯಾನಂದಸ್ವಾಮಿ

# ಬಡಿದಾಡಿಕೊಂಡ ಬಿಜೆಪಿ

ಅಂದೊಂದು ದಿನ......

ರಾಜ್ಯ ಬಿಜೆಪಿ ಕಛೇರಿಯಲ್ಲಿ ಹೊಸದಾಗಿ ಚುನಾಯಿತರಾಗಿರುವ ಶಾಸಕರ ಸಭೆ. ವೇದಿಕೆಯಲ್ಲಿ ಚಿಚುಷ್ಕೋಟಿ ಕನ್ನಡಿಗರ ಭಾವಿ ಮುಖ್ಯಮಂತ್ರಿ ಎಂದು ಸ್ವಯಂ ಘೋಷಿಸಿಕೊಂಡಿದ್ದ ಈಗ ಸೋತು ಸುಣ್ಣವಾಗಿರುವ ಯಡಿಯೂರಪ್ಪ, ಈಶ್ವರಪ್ಪ, ಕರ್ನಾಟಕ ಬಿಜೆಪಿ ಉಸ್ತುವಾರಿ ನೋಡಿಕೊಳ್ಳುವ ವೆಂಕಯ್ಯನಾಯ್ಡು ಇತರರು ಆಸೀನರಾಗಿದ್ದರು.

ಶಾಸಕಾಂಗ ಪಕ್ಷದ ಸಭೆಯಲ್ಲಿ ಮಾತನಾಡಲು ಯಡಿಯೂರಪ್ಪಗೆ ಅವಕಾಶ ಸಿಕ್ಕಿದ್ದೆ ತಡ.. ಹೊಸ ಚುನಾಯಿತ ಕಾಂಗ್ರೆಸ್ (ಐ) ಸರ್ಕಾರದ ವಿರುದ್ಧ, ಮುಖ್ಯಮಂತ್ರಿ ಕೃಷ್ಣರವರು ಸಂಪುಟ ರಚಿಸಲು ಮಾಡುತ್ತಿರುವ ಕಸರತ್ತು, ಗೊಂದಲ, ಇತ್ಯಾದಿಗಳ ಬಗ್ಗೆ ಸಭೆಯಲ್ಲಿ ವಾಗ್ದಾಳಿಯನ್ನೇ ಪುಂಖಾನುಪುಂಖವಾಗಿ ಹರಿಸತೊಡಗಿದರು.

ಈ ಮಧ್ಯ ಬಿಜೆಪಿ ಶಾಸಕರ ಕಡೆಯಿಂದ ಒಂದು ಕೂಗು ಕೇಳಿತು. "ಕಾಂಗ್ರೆಸ್ ಪಕ್ಷದ ಇತಿಹಾಸ ಎಲ್ಲರಿಗೂ ಗೊತ್ತಿರುವಂತಿದ್ದು, 42 ಶಾಸಕರನ್ನು ಹೊಂದಿರುವ ನಮ್ಮ ಪಕ್ಷದಲ್ಲಿ ಇಲ್ಲಿಯವರೆಗೂ ತನ್ನ ನಾಯಕನನ್ನು ಆಯ್ಕೆ ಮಾಡಿಕೊಳ್ಳಲು ಹೆಣಗಾಡುತ್ತಿರುವುದೇಕೆ?, ಮೊದಲು ಇದಕ್ಕೆ ಉತ್ತರಿಸಿ'' ಇನ್ನೂ ಹಲವು ಶಾಸಕರು ಧ್ವನಿಗೂಡಿಸಿದರು.

ಶಿಸ್ತಿನ ಪಕ್ಷವೆಂದು ಬಡಾಯಿಕೊಚ್ಚಿಕೊಳ್ಳುತ್ತಿದ್ದ ಬಿಜೆಪಿ, ಎಷ್ಟೇ ತನ್ನ ಒಳಮೈ ಮುಚ್ಚಿಕೊಳ್ಳಲು ಪ್ರಯತ್ನಿಸುತ್ತಿದ್ದರೂ... ಅಕ್ಟೋಬರ್ 24 ರ ಸಭೆಯಲ್ಲಿ ಅದು ಬಹಿರಂಗವಾಯಿತು. ಆ ದಿನ ರಾಜ್ಯ ಬಿಜೆಪಿ ಕಛೇರಿಯಲ್ಲಿ ಎರಡು ಗುಂಪುಗಳ ನಡುವೆ ಮಾರಾಮಾರಿ, ಕಲ್ಲುತೂರಾಟ, ಮುತ್ತಿಗೆ... ಬಾಗಿಲು-ಕಿಟಕಿಗಳನ್ನೂ ಮುರಿದು ಸುತ್ತಮುತ್ತಲಿನ ವಾಹನಗಳು, ಕಟ್ಟಡಗಳನ್ನು ಜಖಂ ಮಾಡಿದ್ದು, ಕೊನೆಗೂ ಪೋಲೀಸರು ಮಧ್ಯೆ ಪ್ರವೇಶಿಸಿ- ಪರಿಸ್ಥಿತಿಯನ್ನು ಹತೋಟಿಗೆ ತಂದಿದ್ದು, ಮಾಜಿ ಬಿಜೆಪಿ ಅಧ್ಯಕ್ಷ ಬಿ. ಬಿ. ಶಿವಪ್ಪ, ಹಾಲಿ ರಾಜ್ಯ ಅಧ್ಯಕ್ಷ ಯಡಿಯೂರಪ್ಪ, ಗುಂಪುಗಳ ಆರೋಪ-ಪ್ರತ್ಯಾರೋಪಗಳು ನಿರಂತರವಾಗಿ ನಡೆದು- ಮಾರನೆ ದಿನ ರಾಜ್ಯದ ಜನತೆಗೆ- ಬಿಜೆಪಿಯ ನಗ್ನತೆ ಪತ್ರಿಕೆಗಳ ಮೂಲಕ ಜಗಜ್ಜಾಹೀರಾಗೊಂಡಿತು.

ಕೇವಲ-44 ಶಾಸಕರನ್ನು ಹೊಂದಿ ತನ್ನ ನಾಯಕನ್ನು ಆಯ್ಕೆ ಮಾಡಿಕೊಳ್ಳಲು ಬಿಜೆಪಿ ನಡೆಸಿದ ಕಸರತ್ತು ಇದು. ಬಹುಶಃ ಬಹುಮತ ಪಡೆದು ಅಧಿಕಾರಕ್ಕೆ ಬಿಜೆಪಿಯವರು ಬಂದಿದ್ದರೆ ಪರಿಸ್ಥಿತಿ ಹೇಗಿರುತ್ತಿತ್ತು.

ಇದನ್ನು ಕರ್ನಾಟಕದ ಪ್ರಜ್ಞಾವಂತ ಜನರು ಈಗಾಗಲೇ ಕಲ್ಪನೆ ಮಾಡಿಕೊಂಡಿರಬಹುದೇನೋ?

ಅಧಿಕಾರದ ಪ್ರಶ್ನೆ ಬಂದಾಗ- ನಾವೇನು ಕಾಂಗ್ರೆಸ್ ಸಂಸ್ಕೃತಿ ಗಿಂತ ಭಿನ್ನವೇನಲ್ಲ... ಎಂತಹುದೇ ಕೀಳು ರಾಜಕೀಯ ಮಾಡಲು ಹಿಂದೆ ಸರಿಯುವವರಲ್ಲ ಎಂಬುದನ್ನು ಈಗಾಗಲೇ ಬಿಜೆಪಿ ಗುಜರಾತ್, ರಾಜಸ್ಥಾನ, ಹಿಮಾಚಲ ಪ್ರದೇಶ ಹಾಗೂ ಉತ್ತರ ಪ್ರದೇಶಗಳಲ್ಲಿ ಪ್ರದರ್ಶಿಸಿದೆ. ಆದರೆ ಕರ್ನಾಟಕದ ವೈಶಿಷ್ಟ್ಯವೆಂದರೆ ಅಧಿಕಾರಕ್ಕೆ ಬರುವ ಮುನ್ನವೇ, ರಾಜಕೀಯ ದೊಂಬರಾಟದ ಎಲ್ಲಾ ಘಟನೆಗಳು ಬಿಜೆಪಿಯಲ್ಲಿ ನಡೆದು ಹೋದವು.

ಹೀಗಾಗಿ, ಕಾಂಗ್ರೆಸ್(ಐ) ತನ್ನ ಅವನತಿಯ ಹಾದಿಯನ್ನು 40 ವರ್ಷಗಳ ನಂತರ ಹಿಡಿದರೆ... ಬಿಜೆಪಿ ಎಂಬ ಶಿಸ್ತಿನ ಪಕ್ಷಕ್ಕೆ ಕೆಲವೇ ವರ್ಷಗಳು ಮಾತ್ರ ಸಾಕಾದವು.

ಕರ್ನಾಟದಲ್ಲಂತೂ ತ್ರಿಮೂರ್ತಿಗಳದ್ದೆ ( ಯಡಿಯೂರಪ್ಪ, ಈಶ್ವರಪ್ಪ, ಅನಂತಕುಮಾರ್) ಕಾರುಬಾರು! ಇದು- ಬಿ.ಬಿ. ಶಿವಪ್ಪ ನವರು ಮಾಡಿರುವ ಗಂಭೀರ ಆಪಾದನೆ, ಶಾಸಕಾಂಗ ನಾಯಕನ ಆಯ್ಕೆಯ ಹಿಂದಿನ ದಿನವರೆಗೂ ಬಿ.ಬಿ. ಶಿವಪ್ಪನವರಿಗೆ 28 ಚುನಾಯಿತ ಶಾಸಕರ ಬೆಂಬಲವಿತ್ತಂತೆ. ಆದರೆ ಈ ತ್ರಿಮೂರ್ತಿಗಳು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ವೆಂಕಯ್ಯ ನಾಯ್ಡು, ನೇತೃತ್ವದಲ್ಲಿ ಷಡ್ಯಂತ್ರ ರೂಪಿಸಿ, ಅಶೋಕ,ಕಟ್ಟಾ ಮೊದಲಾದವರನ್ನು ಛೂ ಬಿಟ್ಟು, ರಾತ್ರೋ ರಾತ್ರಿ ಶಿವಪ್ಪ ನವರ ಬೆಂಬಲಿಗ ಶಾಸಕರನ್ನು ನಾಪತ್ತೆ ಮಾಡಿ, ಜಗದೀಶ ಶೆಟ್ಟರವರಿಗೆ, ಬೆಂಬಲಿಸುವಂತಹ ಒತ್ತಡವನ್ನುಂಟು ಮಾಡಿದರಂತೆ, ಅಷ್ಟು ಮಾತ್ರವಲ್ಲ. ಪರಿಸ್ಥಿತಿಯನ್ನು ಎದುರಿಸಲು, ರಾಜ್ಯ ಬಿಜೆಪಿ ಕಛೇರಿಯಲ್ಲಿ ಗೂಂಡಾಜನರ ಪಡೆಯನ್ನೇ- ಯಡಿಯೂರಪ್ಪ ಬೆಂಬಲಿಗರು ನಿಯೋಜಿಸಿದ್ದರಂತೆ!. ಹೇಗಿದೆ? ಬಿಜೆಪಿಯ ಭವ್ಯ ಸಂಸ್ಕೃತಿ ಪ್ರದರ್ಶನ!.

ಬಿಜೆಪಿಯ ಅಧಿಕಾರದ ರುಚಿ ಅನುಭವಿಸಿದ ಉತ್ತರ ಪ್ರದೇಶದ ಜನರು ಬಿಜೆಪಿಯನ್ನು ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಹೀನಾಯವಾಗಿ ಸೋಲಿಸಿದ್ದನ್ನು ನೆನಪಿಸಿಕೊಂಡರೆ ಒಳ್ಳೆಯದಲ್ಲವೇ?

ಒಟ್ಟಿನಲ್ಲಿ ಕಳೆದ ಹಲವಾರು ವರ್ಷಗಳಿಂದ ಬಿಜೆಪಿ ಯೊಳಗೆ ನಡೆಯುತ್ತಿದ್ದ ಶೀತಲ ಸಮರ, ಗುಂಪುಗಾರಿಕೆ, ಗರ್ಭಗುಡಿ ಸಂಸ್ಕೃತಿ ಹೊರಗೆ ಬಂದಿದೆ.

ಅಂಗ್ರೆಯೊಳಗಿನ ಹುಣ್ಣಿಗೆ ಕನ್ನಡಿ ಬೇಕೆ? ಈಗ ಕರ್ನಾಟಕದ ಬಿಜೆಪಿ ಸಂಪೂರ್ಣ ಒಡೆದ ಕನ್ನಡಿ ಮಾತ್ರ.


ಈಗ ಬಿ.ಬಿ. ಶಿವಪ್ಪ ನವರ ಹಾದಿ ಎತ್ತ ಕಡೆಗೆಂದು ಕಾದುನೋಡಬೇಕು.

**- ಮಹಾಂತೇಶ್**

ಡೀಸೆಲ್ ಬೆಲೆ ಏರಿಕೆ ವಿರುದ್ಧ ಅಕ್ಟೋಬರ್ 26 ರಂದು ಅಖಿಲ ಭಾರತ ಜನವಾದಿಮಹಿಳಾ ಸಂಘಟನೆಯ ಬೆಂಗಳೂರು ಜಿಲ್ಲಾ ಸಮಿತಿ ಕಾರ್ಯಕರ್ತೆಯರು ಮೈಸೂರು ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.



ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಭಾಗ-15

ಸ್ವಾತಂತ್ರ್ಯ ಗಳಿಸಿದ ನಂತರದ ಆರಂಭದಿನಗಳಲ್ಲಿಯೇ ಕಮ್ಯುನಿಸ್ಟ್ ಪಕ್ಷದ ಬೆಳವಣಿಗೆಯನ್ನು ತಡೆಯಲು ಎಲ್ಲ ಪ್ರಯತ್ನಗಳನ್ನು ನಡೆಸಲಾಯಿತು. ಅದರ ಭಾಗವಾಗಿ ಕಮ್ಯುನಿಸ್ಟ್ ಪಕ್ಷದ ಮೇಲೆ ಹಾಗೂ ಅದರ ಸದಸ್ಯರ ಮೇಲೆ ಸುಳ್ಳು ಮೊಕದ್ದಮೆಗಳನ್ನು ಹೂಡಿ ಕಿರುಕುಳ ನೀಡಲಾಯಿತು. ಈ ಸಂಚಿಕೆಯಲ್ಲಿ ಜ್ಯೋತಿಬಸು ಅವರು ಕಮ್ಯುನಿಸ್ಟ್ ಪಕ್ಷ ಹಾಗೂ ಅದರ ಸದಸ್ಯರ ಮೇಲಿನ ಇಂತಹ ಧಾಳಿಗಳನ್ನು ಕುರಿತು ಬರೆಯುತ್ತಾ ತಾವು ಮೊದಲ ಬಾರಿಗೆ ಈ ರೀತಿಯ ಸುಳ್ಳು ಮೊಕದ್ದಮೆಯಿಂದಾಗಿ ಕಾರಾಗೃಹ ಸೇರಿದ ಬಗ್ಗೆ ಬರೆದಿದ್ದಾರೆ.

# ಜ್ಯೋತಿ ಬಸು ಕಾರಾಗೃಹಕ್ಕೆ........

ನಾದ ಮೇಲೆ ಹೇಮ್-ಬಾಬು ಅವರನ್ನು ಪತ್ತೆ ಹಚ್ಚಲು ನನಗೆ ಆಗಲಿಲ್ಲ. ಅವರು ನನಗೆ ಕೆಲವು ಅಧಿಕೃತ ಮಾಹಿತಿ ಕೊಡಬಹುದಾಗಿತ್ತು. 1948ರ ಮಾರ್ಚ್ 26ರಂದು ನನ್ನ ಬಂಧನದ ಸಂದರ್ಭದಲ್ಲಿ ಸರಕಾರ ಪಕ್ಷವನ್ನು ನಿಷೇಧಿಸುವ ಬಗ್ಗೆ ಕಾರ್ಯ ಪ್ರವೃತ್ತರಾಗಿದ್ದನ್ನು ಒಂದು 'ಮೂಲ' ದೃಢಪಡಿಸಿತ್ತು. ಅಷ್ಟಲ್ಲದೆ ಯಾರ್‍ಯಾರನ್ನು ಬಂಧಿಸಬೇಕು ಎಂಬ ಪಟ್ಟಿಯನ್ನೂ ಸಿದ್ಧಪಡಿಸಿಯಾಗಿತ್ತು. ಅದನ್ನು ನಮ್ಮ ಉನ್ನತ ನಾಯಕರಿಗೆ ತಲುಪಿಸಲಾಯಿತು. ಕೆಲವು ಸದಸ್ಯರು ಭೂಗತರಾದರು. ಆದರೆ ಇದು ಅನಿರೀಕ್ಷಿತ ಕ್ರಮವಾದ್ದರಿಂದ ಹಾಗೂ ಸಾಕಷ್ಟು ಸಮಯ ಇಲ್ಲದ್ದರಿಂದ ನಮ್ಮಲ್ಲಿ ಬಹಳಷ್ಟು ಜನರು ಬಂಧಿತರಾದೆವು.

ನಾನು ಹಿಂದೂಸ್ತಾನ್ ಪಾರ್ಕ್‌ನಲ್ಲಿನ ನಮ್ಮ ಮನೆಯಲ್ಲಿದ್ದೆ. ಮಾರ್ಚ್ 26ರ ಮುಂಜಾನೆ ಪೊಲೀಸರು ಮನೆಯನ್ನು ಸುತ್ತುವರಿದರು. ನಾನಾಗ ನಿದ್ದೆ ಮಾಡುತ್ತಿದ್ದೆ. ವಾರಂಟಿನೊಂದಿಗೆ ಬಂದು ಪೊಲೀಸ್ ಅಧಿಕಾರಿಯೊಬ್ಬ ನನ್ನನ್ನು ಬಂಧಿಸಿ ಸ್ಪೆಷಲ್ ಬ್ರ್ಯಾಂಚ್ ಕಚೇರಿಗೆ ಕರೆದೊಯ್ದು ಅಲ್ಲಿ, ಬಂಧಿತರಾದ ಇತರ ಸಂಗಾತಿಗಳನ್ನು ನಾನು ನೋಡಿದೆ. ಹಿಂದಿನ ಬ್ರಿಟಿಷ್ ರಾಜ್ ಕಾನೂನಿನ ಪ್ರಕಾರ ನಮ್ಮ ಪಕ್ಷವನ್ನು ನಿಷೇಧಿಸಿರುವುದು ಈ ಕಚೇರಿಯಲ್ಲಿ ನನಗೆ ತಿಳಿದು ಬಂತು. ನಮ್ಮ ಪಕ್ಷದ ಕಚೇರಿ ಮೇಲೆ ದಾಳಿಮಾಡಿ ಬೀಗ ಹಾಕಲಾಯಿತು. 'ಸ್ವಾಧೀನತಾ' ಪ್ರಕಟಣೆ ನಿಂತಿತು. ಪಶ್ಚಿಮ ಬಂಗಾಳ ದಾದ್ಯಂತ ಸಾವಿರಾರು ಜನರನ್ನು ಬಂಧಿಸಲಾಯಿತು. ಅನೇಕ ವಾರಂಟ್‌ಗಳು ಇನ್ನೂ ಬಾಕಿಯಿದ್ದವು.

ಗೃಹ ಸಚಿವ ಕಿರಣ್ ಶಂಕರರಾಯ್ ನಮ್ಮ ವಿರುದ್ಧದ ಆದೇಶಗಳಿಗೆ ಸಹಿ ಮಾಡಿದ್ದು ಕೂಡ ನಮಗೆ ಗೊತ್ತಾಯಿತು. ಸ್ಪೆಷಲ್ ಬ್ರ್ಯಾಂಚ್ ಕಛೇರಿಯಲ್ಲಿ ನಾನು ಭೇಟಿಯಾದವರಲ್ಲಿ ಗೋಪಾಲ ಹಲ್ದರ್ ಕೂಡ ಒಬ್ಬರು. ಅವರು ತಮ್ಮ ಬ್ಯಾಗನ್ನು ಒಟ್ಟಿಗೆ ತಂದಿದ್ದರು. ಯಾಕೆಂದು ನಾನು ಕೇಳಿದೆ. ಅದಕ್ಕೆ ಗೋಪಾಲ್‌ಬಾಬು ಉತ್ತರ. "ನೀವು ಹಿಂದೆ ಯಾವತ್ತೂ ಜೈಲಿಗೆ ಹೋದವರಲ್ಲ. ಆದ್ದರಿಂದ ಇದು ನಿಮಗೆ ಅರ್ಥವಾಗುವುದಿಲ್ಲ. ಇವುಗಳನ್ನು ಸಿದ್ಧಪಡಿಸಿಯೇ ಇಟ್ಟುಕೊಳ್ಳಬೇಕು. ಜೈಲಿನಲ್ಲಿ ಎಷ್ಟುಕಾಲ ಇರಬೇಕಾಗುತ್ತದೆ ಎಂಬುದು ನಮಗೆ ಯಾವತ್ತೂ ಗೊತ್ತಿರುವುದಿಲ್ಲ".

ನನಗೆ ಇನ್ನೂ ಒಂದು ಘಟನೆ ನೆನಪಿದೆ. ಮಾಜಿ ಮುಖ್ಯಮಂತ್ರಿ ಡಾ. ಘೋಷ್‌ರನ್ನು ನಾನು ಗರ್‍ಯಾಹಟ್ ರಸ್ತೆಯಲ್ಲಿ ನೋಡಿದೆ. ಈ ಮಸೂದೆಯನ್ನು ಜನರ ಚಳುವಳಿಗಳ ವಿರುದ್ಧ ಯಾವತ್ತೂ ಬಳಸಲಾಗುವುದಿಲ್ಲ ಎಂದು ಇವರು (ಘೋಷ್) ವಿಧಾನಸಭೆಯಲ್ಲಿ ಆಶ್ವಾಸನೆ ನೀಡಿದ್ದು ನನಗೆ ಫಕ್ಕನೆ ನೆನಪಿಗೆ ಬಂತು. ನಮ್ಮಲ್ಲಿ ಕೆಲವರನ್ನು ಡಂಡಂ ಸೆಂಟ್ರಲ್ ಜೈಲ್, ಪ್ರೆಸಿಡೆನ್ಸಿ ಜೈಲ್ ಮತ್ತು ಅಲಿಪುರ ಜೈಲ್‌ಗೆ ಕಳಿಸಲಾಯಿತು. ನನ್ನನ್ನು ಪ್ರೆಸಿಡೆನ್ಸಿ ಜೈಲಿಗೆ ಹಾಕಲಾಯಿತು. ಇದು ನನ್ನ ಪ್ರಥಮ ಕಾರಾಗೃಹವಾಸ. ಅಲ್ಲಿ ಅನೇಕ ಸಂಗಾತಿಗಳನ್ನು ಭೇಟಿಯಾದೆ. ನಾವ ಒಂದು ಹಜಾರದಲ್ಲಿ (ಹಾಲ್) ಇರುತ್ತಿದ್ದೆವು. ಕೆಲವರು ಧೀರ್ಘಕಾಲ ಬರೆಯುವಲ್ಲಿ ಮಗ್ನರಾಗಿರುತ್ತಿದ್ದರು, ಇತರರು ಆಟಗಳನ್ನು ಆಡುತ್ತಿದ್ದರು ಅಥವಾ ಪುಸ್ತಕಗಳನ್ನು ಓದುತ್ತಿದ್ದರು.

**ಪೊಲೀಸರಿಂದ ಹಸಿ ಸುಳ್ಳುಗಳು.**

ನಮ್ಮ ಮೊಕದ್ದಮೆಗಳನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಪುನರ್ ಪರಿಶೀಲಿಸಲಾಗುತ್ತಿತ್ತು. ಪೊಲೀಸರು ನನ್ನ ವಿರುದ್ಧ ಅಸಂಬದ್ಧ ಆಪಾದನೆಗಳನ್ನು ಮಾಡಿದರು. ಬರ್ಮಾದ (ಕಲ್ ಮೈನ್ಮಾರ್) ರೈತ ಸಂಘ ನನ್ನನ್ನು ಆಹ್ವಾನಿಸಿದೆ ಎಂಬ ಅವರ ಹೇಳಿಕೆ ಅಪ್ಪಟ ಸುಳ್ಳು ಆಗಿತ್ತು. ನಾನು ಟ್ರೇಡ್ ಯೂನಿಯನ್ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದೇನೆ ಎಂದು ಅವರು ಹೇಳಿದರು.

1948 ಮಾರ್ಚ್ 26ರಂದು ನನ್ನನ್ನು ಬಂಧಿಸಲಾಯಿತು. ಮೂರು ತಿಂಗಳ ನಂತರ ಬಿಡುಗಡೆ ಮಾಡಲಾಯಿತು. ವಿಧಾನಸಭೆಯ ಸೆಪ್ಟೆಂಬರ್ ಅಧಿವೇಶನದ ಕೂಪನ್‌ಗಳ ಮೇಲೆ ಕಣ್ಣಾಡಿಸುವಾಗ ನಾನು ಆಗ ಏನು ಹೇಳಿದ್ದೆ ಎನ್ನುವುದು ಗೊತ್ತಾಗುತ್ತದೆ.

'ಒಟ್ಟು 70 ಸಂಗಾತಿಗಳು ಮತ್ತು ನಾನು ಬಿಡುಗಡೆಗಾಗಿ ಹೈಕೋರ್ಟಿಗೆ ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿದ್ದೆವು. ಆದರೆ ನಮ್ಮನ್ನು ಬಂಧನದಲ್ಲಿಡಲು ಕಾರಣವೇ ಇಲ್ಲ ಎಂದು ಹೈಕೋರ್ಟ್ ತಿಳಿಸಿತ್ತು.

ಪರಿಶೀಲನೆಯ ನಂತರವಷ್ಟೆ ನಮ್ಮನ್ನು ಬಿಡುಗಡೆ ಮಾಡಲಾಯಿತು. ನಮ್ಮ ವಿರುದ್ಧ ಮಾಡಿದ ಯಾವುದೇ ಆರೋಪದಲ್ಲಿ ಹುರುಳಿರಲಿಲ್ಲ. ಹೀಗಾಗಿಯೇ ಈ ಸುಗ್ರೀವಾಜ್ಞೆ ಅಗತ್ಯವಾಗಿದೆ. ಆದರೆ ಸರಕಾರ ನಮ್ಮನ್ನು ಬಿಡುಗಡೆ ಮಾಡಲಿಲ್ಲ ಎನ್ನುವುದು ಮಹತ್ವದ ವಿಚಾರ".

ನನ್ನ ವಿರುದ್ಧ ಎರಡು ಕ್ಷುಲ್ಲಕ ಆರೋಪಗಳನ್ನು ಮಾಡಿದ್ದನ್ನು ಆಗಲೇ ಪ್ರಸ್ತಾಪಿಸಿದ್ದೇನೆ. ಇನ್ನೂ ಒಂದು ಆಪಾದನೆಯಿದೆ. ನಾನು ಸಿಪಿಐ ಪಶ್ಚಿಮ ಬಂಗಾಳದ ಸದಸ್ಯನಾಗಿದ್ದೆ. ನಾವು ಭಾರೀ ಪ್ರಮಾಣದಲ್ಲಿ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸುತ್ತಿದ್ದು ವಿಚಾರಣೆಯಿಲ್ಲದೆ ಬಂಧನಕ್ಕೆ ಅರ್ಹರು ಎಂದು ಹೇಳಲಾಯಿತು.

ಇಂಥ ಪಿಳ್ಳೆ ನೆವಗಳಿಂದ ಏನೂ ಪ್ರಯೋಜನ ವಿಲ್ಲ ಎಂಬುದು ಶಂಕರ್‌ರಾಯ್ ಮತ್ತು ಇತರ ಮಂತ್ರಿಗಳಿಗೆ ಚೆನ್ನಾಗಿ ಗೊತ್ತಿತ್ತು. ಯಾವುದೇ ನ್ಯಾಯಾಲಯ ಸೆರೆಮನೆಯಲ್ಲಿ ಇಂಥ ಆದೇಶಗಳನ್ನು ಹೊರಡಿಸುವುದಿಲ್ಲ. ಈ ಕಾರಣಕ್ಕಾಗಿಯೇ ನಾವು ನ್ಯಾಯಾಲಯದಲ್ಲಿ ಹೇಬಿಯಸ್ ಕಾರ್ಪಸ್ ಮನವಿಯನ್ನು ಮುಂದಿಟ್ಟಾಗ ನನ್ನ ವಿರುದ್ಧ ಹೊಸ ಆಪಾದನೆಯನ್ನು ಮಾಡಲಾಯಿತು. ಅದು ತೀರಾ ಹಾಸ್ಯಾಸ್ಪದವಾಗಿತ್ತು. ಹೊಸ ಕಾನೂನಿನ ಪ್ರಕಾರವೂ ಆ ಆರೋಪ ಅಸಂಬದ್ಧವಾಗಿತ್ತು.

ನನ್ನ ವಿರುದ್ಧದ ಹೊಸ ಆರೋಪಗಳು ಹೀಗಿದ್ದವು.

ಅ) ಕಮ್ಯುನಿಸ್ಟ್ ಪಕ್ಷದ ನಂಬಿಕೆಗಳ ಪ್ರಚಾರಕ್ಕಾಗಿ ನಾನು ಕಾರ್ಮಿಕ ಸಮ್ಮೇಳನಗಳಲ್ಲಿ ಭಾಗವಹಿಸುತ್ತೇನೆ. ಅದು ನನ್ನ ಮೊದಲ ಅಪರಾಧ.

ಆ) ನಾನು ಒಂದು ಮೆರವಣಿಗೆಯ ನೇತೃತ್ವ ವಹಿಸಿದ ಹಾಗೂ ವಿಧಾನಸಭೆಯ ಮುತ್ತಿಗೆ ಹಾಕಿದೆ. ಇದು ಎರಡನೆ ಅಪರಾಧ.

ಇ) ಅಂತಿಮವಾಗಿ, ಮುಷ್ಕರದಲ್ಲಿ ಪಾಲ್ಗೊಳ್ಳುವ ಆಸಕ್ತಿ ಇಲ್ಲದವರಿಗೆ ನಾನು ಬೆದರಿಕೆ ಹಾಕಿದೆ. ಇದು ಆಪಾದನೆಗಳಲ್ಲೆಲ್ಲಾ ಅತ್ಯಂತ ಕೀಳ ಆರೋಪವಾಗಿತ್ತು.

ಆದರೆ ಯಾವಾಗ ನಾನು ಮೆರವಣಿಗೆಯ ನೇತೃತ್ವ ವಹಿಸಿದೆ ಎನ್ನುವುದನ್ನಾಗಲೀ ಕಮ್ಯುನಿಸ್ಟ್ ನಂಬಿಕೆಗಳ ಪ್ರಚಾರಕ್ಕಾಗಿ ಯಾವ ಕಾರ್ಮಿಕ ಸಭೆಗಳಲ್ಲಿ ಭಾಗವಹಿಸಿದೆ ಎನ್ನುವುದನ್ನಾಗಲಿ ಸ್ಪಷ್ಟಪಡಿಸಿರಲಿಲ್ಲ.

ಸರಕಾರದ ಆಕ್ರಮಣ ನನ್ನೊಬ್ಬನ ಮೇಲೆ ಮಾತ್ರ ಇರಲಿಲ್ಲ. ಇತರ ಸಂಗಾತಿಗಳನ್ನು ಅದು ಗುರಿಮಾಡಿಕೊಂಡಿತ್ತು. ನಾನು ಇಂಥ 80 ಆರೋಪ ಪಟ್ಟಿಗಳನ್ನು ಮುಖತಃ ಪರಿಶೀಲಿಸಿದೆ. ಹೈಕೋರ್ಟ್ ಸರಕಾರಕ್ಕೆ ಛೀಮಾರಿ ಹಾಕಿತು. ತರಾಟೆಗೆ ತೆಗೆದುಕೊಂಡಿತು.

(ಮುಂದುವರಿಯುವುದು)

# ದ.ಕ.ದಲ್ಲಿ ಬಸ್ಸು ಮಾಲಕರ ದರೋಡೆಕೋರ ನೀತಿಗೆ ಕಡಿವಾಣ

ಬಿ.ಜೆ.ಪಿ. ಒಂದು ಕುಟಿಲ ತಂತ್ರದ ಪಕ್ಷವಾಗಿದೆ. ಭೂಮಾಲಕರ, ವ್ಯಾಪಾರೋದ್ಯಮಿಗಳ ಮತ್ತು ಕೈಗಾರಿಕೋದ್ಯಮಿಗಳ ಹಿತಾಸಕ್ತಿಗೆ ಪೂರಕವಾಗಿಯೇ ದುಡಿಯುತ್ತಿದೆ. ಆ ನಿಟ್ಟಿನಲ್ಲಿ ಚುನಾವಣೆಯಲ್ಲಿ ಹಣದ ಮಹಾಪೂರವೇ ಈ ಪಕ್ಷಕ್ಕೆ ಹರಿದು ಬಂದಿರುವುದು ಗುಟ್ಟಿನ ಸಂಗತಿಯೇನೂ ಅಲ್ಲ. ತನಗಾಗಿ ಅಷ್ಟೊಂದು ಸಹಕಾರ ಮಾಡುತ್ತಿರುವ ಈ ವರ್ಗಕ್ಕೆ ಏನಾದರೂ ಸಹಾಯ ಸಹಕಾರ ಮಾಡುವ ಇರಾದೆಯಲ್ಲಿ ಚುನಾವಣೆ ಮುಗಿದ ತಕ್ಷಣವೇ ಸರಾಸರಿ 40% ಡೀಸೆಲ್ ದರ ಏರಿಕೆಗೆ ಅವಕಾಶ ಕಲ್ಪಿಸಿ ಕೊಟ್ಟು ಜನಸಾಮಾನ್ಯರ ಬದುಕನ್ನು ಕೊಳ್ಳೆ ಹೊಡೆಯಲು ಸಾರಾಸಗಟಾವಾದ ಮುಕ್ತ ಪರವಾನಗಿಯನ್ನು ನೀಡಿದೆ.

ದಕ್ಷಿಣ ಕನ್ನಡವಂತೂ ಬಿ.ಜೆ.ಪಿ. ಪಕ್ಷದ ಬೆಂಬಲಿಗರು ಹೆಚ್ಚಿರುವ ಜಿಲ್ಲೆ. ಸರಕಾರದ ಡೀಸೆಲ್ ದರ ಏರಿಕೆ ಇಲ್ಲಿಯ ಬಸ್ಸು ಮಾಲಕರ ಸಂಘಕ್ಕೆ ವರದಾನವಾಗಿ ಹೋಯಿತು. ದರ ಏರಿಸಲೆಂದೇ ಇಲ್ಲಿ 2 ಬಸ್ಸು ಮಾಲಕ ಸಂಘವಿದೆ. ಆದ್ದರಿಂದಲೇ ಬಸ್ಸು ಮಾಲಕರ ಸಂಘವನ್ನು ನಾಡಿನ ಜನತೆ ಹಗಲು ದರೋಡೆಕೋರರ ಸಂಘ ಎಂಬ ಅನ್ವರ್ಥನಾಮದಿಂದ ಗುರುತಿಸುತ್ತಾರೆ.

ಈಗ್ಗೆ ಎರಡು ವರ್ಷಗಳ ಹಿಂದೆ ಬಸ್ಸು ಮಾಲಕರು ದರ ಏರಿಸಿದಾಗ ಡಿವೈಎಫ್‌ಐ ಮತ್ತು ಎಸ್‌ಎಫ್‌ಐ ನೇತೃತ್ವದಲ್ಲಿ ಮೂರು ದಿನಗಳ ಕಾಲ ಯಶಸ್ವಿ ಮುಷ್ಕರ, ಬಂದ್ ನಡೆದು ಕೊನೆಗೂ ಹಠಮಾರಿ ಆಗಿನ ಜಿಲ್ಲಾಧಿಕಾರಿ ಅನಿಲ್ ಕುಮಾರ್ ಮತ್ತು ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ಮೇಘರಿಕ್‌ರವರನ್ನು ಸೇರಿಕೊಂಡಂತೆ ಬಸ್ ಮಾಲೀಕರನ್ನು ಒಂದು ಒಪ್ಪಂದಕ್ಕೆ ಬರುವಂತೆ ಮಾಡಲು ಸಾಧ್ಯವಾಯಿತು. ಈಗ ಶೇ 15% ಹೆಚ್ಚಳಕ್ಕೆ ಒಪ್ಪಂದವಾಯಿತು.

ಈ ಬಾರಿ ಬಸ್ಸು ಮಾಲಕರ ಸಂಘವು ಕೇವಲ ಎರಡೇ ಎರಡು ದಿನದ ಅವಧಿಯಲ್ಲಿ ಪತ್ರಿಕಾ ಪ್ರಕಟಣೆ ನೀಡಿ 25% ರಿಂದ 31% ವರೆಗೆ ಬಸ್ ದರವನ್ನು ಹೆಚ್ಚಿಸುವುದಾಗಿ ಏಕ ಪಕ್ಷೀಯವಾಗಿ ಘೋಷಿಸಿದರು. ಎಸ್.ಎಫ್.ಐ., ಡಿ.ವೈ.ಎಫ್.ಐ., ಸಿಪಿಐ(ಎಂ), ಸಿಐಟಿಯುಗಳು ಇದನ್ನು ವಿರೋಧಿಸಿ ಪತ್ರಿಕಾ ಹೇಳಿಕೆ ನೀಡಿ ಜಿಲ್ಲಾಧಿಕಾರಿ ಮಧ್ಯ ಪ್ರವೇಶಿಸುವಂತೆ ಆಗ್ರಹಿಸಿದವು.

ಈತನ್ಮಧ್ಯೆ ಹೊಸದರಗಳು ಜಾರಿಯಾದವು. ದಿನಾಂಕ 11.10.99 ರಂದು ಡಿವೈಎಫ್‌ಐ ದ.ಕ. ಜಿಲ್ಲಾ ಸಮಿತಿಯ ಉನ್ನತ ಮಟ್ಟದ ನಿಯೋಗ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಮನವಿ ನೀಡಿ ಚರ್ಚಿಸಲು ಹೋಯಿತು. ಅದಾಗಲೇ ಅಲ್ಲಿ ಜಿಲ್ಲಾಧಿಕಾರಿ ಮತ್ತು ಎಸ್.ಪಿ.ಯವರ ಜತೆ ಬಸ್ ಮಾಲಕರ ಸಂಘವನ್ನು ಮಾತುಕತೆಗೆ ಕರೆದಿತ್ತು. ಈ ಸಭೆಯ ಮಧ್ಯೆ ಜಿಲ್ಲಾಧಿಕಾರಿಯವರನ್ನು ಭೇಟಿ ಮಾಡಿ ಮನವಿ ಅರ್ಪಿಸಿದಾಗ ಜಿಲ್ಲಾಧಿಕಾರಿಯವರು ದ್ವಿಪಕ್ಷೀಯ ಮಾತುಕತೆಯ ಮಧ್ಯೆ ನಮ್ಮ ನಿಯೋಗವನ್ನು ಆಮಂತ್ರಿಸಿ ತ್ರಿಪಕ್ಷೀಯ ಸಭೆಯನ್ನಾಗಿ ಪರಿವರ್ತಿಸಿದರು. ಹಾಗೂ ಡಿವೈಎಫ್‌ಐ ನಿಯೋಗಕ್ಕೆ ತಮ್ಮ ವಾದವನ್ನು ಮಂಡಿಸಬೇಕೆಂದು ಕೇಳಿಕೊಂಡರು. ಆ ಸಮಯದಲ್ಲಿ ಡಿವೈಎಫ್‌ಐ ನ ಜಿಲ್ಲಾ ಸಮಿತಿಯ ಉಪಾಧ್ಯಕ್ಷರುಗಳಾದ ನಾಗೇಶ್‌ಕುಮಾರ್, ಕೆ.ಯಾದವಶೆಟ್ಟಿ, ಅಧ್ಯಕ್ಷರಾದ ಕೃಷ್ಣಪ್ಪಕೊಂಚಾಡಿ ನೇರವಾಗಿ ಬೇರೆ-ಬೇರೆ ರೀತಿಯಲ್ಲಿ ವಾದ ಮಂಡಿಸಿ ದರ ಏರಿಕೆಯ ಪ್ರಮಾಣವನ್ನು ಇಳಿಸಬೇಕೆಂದು ಒತ್ತಾಯಿಸಿದರು. ನೇರ ಮುಖಾಮುಖಿ ಚರ್ಚೆ ನಡೆಯಿತು. ಬಸ್ ಮಾಲಕರ ಪರವಾಗಿ ಬಸ್ಸು ಮಾಲಕರ ಸಂಘದ ಅಧ್ಯಕ್ಷರೂ ಉಳ್ಳಾಲ ಬಿಜೆಪಿ ಕ್ಷೇತ್ರದ ಸಮಿತಿಯ ಅಧ್ಯಕ್ಷರೂ ಆಗಿರುವ ಕೆ.ಕೆ.ಪೂಜಾರಿ, ರಾಜ್ಯ ಬಸ್ಸು ಮಾಲಕರ ಸಂಘಧ ರಾಜವರ್ಮರವರು ಚರ್ಚೆ ನಡೆಸಿದರು. ಈ ಚರ್ಚೆಯಲ್ಲಿ ಸ್ಪಷ್ಟವಾಗಿಯೇ ಡಿವೈಎಫ್‌ಐ ನಿಯೋಗದ ವಾದಸರಣಿಗೆ ಬಸ್ಸು ಮಾಲಕರ ಸಂಘದಿಂದ ಪ್ರತ್ಯುತ್ತರವಿರಲಿಲ್ಲ. ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿಯವರು ಎಸ್.ಪಿ.ಯವರು ಡಿವೈಎಫ್‌ಐಯ ವಾದ ಸರಣಿಗೆ ತಾತ್ವಿಕವಾಗಿ ಬೆಂಬಲ ವ್ಯಕ್ತಪಡಿಸಿದರು. ಹಾಗೂ ಮಾಲಕರದೇ ಪ್ರತ್ಯೇಕ ಸಭೆ ನಡೆಸಿ ತೀರ್ಮಾನವನ್ನು ತಿಳಿಸುವುದಾಗಿ ಹೇಳಿದರು. ಸುಮಾರು ಗಂಟೆ 5 ರಿಂದ ಆರರ ತನಕ ನಡೆದ ತ್ರಿಪಕ್ಷೀಯ ಮಾತುಕತೆ ಮತ್ತೆ ಒಂದು ತಾಸು ಜಿಲ್ಲಾಡಳಿತದೊಂದಿಗೆ ಮಾಲಕರ ಸಂಘದ ಮಾತುಕತೆ ಮುಂದುವರಿಯಿತು. ರಾತ್ರಿ 7.30ಕ್ಕೆ ಮತ್ತೆ ಜಿಲ್ಲಾಧಿಕಾರಿಯನ್ನು ಭೇಟಿ ಮಾಡಿದ ಡಿವೈಎಫ್‌ಐನ ನಾಯಕತ್ವ ಮಾತುಕತೆಯ ಸಾರಾಂಶವೇನೆಂದು ಕೇಳಿದಾಗ ಮತ್ತೆ ಮರುದಿನ ಮಾತುಕತೆಗೆ ಬರಬೇಕೆಂದು ಕೇಳಿಕೊಂಡರು. ಅದರಂತೆ ದಿನಾಂಕ 12 ರಂದು ಅಪರಾಹ್ನ 12.00 ಗಂಟೆಗೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ಡಿವೈಎಫ್‌ಐ ಮಾತ್ರವಲ್ಲದೆ ಎಸ್‌ಎಫ್‌ಐ, ಆಲ್ ಕಾಲೇಜ್ ಸ್ಟೂಡೆಂಟ್ಸ್ ಯೂನಿಯನ್‌ಗಳ ಮಧ್ಯೆ ಮಾತುಕತೆ ಪ್ರಾರಂಭವಾಯಿತು. ಅಂತಿಮವಾಗಿ ಸುಮಾರು 3 ತಾಸು ಗಳ ಸುದೀರ್ಘ ಚರ್ಚೆಯ ನಂತರ ದರ ಹೆಚ್ಚಳವನ್ನು 20% ಮಾತ್ರ ಮಿತಿಗೊಳಿಸುವುದಕ್ಕೆ ಒಪ್ಪಲಾಯಿತು. ಬಸ್ಸು ಮಾಲಕರ ಸಂಘ ಈ ಸಭೆಯಲ್ಲಿ ಕೂಡಾ ತನ್ನ ಎಂದಿನಂತೆ ಹಠಮಾರಿ ಧೋರಣೆಯನ್ನು ಅನುಸರಿಸಿ ಕೇವಲ ವಿದ್ಯಾರ್ಥಿಗಳಿಗೆ ಮಾತ್ರ ದರದಲ್ಲಿ ಕಡಿತ ಮಾಡುವುದಾಗಿ ಹೇಳಿದರು. ಆದರೆ ಡಿವೈಎಫ್‌ಐ ಇದನ್ನು ಪ್ರಬಲವಾಗಿ ವಿರೋಧಿಸಿ ಎಲ್ಲಾ ವಿದ್ಯಾರ್ಥಿ ಸಂಘಟನೆಗಳನ್ನು ತನ್ನ ವಾದಕ್ಕೆ ಬೆಂಬಲ ವ್ಯಕ್ತಪಡಿಸಲು ಮನವೊಲಿಸಿದ ಕಾರಣ ಬಸ್ಸು ಮಾಲಕರ ಸಂಘದ ಒಡೆದು ಆಳುವ ತಂತ್ರ ಫಲಿಸಲಿಲ್ಲ.

ಬಸ್ಸು ಮಾಲಕರ ಸಂಘವು, ಚುನಾವಣಾ ಫಲಿತಾಂಶ, ಶಾಲಾ ಕಾಲೇಜುಗಳಿಗೆ ರಜೆ ಇವೇ ಮೊದಲಾದ ಕಾರಣಗಳಿಂದಾಗಿ ದರಏರಿಕೆಯ ವಿರುದ್ಧ ಪ್ರತಿಭಟನೆ ವ್ಯಕ್ತವಾಗಲಿಕ್ಕಿಲ್ಲವೆಂಬ ನಂಬಿಕೆ ಹುಸಿಯಾಯಿತು. ಅದೇ ರೀತಿ ಎಬಿವಿಪಿ, ಹಿಂದೂ ಯುವ ಸೇನೆಯಂತಹ ಸಂಘಟನೆಗಳನ್ನು ಹೊರತು ಪಡಿಸಿ ದರ ಇಳಿಸುವಲ್ಲಿ ಡಿವೈಎಫ್‌ಐ ಸಂಘಟನೆ ಪ್ರಮುಖ ಪಾತ್ರ ವಹಿಸಿದೆ.

**ಕುಪ್ಪೆಪದವು ಮತ್ತು ದರ ಇಳಿತ**

ಕುಪ್ಪೇಪದವಿನಲ್ಲಿ ನಮ್ಮ ಎಡಸಂಘಟನೆಯು ಪ್ರಬಲವಾಗಿರುವ ಪ್ರದೇಶವಾಗಿದೆ. ಇಲ್ಲಿ ಸಿಪಿಐ(ಎಂ) ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾದ ವಸಂತ ಆಚಾರಿಯವರ ನೇತೃತ್ವದಲ್ಲಿ ಸರ್ವ ಪಕ್ಷಗಳ ಹೋರಾಟ ಸಮಿತಿ ರೂಪಿಸಿ 3 ದಿನಗಳ ಕಾಲ ಮತ್ತೆ ಬಂದ್ ನಡೆದು ಅಂತಿಮವಾಗಿ ಈ ಪ್ರದೇಶದಲ್ಲಿ ದರ ಏರಿಕೆ ಕೇವಲ 15% ಮಿತಿಗೊಳಿಸಲಾಗಿರುವುದು ವಿಶೇಷ ಸಂಗತಿಯಾಗಿದೆ.

ಕೃಷ್ಣಪ್ಪ ಕೊಂಚಾಡಿ

ರಾಷ್ಟ್ರಪತಿ ಭಾಷಣವೆಂಬ ಕಳಾಹೀನ ಕಸರತ್ತು ಕಿವಿಗಪ್ಪಳಿಸುವ ಆಶ್ವಾಸನೆಗಳಿಂದ ತುಂಬಿದೆ. ಆದರೆ ಅದರ ಒಳ ಹೂರಣ ಮಾತ್ರ ಸೊನ್ನೆ ವಾಸ್ತವವಾಗಿ ಅದು ಮುಂದಿಟ್ಟಿರುವುದು ಯಾವುದೇ ನಾಚಿಕೆಯಿಲ್ಲದೆ ಉದಾರೀಕರಣವನ್ನು ತೀವ್ರಗೊಳಿಸುವ ವಾಜಪೇಯಿ ಸರಕಾರದ ಅಜೆಂಡಾ ಅಂದರೆ ಜನರ ಬದುಕಿನ ಮೇಲೆ ಇನ್ನಷ್ಟು ಕ್ರೂರಧಾಳಿಗಳು, ಜತೆಗೆ ಸಂಘಪರಿವಾರದವರ ಸ್ವಂತ ಅಜೆಂಡಾ, ಇವೆರಡಕ್ಕೂ ಪ್ರತಿರೋಧಗಳು ಬೆಳೆಯುತ್ತಿದೆ. ಇದನ್ನು ಸಂಘಟಿಸುವ, ಕರ್ತವ್ಯ ಎಡ-ಪ್ರಜಾಪ್ರಭುತ್ವವಾದಿ ಶಕ್ತಿಗಳಪಾಲಿಗಿದೆ ಎನ್ನುತ್ತಾರೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ **ಹರ್ಕಿಶನ್ ಸಿಂಗ್ ಸುರ್ಜಿತ್.**

# ರಾಷ್ಟ್ರಪತಿ ಭಾಷಣವ್ರೋ ಮಾತಿನ ಮಂಟಪವ್ರೋ!

**ಸುರ್ಜಿತ್**

ಅಕ್ಟೋಬರ್ 25 ರಂದು ಸಂಸತ್ತಿನ ಎರಡೂ ಸದನಗಳ ಜಂಟಿ ಅಧಿವೇಶನವನ್ನು ಉದ್ದೇಶಿಸಿ ರಾಷ್ಟ್ರಪತಿಗಳು ಭಾಷಣ ಮಾಡಿದರು. 13 ನೇ ಲೋಕಸಭೆಯ ಮೊದಲ ಹಾಗೂ ಈ ಸಹಸ್ರಮಾನದ ಕೊನೆಯ ರಾಷ್ಟ್ರಪತಿ ಭಾಷಣವಾದ ಇದರಲ್ಲಿ ಗಮನ ಸೆಳೆದ ಸಂಗತಿಗಳೆಂದರೆ ಅದರಲ್ಲಿನ ಕಳಾಹೀನತೆ, ಅಸಂಬದ್ಧತೆ ಮತ್ತು ಪ್ರಸಕ್ತ ಸನ್ನಿವೇಶವನ್ನು ಎದುರಿಸಲಾರದ ದಿಕ್ಕೇಡಿತನ. ಬಾಯಿಯಲ್ಲೇನೋ ಜನಗಳ ನಿಜವಾದ ಆತಂಕಗಳ ಸ್ಮರಣೆ, ಹಿಂದೆ ಈಡೇರಿಸದ ಆಶ್ವಾಸನೆಗಳ ಪುನರುಚ್ಚಾರ, ಆದರೆ ಮುಂದಿಟ್ಟಿರುವುದು ವಾಜಪೇಯಿ ಸರಕಾರದ ಈ ಹೊಸ ಆವೃತ್ತಿಯ ನಿಜವಾದ ಅಜೆಂಡಾವನ್ನು.

ಬಹಳ ಹಿಂದೆ 1931 ರಲ್ಲಿ ಗಾಂಧೀಜಿ ಹೇಳಿದ್ದನ್ನು ಈ ಭಾಷಣ ಉದ್ಧರಿಸುತ್ತದೆ -

"ನಾನು ಭಾರತವನ್ನು ಅದರೆಲ್ಲಾ ದಾಸ್ಯದಿಂದ, ಆಶ್ರಯದಿಂದ ವಿಮುಕ್ತಗೊಳಿಸಲು ಒಂದು ಸಂವಿಧಾನಕ್ಕಾಗಿ ಪ್ರಯತ್ನ ನಡೆಸುತ್ತೇನೆ, ದಟ್ಟದರಿದ್ರರೂ ಇದು ನನ್ನ ದೇಶ, ಈ ದೇಶ ಕಟ್ಟುವಲ್ಲಿ ನನ್ನ ಪರಿಣಾಮಕಾರಿ ದನಿಯಿರುತ್ತದೆ ಎಂದು ಭಾವಿಸುವ ಒಂದು ಭಾರತಕ್ಕಾಗಿ ಶ್ರಮಿಸುತ್ತೇನೆ; ಜನಗಳಲ್ಲಿ ಉಚ್ಚವರ್ಗ, ನೀಚವರ್ಗವೆಂಬುದಿಲ್ಲದ ಭಾರತಕ್ಕಾಗಿ ಶ್ರಮಿಸುತ್ತೇನೆ; ಎಲ್ಲಾ ಕೋಮುಗಳು ಸಂಪೂರ್ಣ ಸೌಹಾರ್ದತೆಯಿಂದ ಬದುಕುವ ಭಾರತಕ್ಕಾಗಿ ಶ್ರಮಿಸುತ್ತೇನೆ..... ಇದು ನನ್ನ ಕನಸಿನ ಭಾರತ. ಇದಕ್ಕಿಂತ ಕಮ್ಮಿಯಾದುದೇನೂ ನನಗೆ ತೃಪ್ತಿ ನೀಡದು"

ಗಾಂಧೀಜಿಯ ಈ ಕನಸನ್ನು ಬಿಜೆಪಿ ನೇತೃತ್ವದ ಸರ್ಕಾರದ ಧೋರಣೆಯ ದಸ್ತಾವೇಜಾದ 'ಒಂದು ಹೆಮ್ಮೆಯ, ಸಮೃದ್ಧ ಭಾರತಕ್ಕಾಗಿ ಕಾರ್ಯಕ್ರಮ'ಕ್ಕೆ ಹೋಲಿಸುತ್ತಾ ರಾಷ್ಟ್ರಪತಿಗಳ ಈ ಭಾಷಣ "ಈ ದಸ್ತಾವೇಜು ಧರ್ಮನಿರಪೇಕ್ಷತೆ, ಸಾಮಾಜಿಕ ನ್ಯಾಯ, ಒಕ್ಕೂಟ ಸೌಹಾರ್ದ, ಋಜುತ್ವ ಮತ್ತು ಸಾಮಾಜಿಕ-ಆರ್ಥಿಕ ಸಮತ್ವದ ನೀತಿಗಳಲ್ಲಿ ತನ್ನ ವಿಶ್ವಾಸವನ್ನು ಪುನರುಚ್ಚರಿಸಿದೆ" ಎಂದಿದೆ.

**ಮತ್ತೆ ಟೊಳ್ಳು ಆಶ್ವಾಸನೆಗಳು**

ಈ ಮಾತಿನ ಮಂಟಪದ ಜೊತೆಗೆ 'ಕೋಟ್ಯಂತರ ಜನಗಳಿಗೆ, ವಿಶೇಷವಾಗಿ ಹಳ್ಳಿಗಳಲ್ಲಿ ಈಗಲೂ ಶುದ್ಧ ಕುಡಿಯುವ ನೀರು, ಸಮಂಜಸವಾದ ಸೂರು, ಪ್ರಾಥಮಿಕ ಶಿಕ್ಷಣ, ಆರೋಗ್ಯ ಸೇವೆಗಳು ಮತ್ತು ರಸ್ತೆಗಳನ್ನು ಇನ್ನೂ ಒದಗಿಸಿಲ್ಲ. ನಮ್ಮ ಬಹುಪಾಲು ಜನಸಮೂಹಗಳಿಗೆ ನಿರಕ್ಷರತೆ ಇನ್ನೂ ಶಾಪವಾಗಿದೆ..... ಕೋಟ್ಯಂತರ ಯುವ ಜನರು ಈಗಲೂ ನಿರುದ್ಯೋಗಕ್ಕೆ ತುತ್ತಾಗುತ್ತಿದ್ದಾರೆ..." ಎಂದೆಲ್ಲಾ ನೆನಪಿಸಿದರೂ ಇವನ್ನೆಲ್ಲಾ ಎದುರಿಸಲು ಈ ಸರಕಾರ ಏನು ಮಾಡಬೇಕೆಂದಿದೆ ಎಂಬುದಕ್ಕೆ ಮಾತ್ರ ನಿರ್ದಿಷ್ಟ ಉತ್ತರ ಈ ಭಾಷಣದಲ್ಲಿಲ್ಲ. ಮತ್ತೆ ಒಂದು ಕೋಟಿ ಹೆಚ್ಚಿನ ಉದ್ಯೋಗವಕಾಶ ನಿರ್ಮಾಣದ ಅಸಂಬದ್ಧ ಮಾತಿದೆ. ಕೃಷಿಯಲ್ಲಿ ಕೃಷಿ-ಆಧಾರಿತ ವಲಯದಲ್ಲಿ, ಸಣ್ಣ ಪ್ರಮಣದ ಉದ್ದಿಮೆಗಳು ಮತ್ತು ಗ್ರಾಮೀಣೋದ್ಯಮಗಗಳಲ್ಲಿ, ವಸತಿ ಮತ್ತು ಕಟ್ಟಡ ರಂಗದಲ್ಲಿ, ಸೇವಾವಲಯದಲ್ಲಿ ಮತ್ತು ಸ್ವಯಂ ಉದ್ಯೋಗ ವಲಯದಲ್ಲಿ ಈ ಒಂದು ಕೋಟಿ ಉದ್ಯೋಗವಕಾಶಗಳು ಸೃಷ್ಟಿಯಾಗುತ್ತವಂತೆ! ಹಾಗಾದರೆ ಅದೊಂದು ಪವಾಡವೇ ಸರಿ!

ಮೇಲೆ ಹೇಳಿದ ಜನಸಾಮಾನ್ಯರ ಬದುಕಿನ ವಿವಿಧ ಬಾಬ್ತುಗಳಿಗೆ ಬಜೆಟ್ಟಿನಲ್ಲಿ ತೆಗೆದಿಟ್ಟ ಹಣವನ್ನು ಗಮನಿಸಿದರೆ ಈ ಮಾತು ಎಷ್ಟು ಟೊಳ್ಳು ಎಂದು ಯಾರಿಗಾದರೂ ಅರ್ಥವಾಗುತ್ತದೆ. ನಿಜವಾಗಿ ಈ ಸರಕಾರದ ನೀತಿಗಳು ಉದ್ಯೋಗ ಹೆಚ್ಚಿಸಲಿಕ್ಕಾಗಿ ಅಲ್ಲ, ನಿರುದ್ಯೋಗ ಹೆಚ್ಚಿಸಲಿ ಕ್ಕಾಗಿ ಅಸಂಬದ್ಧ ಆಶ್ವಾಸನೆಗಳು ಇಷ್ಟೇ ಅಲ್ಲ, ಇಪ್ಪತ್ತು ಲಕ್ಷ ಹೆಚ್ಚಿನ ಮನೆಗಳು, ಕುಡಿಯುವನೀರು, ವಿದ್ಯುತ್, ಟೆಲಿಕಾಂ ಸೇವೆಗಳು ಇತ್ಯಾದಿ ಇತ್ಯಾದಿ.

**ರಿಯಾಯ್ತಿ ಮೇಲೆ ರಿಯಾಯ್ತಿ**
**ಹೊರೆಯ ಮೇಲೆ ಹೊರೆ**

ಇದನ್ನು ನೀಡಲು ಏನು ಬೇಕು? ತ್ವರಿತ ಆರ್ಥಿಕ ಬೆಳವಣಿಗೆ. ಅದಕ್ಕಿರುವ ಅಡ್ಡಿಯೆಂದರೆ ನಮ್ಮ ಮೂಲ ರಚನೆಯ ಅಸಮರ್ಪಕತೆ. ಅದಕ್ಕೇನು ಮಾಡಬೇಕ? ಹೆಚ್ಚೆಚ್ಚು ಖಾಸಗೀ ಬಂಡವಾಳ ಹೂಡಿಕೆಗೆ ತುರ್ತು ಕ್ರಮಗಳು! ಅದರಲ್ಲೂ ಮುಖ್ಯವಾದದ್ದು ರಾಜ್ಯ ವಿದ್ಯುತ್ ಮಂಡಳಿಗಳ ಕಂಪನೀಕರಣ - ಅಂದರೆ ಖಾಸಗೀಕರಣ. ವಿದ್ಯುತ್ ಉತ್ಪಾದನೆ, ರವಾನೆ ಮತ್ತು ವಿತರಣೆಯಲ್ಲಿ ಪ್ರತ್ಯೇಕಗೊಳಿಸುವುದು ಮತ್ತು ಜತೆಗೆ ವಿದ್ಯುತ್ ದರ ಸುಧಾರಣೆ(ದರ ಏರಿಕೆಯೆಂದೇ ಓದಿಕೊಳ್ಳಬೇಕು)ಯ ಎಚ್ಚರಿಕೆ! ಒಟ್ಟಿನಲ್ಲಿ 1991 ರಲ್ಲಿ ಕಾಂಗ್ರೆಸ್ ಆರಂಭಿಸಿದ ಉದಾರೀಕರಣ ಖಾಸಗೀಕರಣಕ್ಕೆ ಮತ್ತಷ್ಟು ಒತ್ತು ಶ್ರೀಮಂತ ವಿಭಾಗಗಳಿಗೆ ಇನ್ನಷ್ಟು ಲಾಭ ಹೊಂದಲು ಹೊಸ-ಹೊಸ ದಾರಿಗಳು, ವಿದೇಶಿ ಬಂಡವಾಳದ ಲೂಟಿಗೆ ತೆರೆದಿಟ್ಟ ಬಾಗಿಲು! ಜನಸಾಮಾನ್ಯರಿಗೆ ಮಾತ್ರ ಮಾತಿನ ಮಂಟಪ.

ಭಾರತದ ಆರ್ಥಿಕದ ಸುಂದರವಾದ ಹುಸಿ ಚಿತ್ರವನ್ನು ಈ ಭಾಷಣ ಮುಂದಿಟ್ಟಿದೆ. 35ಶೇ ಡೀಸೆಲ್ ದರ ಏರಿಕೆಯಿಂದ ಎಲ್ಲಾ ಅವಶ್ಯಕ ವಸ್ತುಗಳ ಬೆಲೆ ಗಗನಕ್ಕೇರುತ್ತಿದ್ದರೂ ಹಣದುಬ್ಬರ ಕೇವಲ 2% ಎಂಬ ಸಂತೃಪ್ತಿ! ಈ ಸಂತೃಪ್ತಿಯೊಂದಿಗೆ ಸಿರಿವಂತರಿಗೆ ರಿಯಾಯ್ತಿಗಳ ಮೇಲೆ ರಿಯಾಯ್ತಿ, ಜನಸಾಮಾನ್ಯರಿಗೆ ಹೊರೆಗಳ ಮೇಲೆ ಹೊರೆಗಳು.

**ಗಲಭೆಮುಕ್ತ ಭಾರತ**
**ನಿರ್ಮಿಸಬಲ್ಲರೇ ಇವರು?**

ರಾಷ್ಟ್ರೀಯ ಭದ್ರತೆಯ ಬಗ್ಗೆ ಹೇಳುತ್ತಾ ಈ ಭಾಷಣದಲ್ಲಿ 'ಸರಕಾರ'ದಿಂದ ಈಗಾಗಲೇ ಒಂದು ಗಲಭೆ-ಮುಕ್ತ ಭಯೋತ್ಪಾದನೆ-ಮುಕ್ತ-ಭಾರತ ನಿರ್ಮಿಸಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ" ಎಂದು ಹೇಳಲಾಗಿದೆ. ಆಹಾ! ಎಂತಹಾ ಕ್ರಮಗಳು - ಅಯೋಧ್ಯೆಯೊಂದಿಗೆ ಕಾಶಿ, ಮಥುರಾಗಳನ್ನು ಹಿಂದೂಗಳಿಗೆ ಒಪ್ಪಿಸಿ ಎಂದು ಆರ್.ಎಸ್.ಎಸ್. ಪ್ರಮುಖರ ಬೆದರಿಕೆ! ಪೋಪ್ ಭೇಟಿ ವಿರುದ್ಧ ಕರ್ಣಕರ್ಕಶ ಪ್ರಚಾರ, ವಿಹೆಚ್‌ಪಿ ಯ ಗೋವಾ-ದಿಲ್ಲಿ ಯಾತ್ರೆ! ಅಲ್ಪಸಂಖ್ಯಾತರ ಹಕ್ಕುಗಳನ್ನು ತುಳಿದು ಗಲಭೆ-ಮುಕ್ತ, ಭಯೋತ್ಪಾದನೆ-ಮುಕ್ತ ಭಾರತದ ನಿರ್ಮಾಣ ಮಾಡಬಹುದು ಎಂದು ಇವರು ನಂಬಿದ್ದಾರೆಯೇ? ಬಾಬ್ರಿ ಮಸೀದಿ ಧ್ವಂಸದ ನಂತರ ಮುಂಬೈ ಗಲಭೆಗಳ ವಿಚಾರಣೆ ನಡೆಸಿದ ಶ್ರೀಕೃಷ್ಣಾ ಆಯೋಗದ ಶಿಫಾರಸುಗಳನ್ನು ತಿರಸ್ಕರಿಸಿದವರು ನಿಜವಾಗಿಯೂ ಗಲಭೆ-ಮುಕ್ತ ಭಾರತ ನಿರ್ಮಿಸಬಲ್ಲರೇ?

ಇವರ ಹೆಗ್ಗಳಿಕೆ ಇಷ್ಟಕ್ಕೇ ನಿಂತಿಲ್ಲ. ಕಳೆದು ಎರಡು ವರ್ಷಗಳಲ್ಲಿ ಜಮ್ಮು-ಕಾಶ್ಮೀರದಲ್ಲಿ ಪರಿಸ್ಥಿತಿ ಗಮನಾರ್ಹವಾಗಿ ಸುಧಾರಿಸಿದೆಯಂತೆ. ಇದಕ್ಕೆ ಉದಾಹರಣೆಯೆಂದರೆಈ ಬಾರಿ ಅಮರನಾಥ್ ಯಾತ್ರೆಯಲ್ಲಿ 11,000 ಮಂದಿ ಭಾಗವಹಿಸಿದ್ದು. ಇದು ಈ ವರ್ಷವೇ ನಡೆದ ಹೊಸ ಸಂಗತಿಯೇನಲ್ಲ. ಆದರೆ ಕಾರ್ಗಿಲ್‌ನಲ್ಲಿ ಅತಿಕ್ರಮಣಕೋರರನ್ನು ನುಸುಳಿಸುವಲ್ಲಿ ಪಾಕಿಸ್ತಾನ ಏಕೆ ಯಶಸ್ವಿಯಾಯಿತು, ಕಾಶ್ಮೀರ ಕಣಿವೆಯಲ್ಲಿ ಹೀಗೆ ನುಸುಳಿದ ಸುಮಾರು ಒಂದು ಸಾವಿರ ಜನ ಇನ್ನೂಇಲ್ಲೇ ಉಳಿದಿರುವುದೇಕೆ? ಸಂಯುಕ್ತ ರಂಗ ಸರಕಾರದ ಆಡಳಿತದಲ್ಲಿ 50% ಮತದಾನ ನಡೆದ ಈ ರಾಜ್ಯದಲ್ಲಿ ಈ ಬಾರಿ ಅತ್ಯಲ್ಪ ಮತದಾನ(ಕೆಲವೆಡೆ ಕೇವಲ 7%) ನಡೆಯಿತೇಕೆಂದು ಈ ಸರಕಾರ ವಿವರಣೆ ನೀಡಬಲ್ಲುದೇ?

ಭಯೋತ್ಪಾದನೆ ಎದುರಿಸುವಲ್ಲಿ 'ಶೂನ್ಯತಾಳ್ಮೆ' ತೋರಿಸಲಾಗುವುದು ಎಂದು ಪ್ರಧಾನ ಮಂತ್ರಿಗಳ ಸಾರಿದ್ದಾರಂತೆ. ಆದರೆ ಅವರ ಮಿತ್ರಪಕ್ಷ ಅಕಾಲಿದಳದ ಮುಖಂಡರು ಜನರಲ್ ವೈದ್ಯರನ್ನು ಕೊಂದ ಭಯೋತ್ಪಾದಕರನ್ನು ಹಾಡಿಹೊಗಳುವಾಗ ಖಂಡನೆಯ ಸೊಲ್ಲೇ ಇಲ್ಲ! ಜನರಲ್ ವೈದ್ಯರನ್ನು ಹತ್ಯೆ ಮಾಡಿದ ಸುಖಾ ಮತ್ತು ಜಿಂದಾರಿಗೆ ನೇಣು ಹಾಕಿದ ಘಟನೆಯ 7ನೇ ವಾರ್ಷಿಕೋತ್ಸವವನ್ನು ಅಕ್ಟೋಬರ್ 11 ರಂದು ಅಮೃತಸರದ ಗದ್ರಿಗ್ರಾಮದಲ್ಲಿ ಆಚರಿಸಲಾಯಿತು. ಇದರಲ್ಲಿ ಪಂಜಾಬಿನ ಮುಖ್ಯಮಂತ್ರಿ ಬಾದಲ್ ಅಕಾಲ್ ತಖ್ತ್‌ನಲ್ಲಿ ಕೂರಿಸಿದ ಜಾತೇದಾರ್‌ರಾದ ಗ್ಯಾನಿ ಪೂರನ್ ಸಿಂಗ್ ಭಾಗವಹಿಸಿದ್ದರು. ಭಾಗವಹಿಸಿದ್ದರಷ್ಟೇ ಅಲ್ಲ ಇವರು 'ಸಿಖ್ ದೇಶಕ್ಕಾಗಿ ಹುತಾತ್ಮರಾದವರು' ಎಂದು ಹೊಗಳಿದರು. ಭಿಂದ್ರನ ವಾಲೆಯನ್ನು ಹೊಗಳಿದರು. ಇದುವರೆಗೂ ಈ ಜಾತೇದಾರ್ ಪೂರನ್ ಸಿಂಗ್‌ರ ಪಂಜಾಬಿನ ಸರ್ಕಾರಿ ಪೋಷಕರಾರೂ ಈ ಹೊಗಳಿಕೆ ಯನ್ನು ಖಂಡಿಸಲಿಲ್ಲ. ಬಿಜೆಪಿಯವರೂ ಖಂಡಿಸಿಲ್ಲ. ಭಯೋತ್ಪಾದನೆ - ಮುಕ್ತ ಭಾರತ ನಿರ್ಮಿಸುವ ದಾರಿ ಹೀಗಿದೆ!

**ಸಂವಿಧಾನಕ್ಕೆ ಸವಾಲು - ಯಾರಿಂದ?**

ಸರ್ಕಾರಿಯಾ ಆಯೋಗದ ಬಾಕಿ ಉಳಿದಿರುವ ಶಿಫಾರಸುಗಳನ್ನು ತುರ್ತಾಗಿ ಜಾರಿ ಮಾಡಲಾಗುವುದು ಎಂದು ಹೇಳಲಾಗಿದೆ. ಪ್ರಾದೇಶಿಕ ಪಕ್ಷಗಳ ಮೇಲೆಯೇ ಅವಲಂಬಿಸಿರುವ ಸರಕಾರ ಹೀಗೆ ಹೇಳದಿರಲು ಸಾಧ್ಯವೆ? ಆದರೆಹಿಂದಿನ ವಾಜಪೇಯಿ ಸರಕಾರ ವ್ಯತಿರಿಕ್ತವಾಗಿಯೇ ವರ್ತಿಸಿದೆ ಎಂಬುದನ್ನು ಮರೆಯಲೂ ಸಾಧ್ಯವಿಲ್ಲ. ಅದರಲ್ಲಿ ಆಶ್ಚರ್ಯವೂ ಇಲ್ಲ. ಏಕೆಂದರೆ ಕೇಂದ್ರದಲ್ಲಿ ಅಧಿಕಾರಿಗಳ ಕೇಂದ್ರೀಕರಣವಿರಬೇಕು ಎಂದು ಪ್ರತಿಪಾದಿಸುತ್ತಾ ಬಂದಿರುವ ಪಕ್ಷ ಬಿಜೆಪಿ. 13 ತಿಂಗಳ ಅವಧಿಯಲ್ಲಿ ಎರಡು ಬಾರಿ ಸರ್ಕಾರಿಯ ಆಯೋಗದ ಆಶಯಕ್ಕೆ ತದ್ವಿರುದ್ಧವಾಗಿ ಬಿಹಾರದಲ್ಲಿ 356ನೇ ಕಲಮು ಹೇರಲು ಪ್ರಯತ್ನಸಿದವರು ಇವರು.

ಇದೇ ಪ್ರಜಾ-ಪ್ರಭುತ್ವ-ವಿರೋಧಿ ನಿಲುವಿಗೆ ಅನುಗುಣವಾಗಿ ರಾಷ್ಟ್ರಪತಿಗಳ ಭಾಷಣ 'ಮುಂದಿನ ಶತಮಾನದ ಸವಾಲುಗಳನ್ನು ಎದುರಿಸಲು ಸೂಕ್ತ ಶಿಫಾರಸ್ಸುಗಳನ್ನು ಮಾಡಲು" ಸಂವಿಧಾನದ 'ಅಧಿಕ ಶಿತಕೆದ' ಕೆಲಸ ಕಾರ್ಯವನ್ನು ಅಧ್ಯಯನ ಮಾಡಲು ಸಂವಿಧಾನ ತಜ್ಞರ ಒಂದು ಆಯೋಗ ನೇಮಿಸುವ ಬಗ್ಗೆ ಮಾತನಾಡಿದೆ. ಎಂತಹ ಸವಾಲುಗಳು ಇವು? ಸಂಸದಿಯ ವ್ಯವಸ್ಥೆಯ ಬದಲು ಅಧ್ಯಕ್ಷೀಯ ಮಾದರಿಯ ಸವಾಲೇ? ಬಿಜೆಪಿ ಸಂವಿಧಾನ ವಿಮರ್ಶೆಯ ಬಗ್ಗೆ ಮಾತನಾಡುವುದು ಭಾರತೀಯ ಗಣತಂತ್ರದ ಧರ್ಮನಿರಪೇಕ್ಷ, ಒಕ್ಕೂಟವಾದಿ ಮತ್ತು ಪ್ರಜಾಸತ್ತಾತ್ಮಕ ಸ್ವರೂಪವನ್ನು ಬಲಪಡಿಸವ ಉದ್ದೇಶದಿಂದ ಅಲ್ಲ, ಈ ನೀತಿಗಳನ್ನು ಬುಡಮೇಲು ಮಾಡುವುದೇ ಅದರ ಗುರಿ. ಲೋಕಸಭೆಗೆ, ವಿಧಾನಸಭೆಗಳಿಗೆ ಒಂದು ಅವಧಿ ನಿಗದಿಮಾಡುವ ಪ್ರಸ್ತಾವದ ಸ್ವರೂಪವೇ ಅತ್ಯದಿಕ ಪ್ರಜಾಪ್ರಭುತ್ವ-ವಿರೋಧಿ. ನೀತಿಗೆಟ್ಟ ತಂತ್ರ ನಡೆಸುವವರಿಗೆ, ಸಿದ್ಧಾಂತ ಮತ್ತು ರಾಜಕೀಯವಿಲ್ಲದ ಕಸರತ್ತುಗಳಿಗೆ ಸುಗ್ಗಿಯೋ ಸುಗ್ಗಿ ಎಂಬಂತ ಅವಕಾಶ ನೀಡುವ ಪ್ರಸ್ತಾಪವದು. ಬಿಜೆಪಿ "ರಚನಾತ್ಮಕ ಅವಿಶ್ವಾಸಮತ"ದ ಬಗ್ಗೆ ಮಾತನಾಡುತ್ತಾ ಒಂದು ವಿಶ್ವಾಸಮತ ಧ್ವಂಸಾತ್ಮಕವಾಗಲು ಸಾಧ್ಯವೇ ಅಥವಾ ಬಿಜೆಪಿ ಇರುವರೆಗೆ ಧ್ವಂಸಾತ್ಮಕ ವಿಶ್ವಾಸಮತಗಳನ್ನೇ ಮತ ನೀಡಿಕೊಂಡು ಬಂದಿದೆಯೇ?

ವಿದೇಶಾಂಗ ನೀತಿಯಲ್ಲಿ ಸಾಮ್ರಾಜ್ಯಶಾಹಿ ಒತ್ತಡಗಳಿಗೆ ತಲೆಬಾಗಿ ಈ ನಮ್ಮ ಪ್ರದೇಶದಲ್ಲಿ ಸಾಮ್ರಾಜ್ಯಶಾಹಿಯ ಕಿರಿಪಾಲುದಾರನಾಗುವ ಹಳೆಯ ನಿಲುವನ್ನೇ ಮುಂದುವರೆಸುತ್ತಾ 'ಅಮೆರಿಕಾದೊಂದಿಗೆ ನಮ್ಮ ಸಂಬಂಧಗಳನ್ನು ಇನ್ನಷ್ಟು ಆಳ ಹಾಗೂ ವಿಸ್ತಾರಗೊಳಿಸುವ ಮಾತಾಡಿವೆ. ಭಾರತ ಸಂಸ್ಥಾಪಕ ಸದಸ್ಯರಾಗಿರುವ ಅಲಿಪ್ತ ಆಂದೋಲನವನ್ನು ಬಲಪಡಿಸಲು ಮಾಡಿಲ್ಲ. ಬದಲಾದ ವಿಶ್ವ ಸನ್ನಿವೇಶದಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿ ಎಲ್ಲೆಡೆ ತನ್ನ ಯಜಮಾನಿಕೆಯನ್ನು ಆಕ್ರಮಿಕ ರೀತಿಯಲ್ಲಿ ಹೇರುತ್ತಿರುವ ಸನ್ನಿವೇಶದಲ್ಲಿ ಅಲಿಪ್ತ ಆಂದೋಲನ ಬಹಳ ಪ್ರಸ್ತುತವೆನಿಸಿದರೂ ಅದನ್ನು ಬಲಪಡಿಸುವ ಮಾತಿಲ್ಲ.


**ಕಿವಿಗಪ್ಪಳಿಸುವ ಆಶ್ವಾಸನೆಗಳು**
**ಹೂರಣ ಮಾತ್ರ ಸೊನ್ನೆ**

ಒಟ್ಟಿನಲ್ಲಿ, ಮೊದಲೇ ಹೇಳಿದಂತೆ ರಾಷ್ಟ್ರಪತಿಗಳ ಭಾಷಣ ಒಂದು ಕಳಾಹಿನ ಕಸರತ್ತಾಗಿ ಬಿಟ್ಟಿದೆ. ಕಿವಿ ಕಿವುಡಾಗಿಸುವ ಆಶ್ವಾಸನೆಗಳು, ಹೂರಣ ಮಾತ್ರ ಸೊನ್ನೆ ಈ ಭಾಷಣ ನಿಜವಾಗಿ ಮಾಡಿರುವುದು ವಾಜಪೇಯಿ ಸರ್ಕಾರ ನಿಜ ಅಜೆಂಡಾವನ್ನು ಮುಂದಿಟ್ಟಿದ್ದು. ಅದೆಂದರೆ ಆರ್ಥಿಕ ಉದಾರೀಕರಣ ಅಪೂರ್ಣ ಅಜೆಂಡಾವನ್ನು ಯಾವುದೇ ನಾಚಿಕೆಯಿಲ್ಲದೆ, ಉಗ್ರ ರೀತಿಯಲ್ಲಿ ಮುಂದುವರೆಸುವುದು. ಅಂದರೆ ಜನಗಳ ಬದುಕಿನ ಮೇಲೆ ಇನ್ನಷ್ಟು ಧಾಳಿಗಳು, ಅವುಗಳೊಂದಿಗೆ ಭಾರತೀಯ ರಾಜಕಾರಣದ ಪ್ರಜಾಪ್ರಭುತ್ವ ಹಾಗೂ ಧರ್ಮನಿರಪೇಕ್ಷ ಸ್ವರೂಪದ ಮೇಲೆ ಮತ್ತಷ್ಟು ಧಾಳಿಗಳು.

ಹೀಗಿರುವಾಗ ಜನಗಳಿಗೆ ಈ ಭಾಷಣ ತುಸುವಾದರೂ ಹುರುಪು ಉಂಟು ಮಾಡಿರದಿದ್ದರೆ ಅದಕ್ಕೆ ಆಶ್ಚರ್ಯ ಪಡಬೇಕಾಗಿಲ್ಲ. ಡಿಸೆಲ್ ದರಗಳ ತೀವ್ರ ಏರಿಕೆಗೆ ದೇಶಾದ್ಯಂತ ಎದ್ದು ಬಂದಿರುವ ಪ್ರತಿಭಟನೆಗಳು ಪ್ರತಿರೋಧ ಮುಂಬರುವ ಎಲ್ಲಾ ಧಾಳಿಗಳಿಗೆ ಮೂಡಿ ಬರಲಿರುವ ಪ್ರತಿರೋಧದ ಸಂಕೇತ. ಅದೇ ವೇಳೆಗೆ ಆರ್.ಎಸ್.ಎಸ್. ಮತ್ತು ಅದರ ಪರಿವಾರದವರು ತಮ್ಮ ಅಜೆಂಡಾವನ್ನು ಜಾರಿಗೊಳಿಸುತ್ತಿರುವ ರೀತಿಯಿಂದಲೂ ಇವಕ್ಕೆ ಕೂಡಾ ಪ್ರತಿರೋಧ ಹೆಚ್ಚಲಿವೆ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತಿದೆ.

ಇದರ ಅರ್ಥ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಜನಗಳ ಪ್ರತಿರೋಧವನ್ನು ಸಂಘಟಿಸುವ, ಅಭಿವ್ಯಕ್ತಗೊಳಿಸುವ ಕೆಲಸಕ್ಕೆ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳಬೇಕು, ಈ ಮೂಲಕ ಈ ಕೋಮುವಾದಿ, ಪ್ರತಿಗಾಮಿ ಆಡಳಿತ ತರಬಹುದಾದ ಗಂಡಾಂತರದಿಂದ ದೇಶವನ್ನು ರಕ್ಷಿಸಲು ಸಾಧ್ಯವಾಗಬೇಕು. ○

"ನಾನು ಭಾರತವನ್ನು ಅದರೆಲ್ಲಾ ದಾಸ್ಯದಿಂದ, ಆಶ್ರಯದಿಂದ ವಿಮುಕ್ತಗೊಳಿಸಲು ಒಂದು ಸಂವಿಧಾನಕ್ಕಾಗಿಪ್ರಯತ್ನ ನಡೆಸುತ್ತೇನೆ, ದಟ್ಟದರಿದ್ರರೂ ಇದು ನನ್ನ ದೇಶ, ಈ ದೇಶ ಕಟ್ಟುವಲ್ಲಿ ನನ್ನ ಪರಿಣಾಮಕಾರಿ ದನಿಯಿರುತ್ತದೆ ಎಂದು ಭಾವಿಸುವ ಒಂದು ಭಾರತಕ್ಕಾಗಿ ಶ್ರಮಿಸುತ್ತೇನೆ; ಜನಗಳಲ್ಲಿ ಉಚ್ಚವರ್ಗ, ನೀಚವರ್ಗವೆಂಬುದಿಲ್ಲದ ಭಾರತಕ್ಕಾಗಿ ಶ್ರಮಿಸುತ್ತೇನೆ; ಎಲ್ಲಾ ಕೋಮುಗಳು ಸಂಪೂರ್ಣ ಸೌಹಾರ್ದತೆಯಿಂದ ಬದುಕುವ ಭಾರತಕ್ಕಾಗಿ ಶ್ರಮಿಸುತ್ತೇನೆ..... ಇದು ನನ್ನ ಕನಸಿನ ಭಾರತ. ಇದಕ್ಕಿಂತ ಕಮ್ಮಿಯಾದುದೇನೂ ನನಗೆ ತೃಪ್ತಿ ನೀಡದು"- ಹೀಗೆಂದು 1931 ರಲ್ಲಿ ಗಾಂಧೀಜಿ ಹೇಳಿದ್ದನ್ನು ಬಿಜೆಪಿ ನೇತೃತ್ವದ ಸರಕಾರದ ಧೋರಣೆಯ ದಸ್ತಾವೇಜಿನೊಂದಿಗೆ ರಾಷ್ಟ್ರಪತಿ ಭಾಷಣ ಹೋಲಿಸಿದೆ!



ಜನವರಿ 30, 1948 ರಂದು ಕೋಮುವಾದಿಯ ಗುಂಡಿಗೆ ಬಲಿಯಾಗಿ ಚಿರನಿದ್ರೆಯಲ್ಲಿರುವ ಗಾಂಧೀಜಿ

# ಕನ್ನಡಕ್ಕೆ- ಕರ್ನಾಟಕ್ಕೆ ಒದಗಿರುವ ಗಂಡಾಂತರ

ಎಸ್.ವೈ.ಗುರುಶಾಂತ್

ಕರ್ನಾಟಕ ರಾಜ್ಯ ಉದಯವಾಗಿ ಇಂದಿಗೆ 43 ವರುಷಗಳು ಗತಿಸಿವೆ. ಭಾಷವಾರು ಪ್ರಾಂತಗಳ ರಚನೆಯ ಮೂಲ ಆಶಯಕ್ಕೆ, ಕೊಡಲಿಯೇಟು ಹಾಕುವಂತೆ, ಇವುಗಳ ರಚನೆಯ ಅಗತ್ಯದ ಬಗ್ಗೆ ಪ್ರಶ್ನಿಸಲಾಗುತ್ತಿದೆ. ಕನ್ನಡ ಅಥವಾ ದೇಶಿಯ ಭಾಷೆಗಳ ಬೆಳವಣಿಗೆ ದೇಶದ ಐಕ್ಯತೆ. ಅಡ್ಡಿ ಎಂದೂ ಪ್ರಚಾರಿಸಲಾಯಿತು.

ನಾಡಿನ ಒಡಲಿನಿಂದ ಕೆಲವು ಪ್ರದೇಶಗಳು, ಪ್ರತ್ಯೇಕಗೊಳ್ಳಬೇಕು ಎಂಬ ಬೇಡಿಕೆಗಳು ಕೇಳಿಬರುತ್ತಿವೆ.

'ಉದಯವಾಗಲಿ ನಮ್ಮ ಚಲುವ ಕನ್ನಡ ನಾಡು' ಎಂಬುದು ಅಂದಿನ ಇಂದಿನ ಎಲ್ಲರ ಎದೆಯ ಹಾಡು ಕೇಳುತ್ತಿರುವಾಗ, ಅದರ ಕೊರಳ ಹಿಸುಕಲಾಗುತ್ತಿದೆ. ಮತ್ತೇ ಕರ್ನಾಟಕ, ಕನ್ನಡನಾಡು- ಜನತೆ ಹರಿದು ಹಂಚಿ ಹೋಗಬೇಕೇ?.

**ಸ್ವಾತಂತ್ರ್ಯ ಚಳುವಳಿಯ ಭಾಗವಾಗಿ ಏಕೀಕರಣ ಚಳವಳಿಗಳು**

ಭಾಷವಾರು ಪ್ರಾಂತಗಳ ರಚನೆಗಾಗಿ ಆಗ್ರಹದ ಧ್ವನಿಗಳು ಮೊಳಗಿದ್ದು 1905 ರಲ್ಲಿ ಲಾರ್ಡ್ ಕರ್ಜನ್ ಬಂಗಾಳವನ್ನು ವಿಭಜನೆ ಮಾಡಿದಾಗ ಹೋರಾಟದ ಅಲೆ ದೇಶವ್ಯಾಪಿಯಾಗಿ ಹಬ್ಬಿತು. ಕರ್ನಾಟಕಕ್ಕೆ ತಮ್ಮ ಪ್ರಭಾವವನ್ನು ನೀಡಿದೆ. ಇದಕ್ಕೆ ಸ್ಫೂರ್ತಿ ನೀಡಿದೆ. ಒಂದೇ ಭಾಷೆ ಮಾತನಾಡುವವರು ಒಂದುಗೂಡಬೇಕು, ಒಂದೇ ಆಡಳಿತದಡಿ ಇರಬೇಕು ಎಂಬುದು ವಿರುದ್ಧ ನಡೆದ ಸ್ವಾತಂತ್ರ್ಯ ಚಳುವಳಿಯಲ್ಲಿ ಮೂಡಿಬಂದಿದೆ.

ಸ್ವಾತಂತ್ರ್ಯ ಚಳುವಳಿಯಲ್ಲಿ ದೇಶಿಯ ಭಾಷೆಗಳು ಮತ್ತು ಜನರ ಮಹತ್ವದ ಪಾತ್ರದ ಬಗ್ಗೆ ತಡವಾಗಿಯಾದರೂ ಅರಿತ ಕಾಂಗ್ರೆಸ್ ಭಾಷವಾರು ಪ್ರಾಂತಗಳ ರಚನೆಗೆ ಬೆಂಬಲಿಸಿತು. 1928 ರಲ್ಲಿ ಮೋತಿ ಲಾಲ್ ನೆಹರೂ ಸಮಿತಿ ವರದಿ ಇದನ್ನೇ ಶಿಫಾರಸು ಮಾಡಿತು. 1946-47 ರ ಚುನಾವಣಾ ಪ್ರಣಾಳಿಕೆಯಲ್ಲಿ ಒಂದು ಅಂಶವನ್ನಾಗಿ ಪ್ರಕಟಿಸಿತು. ಆದರೆ ಅಧಿಕಾರಕ್ಕೆ ಬಂದನಂತರ ಇದನ್ನು ಕೈಬಿಟ್ಟಿತು. ಕನ್ನಡ ಮಾತಾಡುವ ಪ್ರದೇಶಗಳು, ಮುಂಬಾಯಿ, ಮದರಾಸು, ಹೈದ್ರಬಾದ್, ಮೈಸೂರು ಪ್ರಾಂತಗಳಲ್ಲಿ ಹರಿದು ಹಂಚಿಹೋಗಿದ್ದು ಅವೆಲ್ಲಾ ಒಂದುಗೂಡುವ ಹೋರಾಟ ವ್ಯಾಪಾಕವಾಗಿ ಬೆಳೆಯಿತು. 'ದೇಶದ ಹಲವು ಕಡೆ ಈ ರೀತಿಯ ಹೋರಾಟಗಳು ವಿವಿಧ ಪ್ರಾಂತ್ಯಗಳಲ್ಲಿ ಹಬ್ಬಿದವು. ಕರ್ನಾಟಕ ಏಕೀಕರಣ, ಐಕ್ಯ ಕೇರಳ, ವಿಶಾಲಾಂಧ್ರ. ಸಂಯುಕ್ತ ಮಹಾರಾಷ್ಟ್ರ, ಸಂಯುಕ್ತ ಗುಜರಾತ್ ಮೊದಲಾದ ಚಳುವಳಿಗಳು ಇದರಲ್ಲಿ ಬಹಳ ಪ್ರಸಿದ್ಧವಾದವು.

ಕೊನೆಗೂ ಕಾಂಗ್ರೆಸ್ ಸರಕಾರ ಮಣಿಯಲೇಬೇಕಾಯಿತು. 1956 ನವೆಂಬರ್ 1 ರಂದು ಕರ್ನಾಟಕ, ಕೇರಳ, ತಮಿಳುನಾಡು ಭಾಷಾವಾರು ಪ್ರಾಂತಗಳ ಉದಯವಾದವು.

**ಹಿಂದಿ-ಹಿಂದು- ಹಿಂದುಸ್ತಾನ್**

ಗಳಿಸಿದ ಸ್ವಾತಂತ್ರ್ಯದ ಫಲವನ್ನುಣ್ಣಲು ಭಾಷವಾರು ಪ್ರಾಂತ್ಯಗಳ ರಚನೆ ಅತ್ಯಂತ ಮಹತ್ವದ ಪ್ರಜಾತ್ತಾತ್ಮಕ ಗೆಲುವು, ನಾಡಿನ ಅಭಿವೃದ್ಧಿ ಸಾಧಿಸಲಾಗುವಂತೆಯೇ ಭಾಷೆಯ ಬೆಳವಣಿಗೆ, ಬದುಕು ಸಹ ವಿಕಾಸವಾಗುವುದು.

ಹೀಗಾಗಿ ಭಾಷೆಯೆಂಬುದು ಕೇವಲ ಸಂವಹನದ ಮಾಧ್ಯಮ ಮಾತ್ರವಲ್ಲ . ಅದು ಸಂಸ್ಕೃತಿ, ಇತಿಹಾಸ, ಜನಜೀವನದ ಬದುಕು, ಹೀಗೆ 'ರಾಷ್ಟ್ರೀಯತೆ' ಯೇ ಆಗಿದೆ. ಆದರೆ ಆಳುವ ಬಂಡವಾಳಶಾಹಿಗಳು ತಮ್ಮ ಸರಕುಗಳ ಮಾರುಕಟ್ಟೆ, ಮಾರುಕಟ್ಟೆಗಾಗಿ ಇದು ಎಷ್ಟು ಉಪಯುಕ್ತವೆಂದಷ್ಟೇ ನೋಡುತ್ತಾರೆ.

ಭಾಷೆ, ಭಾಷೆವಾರು ಪ್ರಾಂತ್ಯ ಜನರ ಜೀವನಾಡಿ ಆಗಿರುವಾಗ ಆಳುವವರು ಅದನ್ನು ಮಾರುಕಟ್ಟೆಯಾಗಿ ಪರಿಗಣಿಸುತ್ತಾರೆ.

ಒಂದೆಡೆ ಮತ್ತೆ ಕನ್ನಡನಾಡು, ಹಾಗೂ ಇತರೆ ಭಾಷವಾರು ಪ್ರಾಂತ್ಯಗಳನ್ನು ಒಡೆಯುವ ಮಾತುಗಳು ಕೇಳಿಬರುತ್ತಿವೆ. ಮತ್ತೊಂದೆಡೆ ಅದೇ ಶಕ್ತಿಗಳು ಒಂದೇ ದೇಶ ಒಂದೇ ಜನಾಂಗ ಎನ್ನಲಾಗುತ್ತಿದೆ. ಒಂದೇ ದೇಶ- ಒಂದೇ ಭಾಷೆ, ಎಂದೂ ಒಪ್ಪಿಸಲಾಗುತ್ತಿದೆ. ಹಿಂದಿ-ಹಿಂದೂ-ಹಿಂದೂಸ್ತಾನ ಎಂದೂ ಹೂಂಕರಿಸಲಾಗುತ್ತಿದೆ. 'ಚಿಕ್ಕರಾಜ್ಯ ಚೊಕ್ಕ' ರಾಜ್ಯ ಎಂಬ ಆಕರ್ಷಕ ಪುಂಗಿನಾದಕ್ಕೆ ವಿಭಜನೆಯ ವಿಷ ಸರ್ಪ ತಲೆಯಾಡಿಸಿ ಕಚ್ಚಲು ಕಾಯುತ್ತಿದೆ.

ಬಿಹಾರ ರಾಜ್ಯವನ್ನೊಡೆದು ವನಾಂಚಲ ರಾಜ್ಯ ರಚಿಸುವ, ಉತ್ತರ ಪ್ರದೇಶ ರಾಜ್ಯವನ್ನೊಡೆದು ಉತ್ತರಾಂಚಲ ರಾಜ್ಯವನ್ನು ರಚಿಸುವ ಯೋಜನೆ ಮತ್ತೆ ಲೋಕಸಭೆಯ ಮುಂದಿದೆ. ಇದು ದೇಶದೆಲ್ಲೆಡೆಯ ವಿಚ್ಛಿದ್ರಕಾರಿ ಶಕ್ತಿಗಳಿಗೆ ದೊಡ್ಡ ಪ್ರಚೋದನೆ ಕೊಡಲಿದೆ.

ಆಂಧ್ರ ಪ್ರದೇಶದಲ್ಲಿ ಹಿಂದೆ ತೀವ್ರವಾಗಿದ್ದ ತೆಲಂಗಾಣ- ರಾಯಲಸೀಮಾ, ಮಹಾರಾಷ್ಟ್ರದಲ್ಲಿ 'ವಿದರ್ಭ' ಇತ್ಯಾದಿ ವಿಭಜನಕಾರಿ ಪ್ರವೃತ್ತಿಗಳಿಗೆ ರೆಕ್ಕೆಗೆ ನೀರು ತಟ್ಟಿದಂತಾಗುತ್ತದೆ.

ಇಂದು ಹಾಗೆ ಹೇಳುತ್ತಿರುವವರು ಅಂದು ಭಾಷವಾರು ಪ್ರಾಂತ್ಯಗಳ ರಚನೆಗೆ ವಿರೋಧವಾಗಿದ್ದವರು, ಇಂದಿನ ಬಿಜೆಪಿ, ಅಂದಿನ ಜನ ಸಂಘ ಇವುಗಳ ನಡುವೆ ಸದಾ ಪ್ರವಹಿಸುತ್ತಿರುವ ರಕ್ತವಾಗಿರುವ ಆರ್.ಎಸ್.ಎಸ್. ಭಾಷವಾರು ಪ್ರಾಂತ ರಚನೆ ಕೂಡದು ಎಂದು ಅಬ್ಬರಿಸಿತ್ತು. ಉಗ್ರವಾಗಿ ವಿರೋಧಿಸಿತ್ತು. ಅವರೇ ಈಗ ಆಡಳಿತದ ಸೂತ್ರ ಹಿಡಿದ್ದಿದ್ದಾರೆ. ಮಾಧ್ಯಮಗಳ ಮೆದುಳುಗಲಾಗುತ್ತಿದ್ದಾರೆ. ಸಂಸ್ಕೃತಿಗೆ ಹಾಗೂ ರಾಷ್ಟ್ರೀಯತೆಯ ಯಜಮಾನರಾಗಿಬಿಟ್ಟಿದ್ದಾರೆ. ಇವರ ವಕ್ತಾರರು ಬುದ್ಧಿ ಜೀವಿಗಳ ವೇಷದಲ್ಲಿ, ಆಡಳಿತದ ಕುರ್ಚಿಗಳಲ್ಲಿ ಸಚಿವ, ಶಾಸಕ, ಸಂಸದರೆಂಬ ರಾಜಕಾರಣಿಗಳ ಗತ್ತಿನಲ್ಲಿ ಕಾಣಿಸಿಕೊಳ್ಳತೊಡಗಿದ್ದಾರೆ. ಕೋಲು ಹಿಡಿದ ಖಾಕಿ ಗಣವೇಷಧಾರಿಗಳಿಂದ ನಮ್ಮ ಭಾಷೆ, ಬದುಕು-ಸಂಸ್ಕೃತಿಗೆ ಇನ್ನಿಲ್ಲದ ಗಂಡಾಂತರ ಬಂದಿದೆ.

**ಇಂಗ್ಲಿಷ್ ಮಾಧ್ಯಮ**

ಈಗಂತೂ ಎಲ್ಲೆಲ್ಲೂ ಕಾನ್ವೆಂಟ್ ಗಳ ಹಾವಳಿ, ಅಲ್ಲಿ ಕಲಿತರಿಗೇ ಭವಿಷ್ಯವಿದೆ ಎಂದೂ, ಉತ್ಕೃಷ್ಟತೆಯ ಕೇಂದ್ರಗಳೆಂದೂ ನಂಬಲಾಗಿದೆ. ಅದಕ್ಕಾಗಿ ಹತ್ತು ಸಾವಿರ ಅಲ್ಲ ಐವತ್ತು ಸಾವಿರದವರೆಗೂ ಡೋನೇಷನ್ ಸುಲಿಗೆ ನಡೆಯುತ್ತಿದೆ. ಯಾಕೇ ಹುಚ್ಚು ವ್ಯಾಮೊಹ? ಇಂಗ್ಲೀಷ್ ಕಲಿತರೆ ಎಲ್ಲಾದರೂ ಬದುಕಬಹುದು ಎಂಬ ನಂಬಿಕೆ. ನಾಡಿನ ಅಭಿವೃದ್ಧಿ ಆಗದೇ, ಉದ್ಯೋಗದ ಅವಕಾಶಗಳೇ ಕಡಿಮೆಯಾಗಿವೆ. ಕನ್ನಡ ಕಲಿತರೆ ಕನ್ನಡನಾಡಿನಲ್ಲಿ ಕೆಲಸವಿಲ್ಲ ಎಂತಾದರೆ, ಈಗಲಂತೂ ಜಾಗತೀಕರಣ, ಭೌಗೋಳಿಕರಣ ಪ್ರಕ್ರಿಯೆ ನಡೆದಿರುವಾಗ ಕನ್ನಡವನ್ನು ಯಾರು ಕೇರ್ ಮಾಡುತ್ತಿಲ್ಲ ಬದಲಾಗಿ ಬಂಡವಾಳ ಹೂಡುವವನ್ನು ತನ್ನ ಭಾಷೆ ಕಲಿಯಲು ಆದೇಶಿಸುತ್ತಾನೆ. ಕನ್ನಡ ಅದು ನಿರ್ಗತಿಕ, ಬಡವರ, ಅವಕಾಶವಂಚಿತರದ್ದು ಎಂಬಂತಾಗಿದೆ. ಹೀಗಾಗಿ ಇಂಗ್ಲೀಷ್‌ನ ಅಹಂನ ಎದುರು ಸ್ಪರ್ಧಿಸುವುದೇ ಕಷ್ಟ. ಕನ್ನಡದ ಶಿಕ್ಷಕ ಕನ್ನಡದಲ್ಲಿ ಮಾತನಾಡಿದರು ಎಂದು ಕೆಲಸದಿಂದ ವಜಾ ಆದ ಉದಾಹರಣೆ ರಾಜ್ಯದ ರಾಜಧಾನಿಯಲ್ಲೇ ನಡೆಯಿತು. ಮಾತೃಭಾಷೆ ಕನ್ನಡ ಕಲಿಯದೇ ಭಾವನೆಗಳ ಬೆಳವಣಿಗೆ ಮನಸ್ಸು ಸೃಜನಶೀಲವಾಗಿರಲು ಹೇಗೆ ಸಾಧ್ಯ?. ಈಗಿರುವ ಜಾತಿವ್ಯವಸ್ಥೆಯಿಂದಾಗಿ ವಿವಿಧ ಜಾತಿ, ಜನಾಂಗಗಳ ನಡುವೆ ಸುಲಲಿತ, ಸರಳ ಸಂವಾದಗಳೇ ಇಲ್ಲವಾಗಿ ಕೊಡು ಕೊಳ್ಳದೇ ಭಾಷೆ ಸೊರಗಿದೆ. ಇದೀಗ ಕೋಮುವಾದ ಹಿಂದು-ಮುಸ್ಲಿಂ ಎಂದು ವಿಭಜನೆ ತರುತ್ತಿರುವಾಗ ಪರಸ್ಪರ ವಿನಿಮಯ ಅಸಾಧ್ಯ ಮಾತ್ರವಲ್ಲ ಜನರನ್ನೇ ದುಡಿಯುವ ಜನರನ್ನೇ ಒಡೆಯುತ್ತಿದೆ. ಹಾಗಾದರೆ ದುಡಿಮೆಯ ಕಂಪಿನಲ್ಲಿ ಭಾಷೆ ಸಂಸ್ಕೃತಿ ಅರಳುವುದಾದರೂ ಹೇಗೆ ಸಾಧ್ಯ?

'ಹಿಂದಿ-ಹಿಂದು- ಹಿಂದೂಸ್ತಾನ್' ಎನ್ನುವ ಮೂಲಕ ಸಂಘ ಪರಿವಾರವು ತನ್ನ ಕರಾಳವಾದ ಜನಾಂಗೀಯವಾದೀ ಹಿಂದೂ, ದಾಷ್ಟದ ರಾಷ್ಟ್ರದ ನಿರ್ಮಾಣಕ್ಕೆ ಬಳಸುತ್ತಿದೆ. ಹಿಂದು ಹಿಂದಿ ಕಲಿತರೆ, ಹಿಂದುಸ್ಥಾನ ಸುಲಭ ಎಂಬುದು ಇದರರ್ಥ. ಒಂದು ದೇಶಕ್ಕೆ ಒಂದು ಭಾಷೆ ಎಂದು ಚಿತ್ರಿಸುವ ಭಾರತದ ವೈವಿಧ್ಯತೆಗಳನ್ನು ನಿರಾಕರಿಸುವ ಕ್ರಮವಿದು. ಹಿಂದಿಯನ್ನು ರಾಷ್ಟ್ರ ಭಾಷೆ ಎಂದು ನಂಬಿಸಲಾಗುತ್ತಿದೆ. ಕನ್ನಡವೂ ರಾಷ್ಟ್ರ ಭಾಷೆ ಎಂದು ಕ್ಷೀಣಸ್ವರದಲ್ಲಿ ಹೇಳುವವರು ಸಿಗುವುದು ಕಷ್ಟಕರ. ಟಿ.ವಿ. ಮಾಧ್ಯಮಗಳು- ಹಿಂದಿ ಸಭೆಗಳು, ಮುಂತಾದವುಗಳ ಮೂಲಕ ಸಂಸ್ಕೃತ, ಹಿಂದಿಯನ್ನು ವ್ಯಾಪಕಗೊಳಿಸಲಾಗಿದೆ. ಹಿಂದಿ ಅಥವಾ ಯಾವುದೇ ಭಾಷೆಯ ಕಲಿಕೆಗೆ ವಿರೋಧ ಇರಬೇಕಿಲ್ಲ ಆದರೆ ಅದೊಂದೇ ಸಾರ್ವಭೌಮ ಭಾಷೆ ಎಂಬಂತೆ ಬಳಸುವುದು,. ಇತರ ಭಾಷೆಗಳನ್ನು ಮೂಲೆಗೆ ತಳುವುದು, ಅದನ್ನೇ ವ್ಯವಸ್ಥಿತವಾಗಿ ಒಪ್ಪಿಸಸುವುದನ್ನು ವಿರೋಧ ಮಾಡಬೇಕಾಗಿದೆ.

ಕಠಿಣವಾದ, ಜನರ ಆಡು ಭಾಷೆಗ ದೂರವಾದ ಹಿಂದಿ, ಸಂಸ್ಕೃತ, ಇಂಗ್ಲೀಷ ಪದಗಳನ್ನು ಕನ್ನಡ ಅಕ್ಷರಗಳ ಮೂಲಕ ತುಂಬುತ್ತಿವೆ.

ಇದೇ ಪರಿವಾರ ಉರ್ದುವಿನಂತಹ ಭಾಷ ವಿರುದ್ಧವಾಗಿ ದೇಶೀಯ ಭಾಷೆ ಕನ್ನಡವನ್ನು ಮತೀಯ ಸಂಘರ್ಷಕ್ಕೆ ಬಳಸಿದರು. ಹಿಂದಿಯೇ ಇರಲಿ, ಉರ್ದುವೇ ಇರಲಿ ಆ ಭಾಷೆಗಳಿಂದ ಪಡೆಯಬೇಕಾದದ್ದು ಇದೆ, ಇತರೆ ಭಾಷೆಗಳಿಂದ ಇದೆ.

**ಸರ್ವಾಧಿಕಾರಿ ಬೆಳವಣಿಗೆ**

ದೇಶೀಯ ಭಾಷೆಗಳ ಬೆಳವಣಿಗೆಗ ಪ್ರೋತ್ಸಾಹ ನೀಡದೇ ಒಂದೇ ಭಾಷೆಯನು ಹೇರುವುದು ಸರ್ವಾಧಿಕಾರಿಯಾದ್ದು. ಇಂತಹ ಪ್ರಯತ್ನಗಳು ದೇಶದ ಐಕ್ಯತೆ, ಸಮಗ್ರತೆಗ ಅಪಾಯ ತರಲಿವೆ. ದೇಶವನ ಛಿದ್ರಗೊಳಿಸಲಿವೆ. ಸರ್ಕಾರದ ತ್ರಿಭಾಷಾ ಸೂತ್ರವಂತೂ ಮೂರ್ಖತನದಿಂದ ಕೂಡಿದೆ.

**ರಾಜ್ಯಗಳನ್ನೊಡೆಯುವ ನೀತಿ**

ದೇಶವನ್ನು ಹೊಡೆಯುವ ಇಂತಹ ನೀತಿಗಳನ್ನು ಅನುಸರಿಸುತ್ತಿರುವಾಗಲೇ ಬಿಜೆಪಿ ಈಗಿರುವ ಭಾಷವಾರು ಪ್ರಾಂತ್ಯಗಳನ್ನು 6 ರಾಜ್ಯಗಳನ್ನಾಗಿ ಒಡೆಯಲು ಯೋಚಿಸಿದೆ ಅನಭಿವೃದ್ಧಿ, ಅಸಮಾನತೆ, ನಿರ್ಲಕ್ಷದಿಂದ ಹಲವಾರು ಪ್ರದೇಶಗಳು, ಗುಡ್ಡಗಾಡುಗಳ ವಿವಿಧ ಜಾತಿ ಜನಾಂಗಗಳು ತುಂಬಾ ಹಿಂದುಳಿದು ಚಳುವಳಿ ನಡೆಸುತ್ತಿವೆ. ಹಲವೆಡೆ ತಮ್ಮದೇ ರಾಜ್ಯ ನಿರ್ಮಾಣವಾದರೇ ಪ್ರಗತಿಸಾಧಿಸಬುಧು ಎಂದು ತಪ್ಪಾಗಿ ಭಾವಿಸಿವೆ. ಕೆಲವು ಬಾರಿ ಆ ಪ್ರದೇಶಗಳ ಭೂಮಾಲಕರು, ಸ್ಥಾಪಿತ ಹಿತಾಸ್ತಕಿಗಳು ಇಂತಹ ಪ್ರತ್ಯೇಕತೆಯ ಕೂಗು ಎಬ್ಬಿಸುತ್ತಾರೆ. ಕರ್ನಾಟಕದಲ್ಲಿ ಕೊಡಗು ಪ್ರತ್ಯೇಕ ಆಗಬೇಕು ಎಂದಲ್ಲಿ ಆ ಶಕ್ತಿಗಳೊಂದಿಗೆ ಭೂಮಾಲಕರ ಬೆಸುಗೆ ಇದೆ, ಇದಕ್ಕೆ ಬಿಜೆಪಿ ಸಂಘಪರಿವಾರ ಸಕ್ರೀಯವಾಗಿ ಬೆಂಬಲಿಸುತ್ತದೆ.


ಹೈದ್ರಾಬಾದ್ ಕರ್ನಾಟಕ, ಉತ್ತರ ಕರ್ನಾಟಕ ಪ್ರತ್ಯೇಕಗೊಳಿಸಲು ಹಲವು ರೀತಿಯ ಬೆದರಿ ಕೇಳುತ್ತಿದೆ. ಬಿಜೆಪಿಗೆ ನಿಜವಾಗಿ ಈ ಪ್ರದೇಶಗಳ ಅಭಿವೃದ್ಧಿಯಾಗಬೇಕೆಂದಿದ್ದರೆ ರಾಜ್ಯಕ್ಕೆ ಹೆಚ್ಚಿನ ಸಂಪತ್ತನ್ನು ನೀಡಿ ಸರ್ವತೋಮುಖ ಅಭಿವೃದ್ಧಿ ಸಾಧಿಸಲು ಸಹಾಯ ನೀಡಲು ತ ಮೂಲಭೂತ ನೀತಿ ಬದಲಾಯಿಸಿಕೊಳ್ಳಲಿ ಇದು ಅವರಿಗೆ ಬೇಕಾಗಿಲ್ಲ. ಹೀಗೆ ದುರ್ಬಲ ರಾಜ್ಯಗಳಿದ್ದರೆ ಕೇಂದ್ರದಲ್ಲಿ, ಅಧಿಕಾರ ಕೇಂದ್ರೀಕರಣಗೊಂಡು ಸರ್ವಾಧಿಕಾರ ನಡೆಸಬಹುದು: ದುಡಿಯುವ ಜನರ ಸುಲಿಗೆಯನ್ನು ಎಣೆಯಿಲ್ಲದೇ ನಡೆಸಬಹುದು ಹೀಗೆ ತಮ್ಮ ಹಿಂದುತ್ವದ ಅಂಜೆಂಡಾ ತರಬಹುದು. ಆದಾಗಿಯೋ ಪಾರ್ಲಿಮೆಂಟರಿ ಪ್ರಜಾಪ್ರತ್ವವನ್ನೇ ಕಿತ್ತೆಸೆ ಅಧ್ಯಕ್ಷೀಯ ಮಾದರಿ ಸರ್ಕಾರದ ಬ ಪ್ರಚರಿಸುತ್ತಿದ್ದಾರೆ. ಇದು ಬಹುರಾಷ್ಟ್ರೀಯ ಕಂಪನಿಗಳಿಗೆ, ಸಾಮ್ರಾಜ್ಯಶಾಹಿಗಳಿಗೆ ಬೇಕಾಗಿದೆ ಇದನ್ನು ಎದುರಿಸಿ ಭಾಷೆ-ಭಾಷವಾರು ಪ್ರಾಂತ್ಯಗಳು ಉಳಿದು ಬೆಳೆಯಲೇಬೇಕು. ಇದು ಪ್ರಜಾಪ್ರಭುತ್ವ ಮತ್ತು ಸರ್ವಾಧಿಕಾರದ ನಡು ಮತ ನಿರಪೇಕ್ಷತೆ ಮತ್ತು ಕೋಮುವಾದದ ನಡು ಕೇಂದ್ರೀಕರಣ ಮತ್ತು ವಿಕೇಂದ್ರೀಕರಣ ನಡು ಅಳಿವು ಉಳಿವಿನ ಹೋರಾಟವಾಗಿದೆ.

## ಕರ್ನಾಟಕ ಏಕೀಕರಣದಲ್ಲಿ ಕಮ್ಯುನಿಸ್ಟರ ಪಾತ್ರ

ಏಕೀಕರಣ ಚಳುವಳಿ ಹಿಂದಿನಿಂದಲೇ(30 ರ ದಶಕದಿಂದಲೇ) ಆರಂಭವಾಗಿತ್ತು. ಅದಕ್ಕೆ ನಾವು ಬೆಂಬಲ ನೀಡುತ್ತಾ ಬಂದಿದ್ದೇವೆ. ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಇದು ಗರಿಗೆದರಿಕೊಂಡಿತು. 1952 ರ ನಂತರದ ಅವಧಿಯಲ್ಲಿ ಅದನ್ನು ಪ್ರಮುಖ ರಾಜಕೀಯ ಪ್ರಶ್ನೆಯಾಗಿ ಎತ್ತಿಕೊಂಡೆವು. ಕರ್ನಾಟಕದ ಕಾಂಗ್ರೆಸ್ ಸಹ ಏಕೀಕರಣಕ್ಕೆ ಬೆಂಬಲ ನೀಡಿತ್ತು. ಆದರೆ ಕಾಂಗ್ರೆಸ್ ಪಕ್ಷದೊಳಗೆ ತನ್ನ ಕೇಂದ್ರೀಯ ನಾಯಕರ ಮೇಲೆ ಒತ್ತಡ ಹೇರಲು ಹಿಂಜರಿಯುತ್ತಿತ್ತು. ಇದಕ್ಕೆ ವಿರುದ್ಧವಾಗಿ ಕಮ್ಯೂನಿಸ್ಟ್ ಪಕ್ಷ ಭಾಷೆಯ ಆಧಾರದ ಮೇಲೆ ಪುನರ್ ವಿಂಗಡಣೆ ಮಾಡಬೇಕೆಂದು ಸಾರ್ವಜನಿಕ ಒತ್ತಾಯದ ಮೇರೆಗೆ ಕೇಂದ್ರ ಸರ್ಕಾರದಿಂದ ನೇಮಿತವಾದ ರಾಜ್ಯ ಪುನರ್ ವಿಂಗಡಣಾ ಆಯೋಗದ ಮುಂದೆ ಪಕ್ಷ ಪುನರ್ ವಿಂಗಡಣೆಯ ಆಧಾರಗಳನ್ನು ಮನವಿ ರೂಪದಲ್ಲಿ ಮಂಡಿಸಿತು. ಗ್ರಾಮವನ್ನು ಒಂದು ಘಟಕವಾಗಿ ತೆಗೆದುಕೊಳ್ಳುವುದು ಭಾಷಾ ಪ್ರದೇಶಗಳ ನಿರಂತರತೆ ( ಅಂದರೆ ಒಂದು ಭಾಷಾ ಪ್ರದೇಶದ ಮಧ್ಯೆ ಕೆಲವು ಗ್ರಾಮಗಳು ಅನ್ಯ ಭಾಷಿಯವಾದರೆ ಅವು ಬಹುಮತ ಭಾಷೆಯ ರಾಜ್ಯದಲ್ಲಿ ಉಳಿಯುವುದು) ಮತ್ತು ಅಲ್ಪ ಸಂಖ್ಯಾತ ಭಾಷಿಯರಿಗೆ ಸೂಕ್ತ ರಕ್ಷಣೆ ಈ ಮನವಿಯ ಮುಖ್ಯ ಅಂಗಗಳಾಗಿದ್ದವು. ಇದನ್ನು ಆಯೋಗವಾಗಲಿ, ಕೇಂದ್ರ ಸರ್ಕಾರವಾಗಲಿ, ಕಾಂಗ್ರೆಸ್ ಪಕ್ಷವಾಗಲಿ ಒಪ್ಪಲಿಲ್ಲ. ತಾಲ್ಲೂಕು ಘಟಕವಾಗಿತ್ತು. ಹಲವೊಮ್ಮೆ ನಿಖರವಾದ ವೈಜ್ಞಾನಿಕ ನೀತಿಯಿಲ್ಲದೆ ಆಯೋಗ ಕೆಲಸ ಮಾಡಿತು. ಇದರಿಂದಾಗಿ ಕಾಸರಗೋಡು, ಬೆಳಗಾಂ ಸಮಸ್ಯೆ ಉಂಟಾಯಿತು.

ಹಿಂದೆ ಜವಾಬ್ದಾರಿ ಸರ್ಕಾರ ಚಳುವಳಿಯ ಹಾಗೆ, ರೈತ- ಕಾರ್ಮಿಕರನ್ನು ಏಕೀಕರಣ ಚಳುವಳಿಯಲ್ಲಿ ಭಾಗವಹಿಸುವಂತೆ ಮಾಡುವ ಮೂಲಕ ಹೊಸ ರೂಪ ಕೊಟ್ಟಂತಾಯಿತು. ರಾಜ್ಯದ ಪ್ರಜಾಸತ್ತಾತ್ಮಕ ಚಳುವಳಿ ದುಡಿಯುವ ವರ್ಗ ತನ್ನ ಪಾತ್ರವನ್ನು ನಿರ್ವಹಿಸಿದ್ದರಿಂದ ಬಲ ಗೊಂಡಿತು. ನಾವು ರಾತ ಕಾರ್ಮಿಕರಕಣದಿಂದ ಮಾತ್ರ ಇದು ಸಾಧ್ಯ. ಆಗ ಒಂದೇ ಥರದ ಒಕ್ಕಲುತನ ಕಾನೂನಿಗೆ ಪ್ರಬಲ ಒತ್ತಾಯ ತರಬಹುದು. ಕಾರ್ಮಿಕರಿಗೆ ವಿಷಮತೆ ಇದೆ. ದುಡಿಯುವ ವರ್ಗದ ಹಿತಾಸಕ್ತಿಗಳ ರಕ್ಷಣೆಗೆ ಅಗತ್ಯವಾದ ಐಕ್ಯ ಪ್ರಬಲ ಸಂಘಟನೆ ಕಟ್ಟಲು ಏಕೀಕರಣ ಅಗತ್ಯವನ್ನು ರೈತ- ಕಾರ್ಮಿಕರಿಗೆ ಮನವರಿಕೆ ಮಾಡಿಕೊಟ್ಟೆವು.

(ಎನ್.ಎಲ್. ಉಪಾಧ್ಯಾಯ ಜೊತೆಗೆ ಐಕ್ಯರಂಗ 86 ರ ನವೆಂಬರ್ ವಿಶೇಷಾಂಕ ಮಾಡಿದ ಸಂದರ್ಶನದಿಂದ)



# ಪೋಪ್ ವಿರುದ್ಧ ಸಲ್ಲದ ಪ್ರಚೋದನೆ



ನಿತ್ಯಾನಂದಸ್ವಾಮಿ

13ನೇ ಲೋಕಸಭಾ ಚುನಾವಣೆಯ ಫಲಿತಾಂಶಗಳ ಪ್ರಕಟಣೆ ಮುಕ್ತಾಯಗೊಳ್ಳುತ್ತಾ ಕೇಂದ್ರದಲ್ಲಿ ಬಿ.ಜೆ.ಪಿ. ನೇತೃತ್ವದ ಸರ್ಕಾರ ಮತ್ತೆ ಅಧಿಕಾರ ವಹಿಸಿಕೊಳ್ಳುವುದು ಖಚಿತವಾಗುತ್ತಿದ್ದಂತೆ ಬಿ.ಜೆ.ಪಿ. ಬಳಗದ ವಿಶ್ವಹಿಂದೂ ಪರಿಷತ್ ಭಾರತಕ್ಕೆ ಪೋಪ್ ನೀಡಲಿರುವ ಭೇಟಿಯ ವಿರುದ್ಧ ಪ್ರಚೋದನಾತ್ಮಕ ಹೇಳಿಕೆಗಳನ್ನು ನೀಡತೊಡಗಿತು. ಬಿ.ಜೆ.ಪಿಯ ರಾಷ್ಟ್ರೀಯ ಮುಖಂಡತ್ವವು ಇದನ್ನು ಕೇಳಿಯೂ ಕೇಳದವರಂತೆ ನಟಿಸಿತು. ಪೋರ್ಚುಗೀಸರು ಗೋವೆಯಲ್ಲಿ ಹಿಂದುಗಳ ಮೇಲೆ ನಡೆಸಿದ ಅತಿರೇಕಗಳಿಗೆ ಹಿಂದೂ ಬಲವಂತದ ಮತಾಂತರಗಳಿಗೆ ಪೋಪ್ ಕ್ಷಮೆಯಾಚಿಸಬೇಕು; ಹಿಂದೂ ಧರ್ಮದ ಆಚರಣೆಯಿಂದಲೂ ಮೋಕ್ಷ ಪಡೆಯಬಹುದೆಂದು ಕ್ರಿಶ್ಚಿಯನ್ ಧರ್ಮಗುರು ಘೋಷಿಸಬೇಕು; ಅಲ್ಲದೆ ಭಾರತದಲ್ಲಿ ಧಾರ್ಮಿಕ ಮತಾಂತರವನ್ನು ಚರ್ಚ್ ಕೈಬಿಡಬೇಕು ಎಂದು ಸಂಘ ಪರಿವಾರದವರು ಅಪ್ಪಣೆ ಕೊಡಿಸಿದ್ದಾರೆ. ತಾವು ವಿಧಿಸುವ ಶರತ್ತುಗಳಿಗೆ ಪೋಪರು ಒಪ್ಪದೆ ಹೋದರೆ ಅವರ ಭೇಟಿಯ ವಿರುದ್ಧ ದೇಶಾದ್ಯಂತ ಪ್ರತಿಭಟನಾ ಆಂದೋಲನ ನಡೆಸುವ ಬೆದರಿಕೆಯನ್ನು ಹಾಕಲಾಗಿದೆ. ವಿವಾದದ ಬಗ್ಗೆ ಚರ್ಚಿನ ಪ್ರತಿಕ್ರಿಯೆಗೆ ಕಾಯುವ ಸೌಜನ್ಯವನ್ನು ತೋರದೆ, ಪೋಪರ ಭಾರತ ಭೇಟಿಯ ವಿರುದ್ಧ ಪ್ರತಿಭಟಿಸಲು 'ಧರ್ಮಜಾಗರಣ ಯಾತ್ರೆ'ಯನ್ನು ಹೊರಡಿಸಲಾಗಿದೆ. 'ಸಂಸ್ಕೃತಿ ರಕ್ಷಾ ಮಂಚ್' ಎಂಬ ಹೊಸ ಮುಖವಾಡ ಧರಿಸಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ(ಆರ್‌ಎಸ್‌ಎಸ್) ಕ್ಕೆ ಸೇರಿದ ಹಿಂದೂ ಸಂಘಟನೆಗಳು ಭಾಗವಹಿಸುತ್ತಿರುವ ಈ ಯಾತ್ರೆ ಈಗಾಗಲೇ ಗೋವೆಯಿಂದ ಹೊರಟಿದ್ದು, ಮಹಾರಾಷ್ಟ್ರ, ಗುಜರಾತ್ ಹಾಗೂ ರಾಜಸ್ತಾನದ ಮೂಲಕ ಹಾದು ನವೆಂಬರ್ 4 ರಂದು ಅಂದರೆ ಪೋಪ್ ಆಗಮನದ ಹಿಂದಿನ ದಿನ ದೆಹಲಿಯನ್ನು ತಲುಪಲಿದೆಯಂತೆ. ಪೋಪ್ ಪ್ರವಾಸವನ್ನು ವಿರೋಧಿಸಿ ದೆಹಲಿ ಹನುಮಾನ್ ಮಂದಿರದಲ್ಲಿ ಹವನವನ್ನು ಏರ್ಪಡಿಸಲಾಗಿತ್ತಲ್ಲದೆ ಪೋಪ್ ಜಾನ್ ಪಾಲರ ಪ್ರತಿಕೃತಿಯನ್ನು ದಹನ ಮಾಡಲಾಗಿದೆ. ಪೋಪರ ವಿರುದ್ಧ ಅಸ್ಸಾಂ ರಾಜ್ಯದಲ್ಲಿ ವಿ.ಹೆಚ್.ಪಿ. ನಡೆಸುತ್ತಿರುವ ಸಭೆಗಳ ಕಾರಣದಿಂದಾಗಿ ಹಿಂದೂ ಹಾಗೂ ಕ್ರಿಶ್ಚಿಯನ್ ಸಮುದಾಯಗಳ ನಡುವೆ ಪ್ರಕ್ಷುಬ್ಧತೆ ಹರಡುತ್ತಿದೆ ಎಂಬ ವರದಿಗಳಿವೆ. ಪೋಪ್ ಅವರಿಗೆ ಭಾರತ ಪ್ರವಾಸ ಕೈಗೊಳ್ಳುವ ಹಕ್ಕಿದೆಯೇ ಎಂದು ಪ್ರಶ್ನಿಸುವ ಕರಪತ್ರಗಳನ್ನು ದೇಶಾದ್ಯಂತ ಹಂಚಲಾಗುತ್ತಿದೆ. ಗೋವಾ-ದೆಹಲಿ ಜಾಗರಣ ಅಭಿಯಾನವನ್ನು ಉದ್ಘಾಟಿಸಿ ಭಾಷಣ ಮಾಡಿದ ಸಾಧ್ವಿ ರಿತಾಂಬರ ಅವರು ಪೋಪ್ ಅವರನ್ನು ಕಟುವಾಗಿ ಟೀಕಿಸಿರುವುದು ವರದಿಯಾಗಿದೆ.

ಕ್ರಿಶ್ಚಿಯನ್ ಧರ್ಮಗುರುಗಳು ಭಾರತಕ್ಕೆ ಭೇಟಿ ನೀಡುತ್ತಿರುವುದು ಇದೇ ಮೊದಲಲ್ಲ. ಈಗ ಆಗಮಿಸುತ್ತಿರುವ ಪೋಪ್ ಜಾನ್ ಪಾಲರು ಸಹ ಭಾರತಕ್ಕೆ ಬರುತ್ತಿರುವುದು ಇದು ಎರಡನೆಯ ಸಲ. ಎಂಬತ್ತರ ದಶಕದಲ್ಲಿ ಇವರು ಭಾರತಕ್ಕೆ ಬಂದಾಗ ಅವರ ಭೇಟಿಯ ವಿರುದ್ಧ ಇಷ್ಟೊಂದು ಪ್ರಚೋದನೆ ಇರಲಿಲ್ಲ. ಪೋಪ್ ಕ್ಷಮೆ ಕೋರಬೇಕು ಎಂಬ ಉದ್ಧಟತನದ ಷರತ್ತು ಹೇರಲು ಸಂಘ ಪರಿವಾರ ಧೈರ್ಯ ತೋರಿರಲಿಲ್ಲ. ವಾಜಪೇಯಿ ಸರ್ಕಾರ ಮತ್ತೆ ಅಧಿಕಾರಕ್ಕೆ ಬಂದಿರುವುದರಿಂದ ದೇಶದಲ್ಲಿಂದು ಕಡು ಕೇಸರಿವಾದಿಗಳಿಗೆ ಎಲ್ಲಿಲ್ಲದ ಕುಮ್ಮಕ್ಕು ಸಿಕ್ಕಂತಾಗಿದೆ. ವಾಜಪೇಯಿ ಸರ್ಕಾರದ 13 ತಿಂಗಳ ಅಧಿಕಾರಾವಧಿಯಲ್ಲಿ ದೇಶದಲ್ಲಿ, ಅದರಲ್ಲೂ ವಿಶೇಷವಾಗಿ ಗುಜರಾತ್, ರಾಜಸ್ತಾನ, ಒರಿಸ್ಸಾ, ಮಧ್ಯಪ್ರದೇಶ ಮುಂತಾದ ರಾಜ್ಯಗಳಲ್ಲಿ ಕ್ರಿಶ್ಚಿಯನ್ ಪ್ರಾರ್ಥನಾ ಮಂದಿರಗಳ ಮೇಲೆ ದಾಳಿ, ಕ್ರಿಶ್ಚಿಯನ್ ಸನ್ಯಾಸಿನಿಯರ ಮಾನಭಂಗ ಹಾಗೂ ಕ್ರಿಶ್ಚಿಯನ್ ಪಾದ್ರಿಗಳ ಹತ್ಯೆಯಂತಹ ಪ್ರಕರಣಗಳು ಹೆಚ್ಚಾಗಿವೆ. ಈಗ ಪೋಪರ ಭೇಟಿಯ ವಿರುದ್ಧ ನಡೆಯುತ್ತಿರುವ ವ್ಯವಸ್ಥಿತ ಪ್ರಚಾರ ಕ್ರಿಶ್ಚಿಯನ್ನರ ಮೇಲೆ ಸಂಘ ಪರಿವಾರದವರು ಆರಂಭಿಸಿರುವ ದಾಳಿಯ ಮುಂದುವರೆದ ಭಾಗವಾಗಿದೆ ಎಂದರೆ ತಪ್ಪಾಗದು. ಬಿ.ಜೆ.ಪಿ. ನೇತೃತ್ವದ ಸರ್ಕಾರ ಮತ್ತೆ ಕೇಂದ್ರದಲ್ಲಿ ಅಧಿಕಾರಕ್ಕೆ ಬರಲು ಸಾಧ್ಯವಾಗಿರುವುದು ಸನಾತನವಾದಿ ಮತಾಂಧ ಶಕ್ತಿಗಳನ್ನು ಬಲಪಡಿಸಿದೆ.




ಸಂಘ ಪರಿವಾರದವರ ವಾದಗಳಲ್ಲಿ ಅವರ ಅಂಧತ್ವ ಎದ್ದು ಕಾಣುತ್ತದೆ. ವ್ಯಾಟಿಕನ್ ಮುಖ್ಯಸ್ಥರಾಗಿ ಪೋಪ್ ಭಾರತಕ್ಕೆ ಆಗಮಿಸುತ್ತಿದ್ದರೆ ಅವರು ಯಾವುದೇ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಬಾರದೆಂದೂ, ಧಾರ್ಮಿಕ ಉದ್ದೇಶಗಳಿಗಾಗಿಯೇ ಭಾರತಕ್ಕೆ ಭೇಟಿ ನಿಡುವುದಿದ್ದರೆ ಸರ್ಕಾರ ಅವರನ್ನು ಸರ್ಕಾರಿ ಅತಿಥಿ ಎಂದು ಪರಿಗಣಿಸಬಾರದು ಎಂದು ವಿ.ಹೆಚ್.ಪಿ.ಯ ಉಪಾಧ್ಯಕ್ಷ ಆಚಾರ್ಯ ಗಿರಿರಾಜ್ ಕಿಶೋರ್ ಅಪ್ಪಣೆ ಕೊಡಿಸಿದ್ದಾರೆ. ವಾಜಪೇಯಿ ಅವರು ಪ್ರಧಾನಿಯಾಗಿ ಯಾವುದೇ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಬಾರದು ಎಂದು ವಿ.ಹೆಚ್.ಪಿ. ಅಪ್ಪಣೆಕೊಡಿಸುವುದೆ? ಸುಮಾರು ಒಂದು ಶತಮಾನದ ಹಿಂದೆ ಸ್ವಾಮಿ ವಿವೇಕಾನಂದರು ಅಮೆರಿಕದ ಚಿಕಾಗೋ ನಗರಕ್ಕೆ ಹೋಗಿ ಹಿಂದು ಧರ್ಮದ ಹೆಗ್ಗಳಿಕೆಯನ್ನು ವಿಶ್ವಕ್ಕೇ ಸಾರಿ ಬಂದರು ಎಂದು ಹೆಮ್ಮೆಯಿಂದ ಹೇಳಿಕೊಳ್ಳುವ ದೇಶದಲ್ಲಿ ಇನ್ನೊಂದು ಧರ್ಮದ ಗುರುಗಳೊಬ್ಬರು ಬರುತ್ತಿರುವುದಕ್ಕೆ ಈ ರೀತಿಯ ಆಕ್ಷೇಪ ಸಮರ್ಥನೀಯವಲ್ಲ. ಹಿಂದೂ ಮಠಾಧೀಶರು ಆಗಾಗ್ಗೆ ಮತ ಪ್ರಚಾರಕ್ಕಾಗಿ ವಿದೇಶ ಪ್ರವಾಸ ಕೈಗೊಳ್ಳುವ ಬಗ್ಗೆ ಏಕೆ ಆಕ್ಷೇಪವಿಲ್ಲ? ವಿದೇಶಕ್ಕೆ ಹೋಗುವ ಹಿಂದೂ ಮಠಾಧೀಶರಿಗೆ ಇದೇ ರೀತಿಯಲ್ಲಿ ಅಲ್ಲಿಯ ಕ್ರಿಶ್ಚಿಯನ್ನರು ವಿರೋಧ ವ್ಯಕ್ತಪಡಿಸಿದರೆ ಹೇಗೆ? ನಮ್ಮ ವಿವೇಕಾನಂದರುಗಳಿಗೆ, ಶಂಕರಾಚಾರ್ಯರುಗಳಿಗೆ ವಿದೇಶಗಳಲ್ಲಿ ಗೌರವ ಸಿಗಬೇಕು, ಆದರೆ ವಿದೇಶದಿಂದ ಬರುವ ಅತಿಥಿಗಳನ್ನು ಇಲ್ಲಿ ಅಗೌರವಿಸಬೇಕು ಎನ್ನುವ ಇವರ ವಾದ ಭಾರತೀಯ ಸಂಸ್ಕೃತಿಗೆ ಪರಕೀಯವಾದದ್ದು. ಧಾರ್ಮಿಕ ಮುಖಂಡ ಟಿಬೆಟಿನ ದಲೈಲಾಮರಿಗೆ ದೇಶದಲ್ಲೆಲ್ಲಾ ಓಡಾಡಲು ಭಾರತ ಸರ್ಕಾರ ಸೌಕರ್ಯ ಕಲ್ಪಿಸಿಲ್ಲವೇ?

ಪೋಪ್ ಮತಪ್ರಚಾರಕರಾಗಿ ಒಪ್ಪುವ ವ್ಯವಸ್ಥೆ ಇರುವಲ್ಲಿ ಧರ್ಮಪ್ರಚಾರ ಒಂದು ಕಾನೂನುಬದ್ಧ ಚಟುವಟಿಕೆ ಆಗಿರುತ್ತದೆ. ಭಾರತದ ಸಂವಿಧಾನವು ಸಹ ಮತ ಧರ್ಮದಲ್ಲಿ ವಿಶ್ವಾಸವಿಡುವ, ಆಚರಣೆ ಮಾಡುವ ಹಾಗೂ ಪ್ರಚಾರ ಮಾಡುವ ಹಕ್ಕನ್ನು ನೀಡಿದೆ. ಒಂದು ಮತಧರ್ಮವನ್ನು ತ್ಯಜಿಸಿ ಇನ್ನೊಂದು ಮತಧರ್ಮವನ್ನು ಸ್ವೀಕರಿಸುವುದು, ಇನ್ನೊಂದು ಮತಧರ್ಮಕ್ಕೆ ಸೇರಿಸಿಕೊಳ್ಳುವುದು ಅಕ್ರಮವಲ್ಲ. ಇಂದು ಹಿಂದಿನಿಂದಲೂ ನಡೆದು ಬಂದಿದೆ. ಹಿಂದೆ ಅಶೋಕ ಚಕ್ರವರ್ತಿಯ ಕಾಲದಲ್ಲಿ ಬೌದ್ಧ ಧರ್ಮ ಪ್ರಚಾರಕ್ಕಾಗಿ ಬೌದ್ಧ ಭಿಕ್ಷುಗಳನ್ನು ದೇಶವಿದೇಶಗಳಲ್ಲಿ ಕಳುಹಿಸಿದ್ದನ್ನು ಭಾರತದ ಚರಿತ್ರೆಯಲ್ಲಿ ಹೆಮ್ಮೆಯಿಂದ ಸ್ಮರಿಸಲಾಗುತ್ತದೆ. ಆದ್ದರಿಂದಲೇ ಇಂದು ಭಾರತದಲ್ಲಿ ಹುಟ್ಟಿದ ಬೌದ್ಧ ಧರ್ಮವು ಚೀನಾ, ಜಪಾನ್, ಶ್ರೀಲಂಕಾ, ಮಲೇಶಿಯಾ, ಸಿಂಗಾಪೂರ, ಜಾವ, ಸುಮಾತ್ರ, ಕಾಂಬೋಡಿಯಾದಲ್ಲಿ ಜನಪ್ರಿಯವಾಗಿ ಉಳಿದುಕೊಂಡಿದೆ. ರಾಮಕೃಷ್ಣ ಮಿಶನ್, ಹರೇಕೃಷ್ಣ ಪಂಥಗಳು ಇಂದು ಪಾಶ್ಚಾತ್ಯ ದೇಶಗಳಲ್ಲಿ ಹಿಂದೂ ಧರ್ಮಪ್ರಚಾರ ಕಾರ್ಯದಲ್ಲಿ ತೊಡಗಿರುವುದು ಗುಟ್ಟಿನ ವಿಷಯವೇನಲ್ಲ. ಮತಧರ್ಮಗಳು ಇರುವವರೆಗೂ ಮತಧರ್ಮಗಳ ಪ್ರಚಾರವೂ ಇದ್ದೇ ಇರುವುದು.

ಕ್ರಿಶ್ಚಿಯನ್ ಮತಪ್ರಚಾರಕರು ಭಾರತದಲ್ಲಿ ಬಲವಂತದಿಂದ, ಮೋಸದಿಂದ, ಆಸೆ ಆಮಿಷವೊಡ್ಡಿ ಹಿಂದೂಗಳನ್ನು ಮತಾಂತರ ಮಾಡುತ್ತಾ ಬಂದಿದ್ದಾರೆ ಎಂಬ ಆಕ್ಷೇಪ ಎತ್ತಲಾಗುತ್ತದೆ. ಬಲವಂತದ ಮತಾಂತರ ಮತಾಂತರವೇ ಆಗಲಾರದು. ಮತಧರ್ಮವನ್ನು ಸ್ವಇಚ್ಛೆಯಿಂದ, ಸ್ವತಂತ್ರವಾಗಿ ಆಯ್ಕೆಮಾಡಬೇಕಾದ್ದು. ತಂದೆತಾಯಿಗಳು ಒಪ್ಪಿರುವ ಮತಧರ್ಮವನ್ನು ಮಕ್ಕಳ ಮೇಲೆ ಹೇರುವುದು ಸಹ ಸರಿಯಾದ ಕ್ರಮವಲ್ಲ. ಮಕ್ಕಳು ಪ್ರಬುದ್ಧರಾದ ನಂತರ ತಮಗೆ ಬೇಕಾದ ಮತಧರ್ಮವನ್ನು ಆಯ್ಕೆ ಮಾಡುವ ಅಥವಾ ಯಾವುದೇ ಮತಧರ್ಮವನ್ನು ಅನುಸರಿಸದೆ ಬದುಕುವ ಹಕ್ಕು ಅವರಿಗಿದೆ. ಹಿಂದೂಗಳನ್ನು ಬಲವಂತವಾಗಿ ಮತಾಂತರ ಮಾಡುತ್ತಿದ್ದಾರೆ ಎಂದು ಆರೋಪಿಸುವ ಇವರು ತಮ್ಮ ಮಕ್ಕಳಿಗೆ ಧಾರ್ಮಿಕ ಸ್ವಾತಂತ್ರ್ಯ ನೀಡಲು ಸಿದ್ಧರಿದ್ದಾರಾ? ಬಲವಂತದ ಮತಾಂತರವನ್ನು ತಡೆಯಲು ಮತ್ತು ಅಪರಾಧಿಗಳನ್ನು ಶಿಕ್ಷಿಸಲು ದೇಶದ ಕಾನೂನುಗಳಲ್ಲಿ ಕೊರತೆಯಿಲ್ಲ. ಅಂತಹ ಪ್ರಕರಣಗಳನ್ನು ಬಯಲಿಗೆಳೆದು ಕಾನೂನು ಕ್ರಮ ಜರುಗಿಸುವ ಬದಲು ಒಂದು ಸಮುದಾಯದ ವಿರುದ್ಧ ಆಕ್ರಮಣಕಾರಿ ಅಪಪ್ರಚಾರ ಮಾಡುವುದು ಸರಿಯಲ್ಲ. ಭಾರತದಲ್ಲಿ ಕ್ರಿಶ್ಚಿಯನ್ ಧರ್ಮದ ಪ್ರಚಾರ ಸುಮಾರು 2000 ವರ್ಷಗಳ ಹಿಂದೆಯೇ ಆರಂಭವಾಗಿದೆ. ಆದಾಗ್ಯೂ ಭಾರತದಲ್ಲಿ ಕ್ರಿಶ್ಚಿಯನ್ನರು ಒಟ್ಟು ಜನಸಂಖ್ಯೆಯ ಶೇಕಡ 2.5 ರಷ್ಟು ಮಾತ್ರ ಇದ್ದಾರೆ. ಇಲ್ಲಿ ಭಾರೀ ಪ್ರಮಾಣದಲ್ಲಿ ಬಲವಂತದ ಮತಾಂತರ ನಡೆದಿದೆ ಅಥವಾ ನಡೆಯುತ್ತಿದೆ ಎಂಬ ವಾದವನ್ನು ಈ ಅಂಕಿ ಅಂಶಗಳು ದೃಢೀಕರಿಸುವುದಿಲ್ಲ.

ಪೋರ್ಚುಗೀಸರ ಕಾಲದಲ್ಲಿ ನಡೆದ ಅತಿರೇಕಗಳಿಗೆ ಪೋಪ್ ಕ್ಷಮೆ ಕೋರಬೇಕು ಎಂಬುದು ವಿಹೆಚ್‌ಪಿ ಅವರ ಇನ್ನೊಂದು ಷರತ್ತು. ಇಂದು ಯಾರು ಯಾರ ಕ್ಷಮೆ ಕೋರಬೇಕು. ಎಂಬುದು ದೊಡ್ಡ ಪ್ರಶ್ನೆ. ಭಾರತಕ್ಕೆ ಬಂದ ಪ್ರಥಮ ಕ್ರಿಶ್ಚಿಯನ್ ಮತಪ್ರಚಾರಕ ಸೈಂಟ್ ಥಾಮಸ್‌ರಿಂದ ಹಿಡಿದು ಇತ್ತೀಚೆಗೆ ಒರಿಸ್ಸಾದಲ್ಲಿ ಹತ್ಯೆಗೊಳಗಾದ ಸ್ಟೇಯಿನ್ಸ್ ಹಾಗೂ ಅರುಳ್‌ದಾಸ್‌ವರೆಗೆ ಅನೇಕ ಕ್ರಿಶ್ಚಿಯನ್ ಮಿಶನರಿಗಳನ್ನು ಹಿಂದೂ ಸನಾತನ ವಾದಿಗಳು ಕೊಲೆಗೈದಿದ್ದಾರೆ. ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ನಂತರವಂತೂ ಕ್ರಿಶ್ಚಿಯನ್ ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯಗಳು ಮಿತಿಮೀರಿವೆ. ಅಪರಾಧಿಗಳಿಗೆ ವ್ಯವಸ್ಥಿತವಾದ

ಪುಟ 8 ಕ್ಕೆ

# ನವೆಂಬರ್ ಕನ್ನಡಿಗರು

ನವೆಂಬರ್ 01, ಕರ್ನಾಟಕ ರಾಜ್ಯೋತ್ಸವ, ಕರ್ನಾಟಕ ಏಕೀಕರಣದ 44 ನೇ ವಾರ್ಷಿಕೋತ್ಸವದ ಆಚರಣೆ. ನಿದ್ರಿಸುತ್ತಿರುವ ಕನ್ನಡದ 'ಉಗ್ರ ಹೋರಾಟಗಾರ'ರೆಲ್ಲ ಎಚ್ಚರಗೊಂಡು ಕಿರಿಚಾಡುವ, ಹಾರಾಡುವ, ಕುಣಿದಾಡುವ, ನಲಿದಾಡುವ ತಿಂಗಳು ನವೆಂಬರ್. ವೇದಿಕೆಗಳ ಮೇಲೆ, ಮೈಕುಗಳ ಮೂಲಕ ತಮ್ಮ ಕನ್ನಡ ಪ್ರೇಮವನ್ನು ಈ ನವೆಂಬರ್ ಕನ್ನಡಿಗರು, ಜಗಜ್ಜಾಹೀರು ಮಾಡಲು ತವಕಿಸುತ್ತಾರೆ ಈ ಅಪ್ಪಟ ಕನ್ನಡ ಪ್ರೇಮಿಗಳಿಗೆ ನವೆಂಬರ್ ಬಂತೆಂದರೆ ಸಾಕು ರೋಮಾಂಚನ! ಯಾಕೆ ಈ ರೋಮಾಂಚನ?

**ಕಲೆಕ್ಷನ್ ಕಿಂಗ್‌ಗಳು:**

ಈ ರೋಮಾಂಚನ ಯಾಕೆಂದರೆ ನವೆಂಬರ್ ಬಂತೆಂದರೆ ತಾವು ಸಂಗ್ರಹಿಸಲಿರುವ ವಂತಿಗೆ ಮೊತ್ತವನ್ನು ಊಹಿಸಿಕೊಂಡು ಈ ರೋಮಾಂಚನ ಸಂಭ್ರಮ ಸಂತೋಷ. ಕನ್ನಡ ಉಗ್ರ ಹೋರಾಟಗಾರರಿಗೆಲ್ಲ ನವೆಂಬರ್ ತಿಂಗಳೆಂದರೆ ಕಲೆಕ್ಷನ್ ತಿಂಗಳು, ರಾಜ್ಯೋತ್ಸವ ನೆಪದಲ್ಲಿ ಬಲವಂತವಾಗಿ ಲಕ್ಷಾಂತರ ರೂಪಾಯಿ ಸುಲಿಗೆ ಮಾಡಲಾಗುತ್ತದೆ. ಬೆಂಗಳೂರಿನ ಹೃದಯ ಭಾಗದಲ್ಲಿರುವ ಹಲವಾರು ಅನ್ಯಭಾಷಿಕ ಹೋಟೆಲ್ ಇನ್ನಿತರ ಉದ್ದಿಮೆದಾರರು, ಚಿಕ್ಕಪೇಟೆ, ಸುಲ್ತಾನ್ ಪೇಟೆ, ಬಳೇಪೇಟೆಯಲ್ಲಿರುವ ಮಾರ್ವಾಡಿಗಳು ಇವರ ಪ್ರಮುಖ ಗುರಿ. ತಮ್ಮ ಆಸ್ತಿ, ಪಾಸ್ತಿಗಳ ಉಳಿಯುವಿಕೆಗಾಗಿ ಅಪಾರ ಮೊತ್ತದ ಹಣವನ್ನು ಈ ನಾಡಾಂಬೆಯ ಪುತ್ರರಿಗೆ ನೀಡುವುದು ಅನಿವಾರ್ಯ ಎಂಬಂತ ಸ್ಥಿತಿ ಸೃಷ್ಟಿ ಮಾಡಲಾಗಿದೆ. ಕನ್ನಡದ ಇಬ್ಬರು ಪ್ರಮುಖ ಕನ್ನಡ ಹೋರಾಟಗಾರರು ಈ ಬಾಬ್ತಿನಲ್ಲಿ ವರ್ಷವೊಂದಕ್ಕೆ ಒಂದು ಕೋಟಿಗೂ ಹೆಚ್ಚು ಹಣ ತಮ್ಮ ಜೇಬಿಗೆ ಇಳಿ ಬಿಡುತ್ತಾರೆ ಎಂಬುದು ಬರೀ ಗಾಳಿಸುದ್ದಿಯೇನಲ್ಲ.

**ಕನ್ನಡ 'ಓರಾಟಗಾರರು'**

ನವೆಂಬರ್01 ರಂದು ರಾಜ್ಯೋತ್ಸವವನ್ನು ಆಚರಿಸುವ ನಾವು ಒಂದು ಇಂದು ಏಕೀಕರಣದ ಉದ್ದೇಶಗಳನ್ನು ಮರೆತಿದ್ದೇವೆ. ಇಂದು ರಾಜಧಾನಿಯಲ್ಲಿರುವ ಕನ್ನಡದ ಉಗ್ರಓರಾಟಗಾರರು ತಮ್ಮ ಸ್ವಾರ್ಥ ಸಾಧನೆಗೆ ರಾಜ್ಯೋತ್ಸವಗಳನ್ನು ನಡೆಸುತ್ತಾರೆ. ಈ ಓರಾಟಗಾರರಿಗೆ ಸಮಗ್ರ ಕರ್ನಾಟಕದ ಏಳ್ಗೆಯ ...ಸಾಧಿಸುವುದರ ಬಗ್ಗೆ ಯಾವ ಪರಿಕಲ್ಪನೆಯೂ ಇಲ್ಲ. ಇವರಿಗೆ ರಾಜ್ಯೋತ್ಸವವೆಂದರೆ ಅನ್ಯ ಬಾಷಿಕರಿಂದ ದುಡ್ಡು ಕೀಳುವುದು, ಅವರಿಗೆ ಕಿರುಕುಳ ನೀಡುವುದು ಉಗ್ರವಾಗಿ ಭಾಷಣ ಮಾಡುವುದು ಎಂದೇ ತಿಳಿದಿದ್ದಾರೆ. ವೇದಿಕೆಗಳ ಮೇಲೆ ವಾಚಮಗೋಚರವಾಗಿ ತಮಿಳರನ್ನು ಇನ್ನಿತರ ಅನ್ಯಬಾಷಿಕರನ್ನು ಬಯ್ಯುವುದು ಕನ್ನಡ ಪ್ರೇಮ ಎಂದು ಇವರು ತಿಳಿದಿದ್ದಾರೆ. ಇವರಿಗೆ ತಿಳಿಸಬೇಕಾಗಿದೆ. ಕನ್ನಡ ಪ್ರೇಮ ಎಂದು ಇವರು ತಿಳಿದಿದ್ದಾರೆ. ಇವರಿಗೆ ತಿಳಿಸಬೇಕಾಗಿದೆ. ಕನ್ನಡ ಪ್ರೇಮವೆಂದ ಅನ್ಯಭಾಷೆಗಳ ವಿರುದ್ಧವಲ್ಲ ಕನ್ನಡ ನಾಡಿನ ಏಳ್ಗೆ, ಬದುಕಿನ ಬಗೆಗೆ ಕಾಳಜಿ ಎಂದು.

- ಅನಂತ್

# .....ಪ್ರಚೋದನೆ ಯಾಕೆ?

ಪುಟ 7 ರಿಂದ

ರಕ್ಷಣೆಯನ್ನು ನೀಡಲಾಗುತ್ತಿದೆ. ಸ್ಟೇಯಿನ್ಸ್ ಮತ್ತು ಆತನ ಇಬ್ಬರು ಮಕ್ಕಳನ್ನು ನಿರ್ದಯವಾಗಿ ಜೀವಂತ ಸುಟ್ಟು ಹಾಕಿದ ಭಜರಂಗದಳದ ದಾರಾಸಿಂಗ್‌ನನ್ನು ಯಶಸ್ವಿಯಾಗಿ ಬಚ್ಚಿಡಲಾಗಿದೆ. ಈ ಘೋರ ಕೃತ್ಯಗಳಿಗೆ ಯಾರು ಕ್ಷಮೆ ಕೋರಬೇಕು? ದೇಶದ ಪ್ರಧಾನಿ ವಾಜಪೇಯಿ ಕ್ಷಮೆಯಾಚಿಸುವರೆ? ಗೃಹಮಂತ್ರಿ ಅಡ್ವಾನಿ ಕ್ಷಮೆಯಾಚಿಸುವರೆ? ವಿ.ಹೆಚ್.ಪಿ.ಯ ಅಶೋಕ್ ಸಿಂಘಾಲ್?

ಪೋರ್ಚುಗೀಸರ ಕಾಲದಲ್ಲಿ ಹಿಂದೂಗಳ ಮೇಲೆ ಅತಿರೇಕಗಳು ನಡೆದಿರಬಹುದು. ಚರಿತ್ರೆಯ ಘಟನೆಗಳ ಸರಿಯಾದ ಅಧ್ಯಯನದಿಂದ ಅದು ಎಷ್ಟು ನಿಜ, ಎಷ್ಟು ಸುಳ್ಳು ಎಂದು ಖಚಿತಪಡಿಸಬಹುದು. ಸನಾತನ ಧರ್ಮದ ರಕ್ಷಣೆಗಾಗಿ ಬೌದ್ಧ ಧರ್ಮವನ್ನು ಸದೆಬಡಿಯಲು ಶಂಕರಾಚಾರ್ಯರು ಕ್ರಮಕೈಗೊಂಡಾಗ ಅತಿರೇಕಗಳು ನಡೆದಿಲ್ಲವೇ? ಚರಿತ್ರೆಯಲ್ಲಾದ ಅನ್ಯಾಯಗಳನ್ನು ಅತಿರೇಕಗಳನ್ನು ಕೆದಕಿ ಏನು ಪ್ರಯೋಜನ? ಹಿಂದೆ ಎಂದೋ ನಡೆದ ತಪ್ಪುಗಳಿಗೆ ಇಂದು ಯಾರನ್ನೋ ಶಿಕ್ಷಿಸಹೊರಡುವುದು ಯಾವ ಧರ್ಮ? ಮತಧರ್ಮ ಮತ್ತು ರಾಜಕೀಯ ಪರಸ್ಪರ ತಳಕುಹಾಕಿಕೊಂಡು ಬಂದಾಗಿನಿಂದ ಅತಿರೇಕಗಳು ನಡೆಯುತ್ತಲೇ ಬಂದಿವೆ. ಮತಧರ್ಮವನ್ನು ರಾಜಕೀಯದಿಂದ ಪ್ರತ್ಯೇಕಿಸುವುದರಿಂದ ಮಾತ್ರ ಇಂತಹ ಅತಿರೇಕಗಳನ್ನು ತಡೆಗಟ್ಟಬಹುದು.

ಹಿಂದೂ ಧರ್ಮದಿಂದಲೂ ಮೋಕ್ಷ ಪ್ರಾಪ್ತಿ ಸಾಧ್ಯವೆಂದು ಪೋಪ್ ಘೋಷಿಸಬೇಕೆನ್ನುವುದು ವಿ.ಹೆಚ್.ಪಿ. ಯ ಮತ್ತೊಂದು ಷರತ್ತು. ಕ್ರಿಶ್ಚಿಯನ್ನರಿಗೆ ಇದು ಅವರ ನಂಬಿಕೆಯ ಪ್ರಶ್ನೆ. ಕ್ರಿಶ್ಚಿಯನ್ ಮತಧರ್ಮದ ಪ್ರಕಾರ ಕ್ರಿಶ್ಚಿಯನ್ ಧರ್ಮವು ಮೋಕ್ಷ ಪಾಪ್ತಿಗಾಗಿ ದೇವರೇ ಮಾನವನಿಗೆ ತೋರಿಸಿದ ದಾರಿ(!). ಇನ್ನುಳಿದ ಧರ್ಮಗಳು ದೇವರನ್ನು ಕಂಡುಕೊಳ್ಳಲು ಮಾನವನು ಸ್ವತಃ ನಡೆಸಿದ ಹುಡುಕಾಟ ಮಾತ್ರ. ಕ್ರಿಶ್ಚಿಯನ್ನರ ಈ ನಂಬಿಕೆಗಾಗಿ ಅವರನ್ನು ದೂಷಿಸಿ ಪ್ರಯೋಜನವಿಲ್ಲ. ಧಾರ್ಮಿಕ ನಂಬಿಕೆಗಳಿಗೆ ತರ್ಕಬದ್ದ ಆಧಾರ ಇರುವುದಿಲ್ಲ. ಅಯೋಧ್ಯೆಯಲ್ಲಿ ಬಾಬರಿ ಮಸೀದಿ ಇದ್ದ ಸ್ಥಳದಲ್ಲೇ ಶ್ರೀರಾಮ ಜನಿಸಿದ್ದ ಎನ್ನುವ ನಂಬಿಕೆಗೆ (!) ಯಾವ ತಾರ್ಕಿಕ ಆಧಾರವಿದೆ? ರಾಮಜನ್ಮಸ್ಥಾನದ ನಂಬಿಕೆಯನ್ನು ಪ್ರಶ್ನಿಸುವಂತಿಲ್ಲ ಎನ್ನುವ ಇದೇ ವಿ.ಎಚ್.ಪಿ. ಅವರು ಕ್ರಿಶ್ಚಿಯನ್ನರ ನಂಬಿಕೆಯೊಂದನ್ನು ಪ್ರಶ್ನಿಸುವುದು ಎಷ್ಟು ಸಮಂಜಸ? ಯೇಸುವಿನಿಂದ ಮಾತ್ರ ಮೋಕ್ಷ ಪ್ರಾಪ್ತಿ ಸಾಧ್ಯ ಎಂಬ ಅವರ ನಂಬಿಕೆಯನ್ನು ಇನ್ನುಳಿದವರು ಒಪ್ಪಲೇಬೇಕಿಲ್ಲವಲ್ಲ.


"ಭಿನ್ನಾಭಿಪ್ರಾಯ ಹೊಂದಿರುವ ಒಂದು ಸಂಘಟನೆಗೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಭಟಿಸುವ ಹಕ್ಕಿದೆ" ಎಂದು ಬಿ.ಜೆಪಿ. ವಕ್ತಾರ ವೆಂಕಯ್ಯ ನಾಯ್ಡು ಹೇಳುವ ಮೂಲಕ ಹಿಂದೂ ಮತಾಂದ ಶಕ್ತಿಗಳಿಗೆ ಕುಮ್ಮಕ್ಕು ನೀಡಿದ್ದಾರೆ. ಅವರು ಕ್ರಿಶ್ಚಿಯನ್ನರ ವಿರುದ್ಧ ಬಡಿದೆಬ್ಬಿಸಲಾದ ದ್ವೇಷವನ್ನು ಖಂಡಿಸಲಿಲ್ಲ. ವಿ.ಎಚ್.ಪಿ. ಬಳಗದವರು ಪೋಪ್ ಭೇಟಿಯ ವಿರುದ್ಧ ನಡೆಸಿರುವ ಆಕ್ರಮಣಕಾರಿ ಪ್ರಚಾರವು ದೇಶದಲ್ಲಿ ಕೋಮು ದಂಗೆಗಳು ಬುಗಿಲೇಳಲು ಕಾರಣವಾಗಬಹುದೆಂಬ ಆತಂಕ ಬಿ.ಜೆ.ಪಿ ಗಾಗಲಿ, ಅದರ ನೇತೃತ್ವದ ಕೇಂದ್ರ ಸರ್ಕಾರಕ್ಕಾಗಲಿ ಇಲ್ಲದಿರುವುದು ಕಳವಳಕಾರಿಯಾಗಿದೆ. ದೇಶದ ಐಕ್ಯತೆಗಿಂತಲೂ ಇವರಿಗೆ ದ್ವೇಷದ ಗುರಿಸಾಧನೆಯೇ ಮುಖ್ಯವಾಗಿದೆ.

ಬಿ.ಜೆ.ಪಿ.ಗೆ ಹಲವಾರು ಪ್ರಾದೇಶಿಕ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಳ್ಳಬೇಕಾದ ಪರಿಸ್ಥಿತಿ ಬಂದುದರಿಂದ "ಹಿಂದುತ್ವ"ದ ಆಶಯಗಳು ಮಸುಕಾಗಿವೆ ಎಂಬ ಆತಂಕ ಸಂಘಪರಿವಾರವನ್ನು ಕಾಡತೊಡಗಿದೆ. ಆದ್ದರಿಂದ "ಹಿಂದುತ್ವ"ದ ಅಗ್ನಿಯನ್ನು ಆರದೆ ಉರಿಸಲು ಅದು ದೃಢನಿರ್ಧಾರಮಾಡಿದೆ. ಸಧ್ಯಕ್ಕೆ ಮುಸ್ಲಿಂ ಅಲ್ಪಸಂಖ್ಯಾತರ ಮೇಲಿನ ದಾಳಿಯನ್ನು ಕಡಿಮೆಮಾಡಿ ಕ್ರಿಶ್ಚಿಯನ್ನರ ಮೇಲೆ ತಿರುಗಿದೆ. ಮುಸ್ಲಿಮರು ಒಂದು ದೊಡ್ಡ ಅಲ್ಪಸಂಖ್ಯಾತ ವಿಭಾಗವಾಗಿರುವುದರಿಂದ, ಅವರ ಮೇಲಿನ ದಾಳಿ ಸರ್ಕಾರವನ್ನೇ ಅಭದ್ರ ಗೊಳಿಸಬಹುದು ಎಂದುಕೊಳ್ಳಲಾಗಿದೆ. ಕ್ರಿಶ್ಚಿಯನ್ನರು ಒಂದು ಸಣ್ಣ ಗುಂಪು ಮಾತ್ರವಾಗಿದ್ದು ಚುನಾವಣಾ ದೃಷ್ಟಿಯಿಂದ ಅಷ್ಟೇನು ಪ್ರಭಾವ ಹೊಂದಿರದೆ ಇರುವುದರಿಂದ ದಾಳಿಯನ್ನು ಕ್ರಿಶ್ಚಿಯನ್ನರ ಮೇಲೆ ಕೇಂದ್ರೀಕರಿಸಲು ನಿರ್ಧರಿಸಿದಂತಿದೆ. ಕ್ರಿಶ್ಚಿಯನ್ನರನ್ನು ಗುರಿಯಾಗಿಸಿ ಅವರು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿಯವರ ಮೇಲೂ ಪರೋಕ್ಷ ದಾಳಿ ನಡೆಸಲು ಉದ್ದೇಶಿಸಿದಂತಿದೆ. ಸಂಘಪರಿವಾರದ ಕ್ರಿಶ್ಚಿಯನ್ ವಿರೋಧಿ ಚಟುವಟಿಕೆಗಳಿಗೆ ಬಿ.ಜೆ.ಪಿ.ಯ ಸ್ಪಷ್ಟ ಆದರೆ ಗುಪ್ತ ಆಶೀರ್ವಾದ ಇದೆ. ಭಜರಂಗ ದಳದವರು ಕ್ರಿಶ್ಚಿಯನ್ ಮತಪ್ರಚಾರಕರ ಮೇಲೆ ಹಲ್ಲೆ ಮಾಡುತ್ತಿರುವಾಗಲೂ, ವಿ.ಎಚ್.ಪಿ.ಯವರು ಪೋಪರ ಪ್ರತಿಕೃತಿಗಳನ್ನು ದಹನಮಾಡಿ ಪ್ರಕ್ಷುಬ್ಧ ವಾತಾವರಣವನ್ನು ಉಂಟುಮಾಡುತ್ತಿರುವಾಗಲೂ ಬಿಜೆಪಿ ಮುಖಂಡರು ಅದನ್ನೆಲ್ಲಾ ಕಂಡೂ ಕಾಣದವರಂತಿರಲೂ ನಿರ್ಧರಿಸಿದ್ದಾರೆ. ಪೋಪ್ ಭೇಟಿಯ ವಿರುದ್ಧ ನಡೆಯುತ್ತಿರುವ ಸಲ್ಲದ ಅಪಪ್ರಚಾರ ಹಾಗೂ ಪ್ರತಿಭಟನೆಗಳ ಬಗ್ಗೆ ಲೋಕ ಸಭೆಯಲ್ಲಿ ವಿರೋಧ ಪಕ್ಷಗಳ ಸದಸ್ಯರು ಗಲಾಟೆಮಾಡಿದ ನಂತರವಷ್ಟೇ ಗೃಹಮಂತ್ರಿ ಅಡ್ವಾನಿಯವರು ವಿ.ಎಚ್.ಪಿ.ಯವರ ಉದ್ಧಟತನವನ್ನು ಖಂಡಿಸುವಂತಾಯಿತು.

ಪೋಪ್ ಭೇಟಿಯ ವಿರುದ್ಧ ಸಂಘ ಪರಿವಾರದವರು ಆರಂಭಿಸಿದ ಆಕ್ರಮಣಕಾರಿ ಪ್ರಚಾರ ಪ್ರತಿಭಟನೆಗಳ ಅಪಾಯವನ್ನು ಮನಗಂಡು ಅದರ ವಿರುದ್ಧ ಧ್ವನಿ ಎತ್ತುವಲ್ಲಿ ಮೊದಲಿಗರಾಗಲು ಸಿಪಿಐ(ಎಂ) ಹಿಂದೇಟು ಹಾಕಲಿಲ್ಲ. ಅನಂತರ ಕಾಂಗ್ರೆಸ್ ಮತ್ತು ಇತರ ಕೆಲವು ಪಕ್ಷಗಳು ಸಹ ಧ್ವನಿಗೂಡಿಸಿದವು. ಆದರೆ ಬಿಜೆಪಿಯ ವಕ್ತಾರ ವೆಂಕಯ್ಯನಾಯ್ಡು "ಎಡಪಕ್ಷಗಳು ಮತ್ತು ಕಾಂಗ್ರೆಸ್ ಪೋಪ್ ಭೇಟಿಯ ವಿವಾದವನ್ನು ಓಟ್-ಬ್ಯಾಂಕ್ ರಾಜಕೀಯವಾಗಿ ಪರಿವರ್ತಿಸುತ್ತಿವೆ" ಎಂದು ಆರೋಪಿಸಿದ್ದಾರೆ. ತಾನು ಮಾಡುತ್ತಿರುವುದನ್ನು ಇನ್ನೊಬ್ಬರ ಮೇಲೆ ಆರೋಪಿಸುವುದು ಅಪರಾಧಿಗಳ ಸಹಜ ಲಕ್ಷಣ. ಬಹುಸಂಖ್ಯಾತ ಹಿಂದೂಗಳ ಓಟ್-ಬ್ಯಾಂಕ್ ಮೇಲೆ ಕಣ್ಣಿಟ್ಟು, ಅಲ್ಪಸಂಖ್ಯಾತರ ಮೇಲೆ ದಾಳಿಮಾಡುತ್ತಾ, ಮುಗ್ಧ ಹಿಂದೂಗಳ ಧಾರ್ಮಿಕತೆಯ ದುರುಪಯೋಗ ಮಾಡುತ್ತಾ ಬಂದದ್ದು ಬಿಜೆಪಿಗೆ ಲಾಭದಾಯಕವಾಗಿದೆ. ಎಡಪಕ್ಷಗಳಿಗೆ ಅಂತಹ ಓಟ್-ಬ್ಯಾಂಕ್ ರಾಜಕೀಯದಲ್ಲಿ ವಿಶ್ವಾಸ ಇದ್ದಿದ್ದರೆ ಮುಸ್ಲಿಂ ಲೀಗ್ ಅಂತಹ ಕೋಮು ಆಧಾರಿತ ಪಕ್ಷಗಳನ್ನು ಜೊತೆಯಲ್ಲಿಟ್ಟುಕೊಳ್ಳಲು ಸಾಧ್ಯವಿತ್ತು. ಎಡಪಕ್ಷಗಳು ಬಹುಸಂಖ್ಯಾತ ಕೋಮು ವಾದವನ್ನು ವಿರೋಧಿಸುತ್ತಿರುವಾಗಲೇ ಅಲ್ಪಸಂಖ್ಯಾತ ಕೋಮುವಾದವನ್ನು ಸಹ ವಿರೋಧಿಸುತ್ತಾ ಬಂದಿವೆ. ಓಟುಗಳನ್ನು ಕಳೆದುಕೊಳ್ಳುವ ಭಯದಿಂದ ಎಡಪಕ್ಷಗಳು ಕೋಮುವಾದದೊಂದಿಗೆ ರಾಜಿ ಮಾಡಿಕೊಳ್ಳುವುದಿಲ್ಲ. ದೇಶದ ಐಕ್ಯತೆ ಸಮಗ್ರತೆಯ ಪ್ರಶ್ನೆ ಎಡಪಕ್ಷಗಳಿಗೆ ಹೆಚ್ಚು ಮುಖ್ಯವೇ ಹೊರತು ತಕ್ಷಣದ ರಾಜಕೀಯ ಲಾಭವಲ್ಲ. ರಾಜಕೀಯ ಲಾಭಕ್ಕಾಗಿ ಬಿಜೆಪಿಯಂತೆ ಎಡಪಕ್ಷಗಳು ಇತರ ಪಕ್ಷಗಳೊಂದಿಗೆ ಸಮಯಸಾಧಕ ಮೈತ್ರಿಯನ್ನು ಮಾಡಿಕೊಳ್ಳುವುದಿಲ್ಲ. ಬಿಜೆಪಿಯನ್ನು ಬೆಂಬಲಿಸುತ್ತಿರುವ ತೆಲುಗು ದೇಶಂ ಮೊದಲಾದ ಪಕ್ಷಗಳು ಸಹ ಪೋಪ್ ಬೇಟಿಯ ವಿರುದ್ಧ ಸಂಘ ಪರಿವಾರದವರು ನಡೆಸಿರುವ ಆತಂಕಕಾರಿ ಚಟುವಟಿಕೆಗಳನ್ನು ವಿರೋಧಿಸಿವೆ ಎಂಬುದು ಗಮನಾರ್ಹವಾಗಿದೆ. ಆಂಧ್ರದ ಮುಖ್ಯ ಮಂತ್ರಿ ಚಂದ್ರಬಾಬು ನಾಯ್ಡು ಈ ವಿಷಯವನ್ನು ಪ್ರಧಾನ ಮಂತ್ರಿಯೊಂದಿಗೆ ಎತ್ತುವುದಾಗಿ ಹೇಳಿದ್ದಾರೆ.

ಕದಡಿದ ನೀರಿನಲ್ಲಿ ಮೀನು ಹಿಡಿಯುವುದೇ ಬಿಜೆಪಿಯ ಕಾರ್ಯತಂತ್ರ. ಕೋಮು ಗಲಭೆಗಳೇ ಬಿಜೆಪಿಯ ಜೀವಾಳ ಆದ್ದರಿಂದ ಅದು ತನ್ನ ಹಿಂದುತ್ವದ ಕಾರ್ಯಕ್ರಮವನ್ನು ಜಾರಿಗೊಳಿಸಲು ಹಿಂಜರಿಯಲಾರದು.

ಆಡಳಿತ ಯಂತ್ರದಲ್ಲಿ ಕಡು ಹಿಂದುತ್ವವಾದಿಗಳನ್ನು ತುಂಬುವ ಕೆಲಸ ಮತ್ತೆ ಆರಂಭವಾಗಿದೆ. ಆರ್.ಎಸ್.ಎಸ್. ಬಳಗದ ವ್ಯಕ್ತಿಗಳನ್ನು ರಾಜ್ಯಪಾಲರಾಗಿ ನೇಮಿಸುವ ಪ್ರಕ್ರಿಯೆಗೆ ಹಸುರು ನಿಶಾನೆ ತೋರಿಸಲಾಗಿದೆ. ಶಾಲೆಕಾಲೇಜುಗಳ ಪಠ್ಯಪುಸ್ತಕಗಳನ್ನು ಕೇಸರೀಕರಣಗೊಳಿಸಲು ಆದೇಶ ಹೊರಟಿದೆ. ಬಿಜೆಪಿ ತನ್ನ ದುಷ್ಟ ಕೂಟದ ನೆರವಿನೊಂದಿಗೆ ಮತ್ತೆ ಮರಳಿ ಅಧಿಕಾರಕ್ಕೆ ಬಂದಿರುವುದು ದೇಶದ ಜಾತ್ಯಾತೀತ ಪ್ರಜಾಸತ್ತಾತ್ಮಕ ತಳಪಾಯಕ್ಕೆ ಭಾರೀ ಅಪಾಯವನ್ನು ತಂದೊಡ್ಡಿದೆ. ದೇಶದ ಐಕ್ಯತೆಯನ್ನು ಮತ್ತು ಆ ಮೂಲಕ ದೇಶದ ಅಭಿವೃದ್ಧಿಯನ್ನು ಬಯಸುವ ಎಲ್ಲ ಶಕ್ತಿಗಳು ಈ ಗಂಡಾಂತರವನ್ನು ಎದುರಿಸಲು ಒಂದಾಗಿ ಮುಂದೆ ಬರಬೇಕಾಗಿದೆ.




# ಇಂಡೋನೇಶ್ಯಾದಲ್ಲಿ ........

ಪುಟ 11 ರಿಂದ

ಅತಿದೊಡ್ಡ ಪಕ್ಷದ ನಾಯಕಿಯಾಗಿರುವುದರಿಂದ ಮತ್ತು ಆಕೆಯ ಪಕ್ಷದ ಹಲವು ಪ್ರಮುಖ ನಾಯಕರು ಮಂತ್ರಿಗಳಾಗಿರುವುದು ಇದನ್ನು ತೋರಿಸುತ್ತದೆ.

**ಮುಂದೇನು?**

ಅಧ್ಯಕ್ಷ ವಾಹಿದ್ ತಮ್ಮ ಮಂತ್ರಿಮಂಡಲ ರಚನೆಯಲ್ಲಿ ಸುಹಾರ್ತೋ-ದುಷ್ಟಕೂಟವನ್ನು ಪೂರ್ತಿ ಮಟ್ಟಹಾಕಿ, ಪ್ರಜಾಸತ್ತೆಯನ್ನು ಸ್ಥಾಪಿಸುವ ಇಂಗಿತ ತೋರಿಸಿದ್ದಾರೆ. ಪ್ರಮುಖ ಮಂತ್ರಿಪದವಿಗಳಲ್ಲಿ ಯಾವುದೂ ಸುಹಾರ್ತೋ-ದುಷ್ಟಕೂಟ ಅಥವಾ ಅವರ ಬೆಂಬಲಿಗರಿಗೆ ಹೋಗಿಲ್ಲ. ಸೇನಾ ಮುಖ್ಯಸ್ಥ ವಿರಾಂತೋಗೆ ರಕ್ಷಣಾ ಮಂತ್ರಿ ಪದವಿ ಕೊಡಲಾಗಿಲ್ಲ. ಇಂಡೋನೇಶ್ಯಾದ ಚರಿತ್ರೆಯಲ್ಲೇ ಮೊದಲ ಬಾರಿಗೆ ಸೇನಾಧಿಕಾರಿಯಲ್ಲದ ಒಬ್ಬ ನಾಗರಿಕ ರಕ್ಷಣಾ ಮಂತ್ರಿಯಾಗಿದ್ದಾರೆ. ಪ್ರಸ್ತುತ ಸೇನಾಧಿಕಾರಿಯನ್ನು ಸೇನಾಮುಖ್ಯಸ್ಥರಾಗಿ ನೇಮಕ ಮಾಡಲಾಗಿದೆ. ಅಂದರೆ ವಿರಾಂತೋ ಸೇನಾಮುಖ್ಯಸ್ಥರಾಗಿ ಸಹ ಉಳಿದಿಲ್ಲ. ಮೇಘವತಿ ಪಕ್ಷದವರು ಆರ್ಥಿಕ ಮಂತ್ರಿ ಆಗಿದ್ದಾರೆ.

ಇದಲ್ಲದೆ ಅಧ್ಯಕ್ಷ ಸುಹಾರ್ತೋ ಭ್ರಷ್ಟಾಚಾರದ ತನಿಖೆ ಪುನರಾರಂಭಿಸಲಾಗಿದೆ. ಅಧ್ಯಕ್ಷ ಹಬೀಬಿಯ ಹಿಂದಿನ ಸರ್ಕಾರ ಯಾವುದೇ ಪುರಾವೆ ಸಿಕ್ಕಿಲ್ಲ ಎಂದು ತನಿಖೆಯನ್ನು ಮುಗಿಸಿಬಿಟ್ಟಿತ್ತು. ಈ ತನಿಖೆ ಹೆಚ್ಚು ಸಮಗ್ರವಾಗಿ, ವಸ್ತುನಿಷ್ಟವಾಗಿರುತ್ತದೆ ಎಂದು ನಿರೀಕ್ಷಿಸಲಾಗುತ್ತಿದೆ. ಅಲ್ಲದೆ 'ಬಲಿಬ್ಯಾಂಕ್' ನಿಂದ ಗೋಲ್ಕರ್ ಪಕ್ಷದ ಒಂದು ಸಂಘಟನೆಗೆ ದೊಡ್ಡ ಪ್ರಮಾಣದ ಹಣ ಸುರಿಯಲಾಯಿತು. ಆದ್ದರಿಂದ 'ಬಲಿ ಬ್ಯಾಂಕ್' ದಿವಾಳಿಯಾಯಿತು ಎಂಬ ಬಗ್ಗೆ ತನಿಖೆ ನಡೆಸಿ ತಯಾರಿಸಿದ ವರದಿಯನ್ನು ಬಹಿರಂಗ ಮಾಡಲಾಗುವುದು ಎಂದು ಸರ್ಕಾರ ಪ್ರಕಟಿಸಿದೆ.

ಇವೆರಡು ಪ್ರಜಾಸತ್ತೆಯ ಹಾದಿಯಲ್ಲಿ ಹೊಸ ಸರ್ಕಾರ ಸಾಗುವುದು ಎಂಬ ಸೂಚನೆ ನೀಡಿದೆ. ಮೇಘವತಿಯನ್ನು ಅಧ್ಯಕ್ಷ ಗಿರಿಯಿಂದ ತಪ್ಪಿಸುವುದರಲ್ಲಿ ಸುಹಾರ್ತೋ- ದುಷ್ಟಕೂಟದ ಹಿಂದಿರುವ ಅಮೆರಿಕನ್ ಸಾಮ್ರಾಜ್ಯಶಾಹಿಯ ಕೈವಾಡವೂ ಇದೆ. ಮೇಘವತಿ ಅಧ್ಯಕ್ಷರಾದರೆ ಆಕೆಯಿಂದ ಮತ್ತು ಆಕೆಯ ಪಕ್ಷದಿಂದ ಪ್ರಜಾಸತ್ತೆಗೆ ಹೋರಾಡುತ್ತಿರುವ ಜನಾಂದೋಲನಕ್ಕೆ ಭಾರಿ ಬಲ ಬರುತ್ತದೆ. ಆಗ ಸರ್ಕಾರ ಸುಹಾರ್ತೋ ಆತನ ದುಷ್ಟಕೂಟ, ಮತ್ತು ಅದರ ಹಿಂದಿರುವ ಸಾಮ್ರಾಜ್ಯಶಾಹಿಯ ಬಣ್ಣ ಪೂರಾ ಬಯಲಾಗುತ್ತದೆ. ಜನರಲ್ ಸುಹಾರ್ತೋನನ್ನು ಅಧಿಕಾರಕ್ಕೆ ತಂದಿದ್ದೇ ಅಮೆರಿಕದ ಸಿಐಎ ಎಂದು ಎಲ್ಲರಿಗೂ ಗೊತ್ತಾಗುತ್ತದೆ. ಈಗ ಅಮೆರಿಕಾಕ್ಕೂ ಸುಹಾರ್ತೋರ ದಳ್ಳಾಳಿ- ಬಂಡವಾಳಶಾಹಿಯು ಬೇಕಾಗಿಲ್ಲ. ಐಎಂಎಫ್ ಮತ್ತು ಬಹುರಾಷ್ಟ್ರೀಯ ಕಂಪನಿಗಳು ಬದಲಾದ ಅಂತರ್‍ರಾಷ್ಟ್ರೀಯ ಪರಿಸ್ಥಿತಿಯಲ್ಲಿ ಇಂಡೋನೇಶ್ಯಾದ ಆರ್ಥಿಕವನ್ನು ನೇರವಾಗಿ ನಿಯಂತ್ರಣ ಮಾಡಲು ಹೊರಟಿದ್ದಾರೆ. ಮೇಘವತಿ ಅಲ್ಲದಿದ್ದರೂ, ಆಕೆಯ ಹಿಂದಿರುವ ಜನಾಂದೋಲನದ ಬಲ ಇದಕ್ಕೂ ಪ್ರತಿರೋಧ ಒಡ್ಡುತ್ತದೆ ಎಂಬ ಭಯ ಅವರಿಗೆ. ಸರ್ಕಾರ ಅದಷ್ಟು ದುರ್ಬಲವಾಗಿ ಇದ್ದರೆ, ಅವರ ಕೆಲಸ ಸಲೀಸು ಎಂದು ಅವರ ಭಾವನೆ. ಆದರೆ ಇತ್ತೀಚಿನ ಇಂಡೋನೇಶ್ಯಾದ ಜನಾಂದೋಲನದ ತೀವ್ರತೆ ನೋಡಿದರೆ ಇದು ಅಷ್ಟು ಸುಲಭ ಸಾಧ್ಯವಲ್ಲ.

ಇಂಡೋನೇಶ್ಯಾದ ಆರ್ಥಿಕ ತೀರಾ ಕೆಟ್ಟಿದೆ. ಇಂಡೋನೇಶ್ಯಾದ ತತ್‌ಕ್ಷಣದ ಸವಾಲು ಪ್ರಜಾಸತ್ತೆಯನ್ನು ಮತ್ತೆ ಭದ್ರಗೊಳಿಸುವುದು. ಆ ನಿಟ್ಟಿನಲ್ಲಿ ಈ ಸರ್ಕಾರ ಮಿಲಿಟರಿಯ ರಾಜಕೀಯ ಬಲ ಮುರಿಯುವುದರಲ್ಲಿ, ಸುಹಾರ್ತೋ ಕೂಟವನ್ನು ಶಿಕ್ಷಿಸುವುದರಲ್ಲಿ, ಭ್ರಷ್ಟಾಚಾರ ತೊರೆಯುವುದರಲ್ಲಿ ಎಷ್ಟು ಮುತುವರ್ಜಿ ವಹಿಸುತ್ತಾರೆ ಎಂದು ಗಮನಿಸುತ್ತಾರೆ ಇಂಡೋನೇಶ್ಯಾದ ಜನ. ಅದೇ ರೀತಿ ಆರ್ಥಿಕ ನೀತಿಗಳನ್ನು ಗಮನಿಸುತ್ತಾರೆ. ಈ ಸರ್ಕಾರ ಇವೆರಡರಲ್ಲೂ ಎಡವಿದರೆ, ಅಮೆರಿಕದ ಹಿಂಬಾಗಿಲಿನ ಒತ್ತಡಕ್ಕೆ ಮಣಿದರೆ ಜನಾಂದೋಲನ ಪುನಃ ಭುಗಿಲೇಳುತ್ತದೆ ಎಂಬುದು ಖಚಿತ.

## ಹನ್ನೆರಡನೇ ತರಗತಿ CBSE ಪಠ್ಯಕ್ರಮದಿಂದ ಮಾರ್ಕ್ಸ್‌ವಾದ ಕಿತ್ತುಹಾಕಿದ ಪ್ರಕರಣ 'ಬೌದ್ಧಿಕ ಫ್ಯಾಸಿಸಂ' ಎಂದು ವ್ಯಾಪಕ ಖಂಡನೆ

ಕೇಂದ್ರೀಯ ಪಠ್ಯಕ್ರಮದ CBSE ಹನ್ನೆರಡನೇ ತರಗತಿಯಲ್ಲಿ ರಾಜ್ಯಶಾಸ್ತ್ರದ ಪಠ್ಯಕ್ರಮದಲ್ಲಿ ಪ್ರಮುಖ ರಾಜಕೀಯ ಸಿದ್ಧಾಂತಗಳ ಪಟ್ಟಿಯಿಂದ ಮಾರ್ಕ್ಸ್‌ವಾದವನ್ನು ಕಿತ್ತುಹಾಕಲಾಗಿದೆ ಎಂಬ ವರದಿ ಪಾರ್ಲಿಮೆಂಟಿನಲ್ಲಿ ತೀವ್ರ ಕೋಲಾಹಲಕ್ಕೆ ಕಾರಣವಾಯಿತು. ಹೆಚ್ಚು ಕಡಿಮೆ ಎಲ್ಲಾ ವಿರೋಧ ಪಕ್ಷದ ಸದಸ್ಯರುಗಳು ಈ ಕ್ರಮವನ್ನು ಖಂಡಿಸಿದರು. ಶಿಕ್ಷಣವನ್ನು ಖಾವೀಕರಿಸುವ, 'ಬೌದ್ಧಿಕ ಫ್ಯಾಸಿಸಂ' ಎಂದು ಸದಸ್ಯರು ಈ ಕ್ರಮವನ್ನು ಬಣ್ಣಿಸಿದರು. ಎಡಪಕ್ಷಗಳ ಸೋಮನಾಥ್ ಚಟರ್ಜಿ, ಬಾಲಾನಂದನ್, ಗುರುದಾಸ್ ಗುಪ್ತಾ, ಅಲ್ಲದೆ ಕಾಂಗ್ರೆಸ್‌ನ ಮನಮೋಹನ್ ಸಿಂಗ್, ಟಿಎಂಸಿಯ ಜಯಂತಿ ನಟರಾಜನ್, ಜನತಾದಳದ ಬೊಮ್ಮಾಯಿ, ಪಕ್ಷೇತರ ಕುಲದೀಪ್ ನಯ್ಯರ್, ಮೃಣಾಲ್‌ಸೇನ್ ಇತ್ಯಾದಿ ಸಹ ಈ ಕ್ರಮ 'ವಿಚಾರ ಕ್ರಮವನ್ನು ನಿಯಂತ್ರಿಸುವ ಹೇಯಪ್ರಯತ್ನ' ಎಂದು ಖಂಡಿಸಿದರು.

ತೀವ್ರ ವಿರೋಧ ಎದುರಿಸಿದ ಆಳುವ ರಂಗ ಇದು ನಿಜವಲ್ಲ, ಪಠ್ಯಕ್ರಮದಲ್ಲಿ 'ಮುದ್ರಾರಾಕ್ಷಸರನ' ಹಾವಳಿ ಎಂದು ನುಣುಚಿಕೊಳ್ಳಲು ಪ್ರಯತ್ನಿಸಿತು. ಹಿಂದಿ ಪಠ್ಯಕ್ರಮದಲ್ಲಿ ಮಾರ್ಕ್ಸ್‌ವಾದದ ಹೆಸರಿದ್ದು, ಇಂಗ್ಲೀಷಿನ ಪ್ರತಿಯಲ್ಲಿ ಬಿಟ್ಟುಹೋಗಿರುವುದು ಇದಕ್ಕೆ ಪುರಾವೆ ಎಂದು ಸರ್ಕಾರ ಸಾಧಿಸಲು ಪ್ರಯತ್ನಿಸಿತು. ಎಲ್.ಕೆ. ಅಡ್ವಾಣಿ, ಲೋಕಸಭೆಯಲ್ಲಿ ಜಸ್‌ವಂತ್ ಸಿಂಗ್ ರಾಜ್ಯಸಭೆಯಲ್ಲಿ ಇದು ಅಚಾತುರ್ಯದಿಂದ ನಡೆದಿದ್ದು, ಅದನ್ನು ಕೂಡಲೇ ಸರಿಪಡಿಸುವ ಭರವಸೆ ನೀಡಿದರು.

ಸಿಪಿಐ, ಸಿಪಿಐ(ಎಂ), ಸಿಪಿಐ(ಎಂ-ಎಲ್) ಮತ್ತು ಎಸ್‌ಎಫ್‌ಐನ ಕೇಂದ್ರ ಸಮಿತಿಗಳು ಈ ಕ್ರಮವನ್ನು ತೀವ್ರವಾಗಿ ಖಂಡಿಸಿದ್ದು ಇದರ ವಿರುದ್ಧ ಹೋರಾಟಕ್ಕೆ ಕರೆ ನೀಡಿವೆ.

# ಕೇರಳ: ಪ್ರತಿಕೂಲ ಸನ್ನಿವೇಶದಲ್ಲೂ ಬಲ ಸಂರಕ್ಷಣೆ

ಕೇರಳದಲ್ಲಿ ಈ ಬಾರಿ ಸಿಪಿಐ(ಎಂ) ನೇತೃತ್ವದ ಎಡ ಪ್ರಜಾಪ್ರಭುತ್ವವಾದಿ ರಂಗ(ಎಲ್.ಡಿ.ಎಫ್) ಒಂದು ಪ್ರತಿಕೂಲ ವಾತಾವರಣದಲ್ಲಿ ಲೋಕಸಭಾ ಚುನಾವಣೆ ಎದುರಿಸಬೇಕಾಗಿ ಬಂತು ಎಂಬುದನ್ನು ವಸ್ತುನಿಷ್ಠ ವಿಶ್ಲೇಷಕರು ಎಲ್ಲರೂ ಒಪ್ಪಿರುವ ಸಂಗತಿ. ರಾಷ್ಟ್ರಮಟ್ಟದಲ್ಲಿ ಬಿಜೆಪಿ ನೇತೃತ್ವದ ಸರಕಾರದ ಪತನದ ನಂತರ ಒಂದು ಪರ್ಯಾಯ ಸರಕಾರ ರಚಿಸುವಲ್ಲಿ ವಿಫಲತೆಯ ಹಿನ್ನೆಲೆಯಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳಲ್ಲಿ ಇನ್ನಷ್ಟು ಅನೈಕ್ಯತೆ ತಲೆದೋರಿತ್ತು. ಅತ್ತ ಬಿಜೆಪಿ ತನ್ನ ಮೈತ್ರಿಕೂಟವನ್ನು ಒಟ್ಟಿಗಿಟ್ಟು ವಿಸ್ತರಿಸುವಲ್ಲಿಯೂ ಸಫಲವಾಯಿತು. ಜನತೆಗೆ ಮಾಧ್ಯಮಗಳು ಆಗಲೇ ಬಿಜೆಪಿ ಕೂಟ ವಿಜಯಿಯಾಗಬಹುದು, ಕಾಂಗ್ರೆಸ್ ಪರ್ಯಾಯವಾಗಬಹುದು, ಮೂರನೇ ರಂಗ ನಿರ್ನಾಮವಾಗುತ್ತದೆ ಎಂದು ಭಾರೀ ಪ್ರಚಾರ ಕೊಟ್ಟಿತು.

ರಾಜ್ಯಮಟ್ಟದಲ್ಲಿ ಎಲ್.ಡಿ.ಎಫ್. ವಿರುದ್ಧ ಕೋಮುವಾದಿ ಶಕ್ತಿಗಳ ಕ್ರೋಢೀಕರಣ ನಡೆಯಿತು. ಈ ಹಿಂದೆ 1860 ರಲ್ಲಿ ಕೋಮುವಾದಿಗಳ 'ವಿಮೋಚನಾ ಸಮರ'ದ ನಂತರ ಹಾಗೂ 1977 ರಲ್ಲಿ ತುರ್ತು ಪರಿಸ್ಥಿತಿಯ ನಂತರ ಹೀಗಾಗಿತ್ತು. ಯು.ಡಿ.ಎಫ್. ಎಲ್ಲಾ ಕೋಮುವಾದಿ ಶಕ್ತಿಗಳನ್ನು ತನ್ನ ಸುತ್ತ ನೆರೆಸುವಲ್ಲಿ ಈ ಬಾರಿ ಯಶಸ್ವಿಯಾಯಿತು. ಬಾಬ್ರಿ ಮಸೀದಿ ಧ್ವಂಸದ ನಂತರ ದೂರ ಸರಿದಿದ್ದ ಮುಸ್ಲಿಂ ಸಂಘಟನೆಗಳ ಬೆಂಬಲ ಈ ಬಾರಿ ಅದು ಪಡೆಯಿತು. ವಿವಿಧ ಕ್ರೈಸ್ತ ಸಂಘಟನೆಗಳಂತೂ ತಮ್ಮ ಬೆಂಬಲ ಮುಂದುವರೆಸಿದವು.

ಇನ್ನೊಂದು ಕುತೂಹಲದ ಸಂಗತಿಯೆಂದರೆ ಬಿಜೆಪಿ ಮತ್ತು ಕಾಂಗ್ರೆಸ್ ನಡುವಿನ ಗುಪ್ತ ಶಾಮೀಲು. 1991 ರಲ್ಲಿ ಇಂತಹ ಪ್ರಯತ್ನ ನಡೆದ ಬಗ್ಗೆ ಬಿಜೆಪಿ ಮುಖಂಡರೇ ಈಗ ಒಪ್ಪಿಕೊಂಡಿರುವ ಬಗ್ಗೆ ಕಳೆದ ಸಂಚಿಕೆಯಲ್ಲಿ ಓದಿರುವಿರಿ. ಈ ಬಾರಿಯೂ ಅಂತಹ ಪ್ರಯತ್ನ ನಡೆದಂತಿದೆ. ಬಿಜೆಪಿಯ ಒಟ್ಟು ಮತಗಳು ಕಳೆದ ಬಾರಿಗೆ ಹೋಲಿಸಿದರೆ 0.3% (7.78% ರಿಂದ 8.08%)ದಷ್ಟು ಹೆಚ್ಚಿದರೂ 10 ಕ್ಷೇತ್ರಗಳಲ್ಲಿ ಅವರ ಮತಗಳು ಕಮ್ಮಿಯಾದವು. ಇವುಗಳಲ್ಲಿ ಐದರಲ್ಲಿ ಈ ಇಳಿಕೆ 10 ಸಾವಿರಕ್ಕಿಂತಲೂ ಹೆಚ್ಚು. ಇವುಗಳಲ್ಲಿ ಮುಖ್ಯವಾದದ್ದು ಕಾಂಗ್ರೆಸ್‌ನ ಹಿರಿಯ ಮುಖಂಡ ಕೆ.ಕರುಣಾಕರನ್ ಗೆದ್ದ ಮುಕುಂದಪುರಂ ಕ್ಷೇತ್ರ. ಇಲ್ಲಿ ಬಿಜೆಪಿಯ ಮತ 23000 ದಷ್ಟು ಇಳಿಯಿತು. ಇನ್ನೊಂದು ಕಾಂಗ್ರೆಸ್‌ನ ಎ.ಸಿ.ಜೋಸ್ ಗೆದ್ದ ತ್ರಿಶೂರ್. (ಆದರೂ ಬಿಜೆಪಿಗೆ ಮಾತ್ರ ಈ ಬಾರಿಯೂ ಒಂದೂ ಸೀಟು ಗೆಲ್ಲಲಾಗಲಿಲ್ಲ ಎಂಬುದು ಬೇರೆ ಸಂಗತಿ. ಇದಕ್ಕೆ ಕಾರಣ ಕೋಮುವಾದದ ವಿರುದ್ಧ ಎಲ್.ಡಿ.ಎಫ್. ನ ಪ್ರಚಾರ-ಪ್ರಕ್ಷೋಭೆ)

ಇಂತಹ ಪ್ರತಿಕೂಲ ಪರಿಸ್ಥಿತಿಯಲ್ಲಿ ಎಲ್.ಡಿ.ಎಫ್. ನ ಸ್ಥಾನ 9 ರಿಂದ 7 ಕ್ಕೆ ಇಳಿಯುತ್ತದೆ ಎಂದೂ ಭವಿಷ್ಯವಾಣಿ ನುಡಿಯಲಾಗಿತ್ತು. ಆದರೂ ಎಲ್.ಡಿ.ಎಫ್. ತನ್ನ ಶಕ್ತಿ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಇದು ಸಾಧ್ಯವಾಗಿರುವುದು ಎಲ್.ಡಿ.ಎಫ್. ನ ಜನತಾ ಯೋಜನೆ, ವಿಕೇಂದ್ರೀಕರಣ ಮುಂತಾದ ಕ್ರಮಗಳಿಂದಾಗಿ.

ಎಲ್.ಡಿ.ಎಫ್. ನ ಒಟ್ಟು ಮತಗಳು 67,13,247. ಕಳೆದ ಬಾರಿಗೆ ಹೋಲಿಸಿದರೆ 87053 ಮತಗಳು ಹೆಚ್ಚಿವೆ. ಆದರೆ ಯು.ಡಿ.ಎಫ್.ನ ಮತಗಳು 3,74,418 ರಷ್ಟು ಹೆಚ್ಚಿವೆ. ಅದಕ್ಕೆ ದೊರೆತ ಮತ 72,19,448. ಎಲ್.ಡಿ.ಎಫ್. ನ ಒಟ್ಟು ಮತಗಳಿಕೆಯಲ್ಲಿ ಸುಮಾರು 1% ದಷ್ಟು ಇಳಿಕೆಯಾಗಿದೆ. ಆದರೆ ಸಿಪಿಐ(ಎಂ) ನ ಮತಗಳಿಕೆ 20.85% ದಿಂದ 29.53% ವಾಗಿದೆ. ಸ್ಥಾನಗಳು ಈಗಾಗಲೇ ತಿಳಿಸಿರುವಂತೆ 6 ರಿಂದ 8 ಆಗಿದೆ. ಕಾಂಗ್ರೆಸ್‌ನ ಮತ 38.39% ದಿಂದ 39.33ಕ್ಕೇ ಆಗಿದೆ (ಸುಮಾರು 1% ಹೆಚ್ಚಳ)

ಕೆಲವು ಕ್ಷೇತ್ರಗಳಲ್ಲಿ ಎಲ್.ಡಿ.ಎಫ್. ಮತಗಳಲ್ಲಿ ಇಳಿತದ ಬಗ್ಗೆ ಪಕ್ಷದ ವಿವಿಧ ಸಮಿತಿಗಳು ಪರೀಕ್ಷಣೆ ನಡೆಸಲಾಗುತ್ತಿದ್ದು ವಿವಿಧ ಹಂತಗಳಲ್ಲಿ ಸರಕಾರದ ಚಟುವಟಿಕೆಗಳನ್ನು ಹೆಚ್ಚಿಸಲು, ಜನತಾ ಯೋಜನೆಗೆ ಇನ್ನಷ್ಟು ಜನಬೆಂಬಲಗಳಿಸಲು ಪ್ರಯತ್ನಿಸಲು ನಿರ್ಧರಿಸಲಾಗಿದೆ.

# ಉತ್ತರ ಪ್ರದೇಶ: ಕೋಮುವಾದಿಗಳಿಗೆ ಭಾರೀ ಹಿನ್ನಡೆ

ಉತ್ತರ ಪ್ರದೇಶದಲ್ಲಿ ಈ ಬಾರಿಯ ಚುನಾವಣೆ ಹಲವರಿಗೆ ಆಶ್ಚರ್ಯ ತಂದಿದೆ. ಆದರೆ ಕಲ್ಯಾಣ್ ಸಿಂಗ್ ಸರಕಾರದ ಕಾರ್ಯನಿರ್ವಹಣೆಯನ್ನು ಗಮನಿಸಿದವರಿಗೆ ಇದರಿಂದ ಆಶ್ಚರ್ಯವಾಗಿಲ್ಲ. ದೇಶದ ಇನ್ನೊಬ್ಬ ಪ್ರಧಾನಮಂತ್ರಿಯನ್ನು ಆರಿಸಿ ಕಳಿಸಿದ ಈ ರಾಜ್ಯದಲ್ಲಿ ಬಿಜೆಪಿ ಭಾರೀ ಹೊಡೆತ ತಿಂದಿದೆ. ಅರ್ಧದಷ್ಟು ಸ್ಥಾನಗಳನ್ನು ಕಳಕೊಂಡಿದೆ(ಕಳೆದ ಬಾರಿ 57, ಈ ಬಾರಿ 28), ಮತಗಳಿಕೆಯಲ್ಲೂ ಸುಮಾರು 9% ಇಳಿಕೆ(36.49 ದಿಂದ 27.64% ಇಳಿದಿದೆ)ಯಾಗಿದೆ. ಕಾಂಗ್ರೆಸ್ ತನ್ನ ಸ್ಥಾನಗಳನ್ನು ದ್ವಿಗುಣಗೊಳಿಸಿಕೊಂಡಿದೆ(5 ರಿಂದ 10 ಕ್ಕೇರಿದೆ), ಮತಗಳಿಕೆಯಲ್ಲಿ ಸುಮಾರು ಎರಡೂವರೆ ಪಟ್ಟಾಗಿದೆ(6.02% ದಿಂದ 14.72%). ಹಲವರಿಗೆ ಸೋಜಿಗವುಂಟು ಮಾಡಿದ ಸಂಗತಿಯೆಂದರೆ ಬಿಜೆಪಿ, ಕಾಂಗ್ರೆಸ್ ನಡುವೆ ಸಮಾಜವಾದಿ ಪಕ್ಷ ಮತ್ತು ಬಿ.ಎಸ್.ಪಿ. ಮೂಲೆಗುಂಪಾಗುತ್ತವೆ ಎಂಬ ಹಲವರ ನಿರೀಕ್ಷೆ ಹುಸಿಯಾಗಿದೆ. ಸಮಾಜವಾದಿ ಪಕ್ಷದ ಮತಗಳಿಕೆ 28.69% ದಿಂದ 24.06% ಕ್ಕೆ ಇಳಿದರೂ, ಸ್ಥಾನಗಳು 20 ರಿಂದ 26 ಕ್ಕೇರಿವೆ. ಬಿ.ಎಸ್.ಪಿ.ಯ ಮತಗಳಿಕೆ ಹೆಚ್ಚಾಯಿತು (20.91% ದಿಂದ 22.08%), ಆದರೆ ಸ್ಥಾನಗಳು 4 ರಿಂದ 14 ಕ್ಕೇರಿದವು. ಒಟ್ಟಿನಲ್ಲಿ ದೇಶದ ಅತ್ಯಂತ ದೊಡ್ಡ ರಾಜ್ಯದ, ಬಿಜೆಪಿಯ ಕೋಟೆಯಂತಾಗಿದ್ದ, ದಿಲ್ಲಿ ಆಳ್ವಿಕೆಗೆ ಮೊದಲ ಮೆಟ್ಟಿಲಾದ ಉತ್ತರ ಪ್ರದೇಶದಲ್ಲಿ ಮತದಾರರು ಬಿಜೆಪಿಯನ್ನು ಸೋಲಿಸಲು ಶಕ್ತರೆನಿಸಿದ ಅಭ್ಯರ್ಥಿಗಳನ್ನು ಗೆಲ್ಲಿಸಿ ಬಿಜೆಪಿಯ ಬಗ್ಗೆ ತಮ್ಮ ತೀವ್ರ ಆಕ್ರೋಶವನ್ನು ವ್ಯಕ್ತಪಡಿಸಿರುವಂತಿದೆ.

# ಆಂಧ್ರಪ್ರದೇಶ: ಸಿ.ಇ.ಓ. ಮಾದರಿಯ ಗೆಲುವಲ್ಲ, ಕೇವಲ 'ಜಾಣ' ಲೆಕ್ಕಾಚಾರ!

ಇತ್ತೀಚೆಗೆ ಹಲವು ಚುನಾವಣೆಗಳಲ್ಲಿ ಚುನಾವಣಾ ವಿಶ್ಲೇಷಕರು ಮತ್ತೆ-ಮತ್ತೆ ಹೇಳುತ್ತಿದ್ದ ಒಂದು 'ತತ್ವ' - 'ಅಧಿಕಾರಸ್ಥ-ವಿರೋಧಿ' ಅಂಶ- ಅಂದರೆ ಹಿಂದಿನ ಬಾರಿ ಅಧಿಕಾರದಲ್ಲಿರುವವರು ಈ ಬಾರಿ ಅದನ್ನು ಕಳಕೊಳ್ಳುವ ಸಂಭವವೇ ಜಾಸ್ತಿ ಎಂದು. ಏಕೆಂದರೆ ಜನ 'ಬದಲಾವಣೆ' ಬಯಸುತ್ತಾರಂತೆ, ಕೇವಲ ಬದಲಾವಣೆಗಾಗಿ ಬದಲಾವಣೆ! ಇಂತವರಿಗೆ ಪಶ್ಚಿಮ ಬಂಗಾಳವನ್ನು ತೋರಿಸಿದಾಗ ಮಾತ್ರ ಸುಮ್ಮನಾಗುತ್ತಾರೆ. ಆದರೂ ಈ 'ತತ್ವ'ದ ಪ್ರತಿಪಾದನೆ ನಿಂತಿಲ್ಲ. ಜನ ಬಂಡವಾಳಶಾಹಿ ಆಡಳಿತಕ್ಕೆ ಒಂದು ಸಮರ್ಥ ಪರ್ಯಾಯದ ಹುಟುಕಾಟದಲ್ಲಿ ಇದ್ದಾರೆ ಎಂಬುದನ್ನು ಬೂರ್ಜ್ವಾಗಳ ಬಾಡಿಗೆ ವಿಶ್ಲೇಷಕರು ಹೇಗೆ ತಾನೇ ಒಪ್ಪಲು ಸಾಧ್ಯ?

ಈ ಬಾರಿ ಅವರ 'ತತ್ವ'ಕ್ಕೆ ಇನ್ನೊಂದು ಅಪವಾದ ಬಂದಿದೆ. ಆಂಧ್ರಪ್ರದೇಶದಲ್ಲಿ ತೆಲುಗು ದೇಶಂ ಸತತ ಎರಡನೇ ಬಾರಿ ಗೆದ್ದು ಅಧಿಕಾರಕ್ಕೆ ಬಂದಿದೆ. ಈ 'ಅಪವಾದ'ದಿಂದ ಮಾತ್ರ ಈ ತತ್ವ ಪ್ರತಿಪಾದಕರಿಗೆ ಬೇಸರವಾಗುವ ಬದಲು ಸಂತೋಷವೇ ಆದಂತಿದೆ. ಏಕೆಂದರೆ ಐ.ಎಂ.ಎಫ್.-ವಿಶ್ವ ಬ್ಯಾಂಕ್ ಆರ್ಥಿಕ ಸುಧಾರಣೆಯ ದಾರಿ ಹಿಡಿದವರನ್ನೆಲ್ಲಾ ಜನ ಚುನಾವಣೆಗಳಲ್ಲಿ ಸೋಲಿಸುತ್ತಾರೆ ಎಂಬ ಇನ್ನೊಂದು ತತ್ವ ಇದರಿಂದ ಸುಳ್ಳಾಗಿದೆ ಎಂದು ಅವರ ನಂಬಿಕೆ. ಭಾರತದ ದೊಡ್ಡ ಬಂಡವಾಳಗಾರರ ಸಂಘಟನೆಗಳಾದ ಸಿ.ಐ.ಐ., ಫಿಕ್ಕಿ, ಅಸೋಚಾಮ್ ಇತ್ಯಾದಿಗಳು ರಾಷ್ಟ್ರ ಮಟ್ಟದ ಸುಧಾರಣಾವಾದಿ'ಗಳಾದ ಮನಮೋಹನ್ ಸಿಂಗ್, ಚಿದಂಬರಂ ಸೋತರೂ ಇದೊಂದು ಮಾದರಿ ಎಂದು ಸಾರಲೂ ಹಿಂದೆ ಬಿದ್ದಿಲ್ಲ. ನಮ್ಮ ರಾಜ್ಯದ ಹೊಸ ಮುಖ್ಯಮಂತ್ರಿಗಳು ಈ ಸಲಹೆಯನ್ನು ಸಂತೋಷದಿಂದ ಸ್ವೀಕರಿಸಿದಂತಿದೆ. ಇಡೀ ರಾಜ್ಯ ಒಂದು ಬಿಸಿನೆಸ್ ಕಂಪನಿ, ಮುಖ್ಯಮಂತ್ರಿ ಎಂಬಾತ ಆ ಕಂಪನಿಯ ಮ್ಯಾನೇಜಿಂಗ್ ಡೈರಕ್ಟರ್ ಅಥವಾ ಮುಖ್ಯಸ್ಥ(ಸಿ.ಇ.ಓ) ಎಂಬುದೇ ಈ ಮಾದರಿ (ಕಳೆದ ವಾರದ ಸಂಚಿಕೆಯಲ್ಲಿ ಈ ಬಗ್ಗೆ ನೀವು ಓದಿದ್ದೀರಿ).

ಆದರೆ ನಿಜವಾಗಿಯೂ ಆಂಧ್ರ ಪ್ರದೇಶದಲ್ಲಿ ಈ ಸಿ.ಇ.ಓ. ಮಾದರಿ ಯಶಸ್ವಿಯಾಗಿದೆಯೇ? ದೊಡ್ಡ ಪತ್ರಿಕೆಗಳ ವಿಶ್ಲೇಷಕರಿಗೂ ಈಗ ಈ ಸಂದೇಹ ಕಾಡಲಾರಂಭಿಸಿದೆ. ಲೋಕಸಭಾ ಮತ್ತು ವಿಧಾನಸಭಾ ಫಲಿತಾಂಶಗಳಲ್ಲಿನ ಅಂತರ ಹಾಗೂ ರಾಜ್ಯದ ವಿವಿಧ ಪ್ರದೇಶಗಳಲ್ಲಿ ಮತಗಳಿಕೆಯ ಚಿತ್ರ ಅವರಲ್ಲಿ ಈ ಸಂದೇಹ ಉಂಟುಮಾಡಿದೆ.

ಕಂಪ್ಯೂಟರ್ ಧಾರೀ ನಾಯ್ಡು ಆಂಧ್ರಪ್ರದೇಶ ಎಂಬ ಕಂಪನಿಯ ಸಿ.ಇ.ಓ. ನಂತೆ ಓಡಾಡುತ್ತಿದ್ದರೂ ತಾನು ಮತ್ತೆ ಜನಾದೇಶ ಪಡೆದು ಬರಬೇಕಾದ ಮುಖ್ಯಮಂತ್ರಿ ಎಂಬುದನ್ನು ಮರೆತಿರಲಿಲ್ಲ. ಜನಗಳಿಗೆ ನೆರವಾಗುವ ಸಬ್ಸಿಡಿಗಳೆಂದರೇ ಹೌಹಾರುವ ಈ 'ಮಾದರಿ'ಯಲ್ಲೂ ಆತ ಈ ಸಬ್ಸಿಡಿ ಯೋಜನೆಗಳನ್ನು ಕೈಬಿಡಲಿಲ್ಲ ಎಂಬುದನ್ನು ಎಡ ಒಲವಿನ ಆರ್ಥಿಕ ತಜ್ಞರು ಮೊದಲೇ ಹೇಳಿದ್ದರು. ಈ 'ಜಾಣ' ತನದ ಜೊತೆಗೆ ತನ್ನ 'ಜಾತ್ಯಾತೀತತೆ'ಯನ್ನು ಮತ್ತೆ-ಮತ್ತೆ ನೆನಪಿಸುತ್ತಲೇ ಬಿಜೆಪಿಯೊಂದಿಗೆ ಮಾಡಿಕೊಂಡ ಮೈತ್ರಿಯ ಲೆಕ್ಕಾಚಾರದ 'ಜಾಣ' ತನವೂ ಅದರ 'ಯಶಸ್ಸಿ'ನ ಹಿಂದಿದೆ ಎಂದು ಈಗ ಕೆಲವರಾದರೂ ಒಪ್ಪಿಕೊಳ್ಳುತ್ತಿದ್ದಾರೆ.

ಈಗಾಗಲೇ 'ಐಕ್ಯರಂಗ'ದ ಅಕ್ಟೋಬರ್ 17 ರ ಸಂಚಿಕೆಯಲ್ಲಿ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿಯೊಂದಿಗೆ ಮೈತ್ರಿಯಿಂದ ಟಿ.ಡಿ.ಪಿ. ಸ್ಥಾನಗಳು ಹೆಚ್ಚಿಲ್ಲ, ಕಮ್ಮಿಯಾಗಿವೆ. ತೆಲುಗುದೇಶಂ ನ ಸ್ಥಾನಗಳು 1994 ರಲ್ಲಿದ್ದ 219 ರಿಂದ 180 ಕ್ಕೆ ಇಳಿದಿದೆ. ಬಿಜೆಪಿಯ ಸ್ಥಾನ ಚಂದ್ರಬಾಬು ನಾಯ್ಡು ಕೃಪೆಯಿಂದ 3 ರಿಂದ 13 ಕ್ಕೇರಿದರೂ ಈ ಎರಡು ಪಕ್ಷಗಳ ಒಟ್ಟು ಬಲ 222 ರಿಂದ 192 ಕ್ಕಿಳಿದಿದೆ. ಕಾಂಗ್ರೆಸ್ ಬಲ 25 ರಿಂದ 90 ಕ್ಕೇರಿದೆ. ಇದು ಲೋಕಸಭಾ ಫಲಿತಾಂಶಗಳಿಗೆ ತದ್ವಿರುದ್ಧವಾದದ್ದು (ಟಿ.ಡಿ.ಪಿ. ಸ್ಥಾನಗಳು 12 ರಿಂದ 29 ಕ್ಕೆ, ಬಿಜೆಪಿ 4 ರಿಂದ 7 ಕ್ಕೆ ಏರಿವೆ, ಕಾಂಗ್ರೆಸ್‌ನ ಸ್ಥಾನಗಳು 22 ರಿಂದ 5 ಕ್ಕೆ ಇಳಿದಿವೆ). ಲೋಕಸಭಾ ಸ್ಥಾನಗಳಲ್ಲಿ ಟಿ.ಡಿ.ಪಿ.-ಬಿಜೆಪಿ 86% ಸ್ಥಾನ ಪಡೆದರೆ, ವಿಧಾನಸಭೆಯಲ್ಲಿ ಈ ಕೂಟಕ್ಕೆ ದೊರೆತಿರುವುದ 65% ಸ್ಥಾನಗಳು.

ವಿಧಾನಸಭಾ ಚುನಾವಣೆಗಳ ಮತಗಳಿಕೆಯ ವಿವರಗಳು ಸಿಕ್ಕಿಲ್ಲ, ಲೋಕಸಭೆಯವು ದೊರೆತಿವೆ. ಕಳೆದ ಲೋಕಸಭಾ ಚುನಾವಣೆಗಳಲ್ಲಿ ಬಿಜೆಪಿ 18.3% ಮತ ಪಡೆದಿತ್ತು. ಈ ಬಾರಿ 9.28% ಕ್ಕಿಳಿದಿದೆ. ಟಿ.ಡಿ.ಪಿ. ಗಳಿಕೆ 32% ರಿಂದ 39.78% ಕ್ಕೇರಿದೆ. ಎರಡು ಪಕ್ಷಗಳ ಮತಗಳಿಕೆಯನ್ನು ಸೇರಿಸಿದಾಗ ಅದು 1998 ಕ್ಕೆ ಹೋಲಿಸಿದರೆ 0.6% ಇಳಿದಿದೆ. 17 ಸ್ಥಾನಗಳನ್ನು ಕಳಕೊಂಡ ಕಾಂಗ್ರೆಸ್ ಮತಗಳಿಕೆ ನಿಜವಾಗಿ 4.4% ಹೆಚ್ಚಿದೆ (38.5% ದಿಂದ 42.9%ಕ್ಕೆ). ಆದ್ದರಿಂದ ಸಿ.ಇ.ಓ. 'ಮಾದರಿ'ಯ ಚಂದ್ರಬಾಬು ನಾಯ್ಡು ಪಡೆದದ್ದು 'ಸಕಾರಾತ್ಮಕ' ಮತಗಳಲ್ಲ ಎಂಬ ತೀರ್ಮಾನಕ್ಕೆ ಕನಿಷ್ಟ ಒಬ್ಬ ವಿಶ್ಲೇಷಕರು ಬಂದಿದ್ದಾರೆ.

ಎಲ್ಲಾ 'ಆರ್ಥಿಕ ಸುಧಾರಣಾ'ವಾದಿಗಳಂತೆ ಚಂದ್ರಬಾಬು ನಾಯ್ಡು ವಿದ್ಯುತ್ ಖಾಸಗೀಕರಣಕ್ಕೆ ಒತ್ತು ನೀಡಿದ್ದರು. ಇದು ಟಿ.ಡಿ.ಪಿ. ಯ ಬಲಿಷ್ಟ ನೆಲೆಯಾದ ತೆಲಂಗಾಣಾ ಪ್ರದೇಶದಲ್ಲಿ ಒಂದು ದೊಡ್ಡ ಪ್ರಶ್ನೆಯಾಗಿ ಅಲ್ಲಿ ಟಿ.ಡಿ.ಪಿ.-ಬಿಜೆಪಿ ಕೂಟದ ಮತಗಳಿಕೆ ಬಹಳಷ್ಟು ಇಳಿದಿದೆ. ಬಹುಶಃ ಆಂಧ್ರಪ್ರದೇಶದಲ್ಲಿ ಚುನಾವಣೆಗಳು ಮೊದಲ ಹಂತಗಳಲ್ಲಿ ನಡೆಯದೆ, ಕೊನೆಯ ಹಂತಗಳಲ್ಲಿ ನಡೆದಿದ್ದರೆ ಕಾರ್ಗಿಲ್‌ನ ಪ್ರಭೆ ಮಾಯವಾಗಿ ಫಲಿತಾಂಶಗಳು ಭಿನ್ನವಾಗಿರುತ್ತಿತ್ತು ಎಂಬುದೂ ಈ ವಿಶ್ಲೇಷಕರ ಅಭಿಪ್ರಾಯ.

ಒಟ್ಟಿನಲ್ಲಿ ಟಿ.ಡಿ.ಪಿ. ರಾಜ್ಯದಲ್ಲಿ ಮತ್ತೆ ಅಧಿಕಾರ ಗಳಿಸಿದ್ದರೆ, ರಾಷ್ಟ್ರಮಟ್ಟದಲ್ಲಿ ಒಂದು 'ನಿರ್ಣಾಯಕ' ಸ್ಥಾನ ಗಳಿಸಿದ್ದಾರೆ. ಅದಕ್ಕೆ ರಾಜ್ಯದಲ್ಲಿ ಅದು ಅನುಸರಿಸಿದ ಆರ್ಥಿಕ ಸುಧಾರಣಾ ಮಾರ್ಗದಿಂದಾಗಿ ಅಥವಾ 'ಸಿ.ಇ.ಓ. ಮಾದರಿ' ಯಿಂದಾಗಿ ಅಲ್ಲ, ಕೇವಲ ಜಾಣ ಲೆಕ್ಕಾಚಾರದಿಂದಾಗಿ ಮಾತ್ರ. ಸಿ.ಇ.ಓ. ಮಾದರಿಯಿಂದಾಗಬಹುದಾಗಿದ್ದ ಅಪಾರ ಹಾನಿಯನ್ನು ತಡೆಯುವಲ್ಲೂ ಈ ಲೆಕ್ಕಾಚಾರ ಅವರಿಗೆ ನೆರವಾಗಿದೆ. ಅವರ ಈ 'ಜಾಣ'ತನ ಅವರಿಗೆ ಅಪಾರ ಲಾಭ ತಂದಿರಬಹುದು, ಆದರೆ ಆಂಧ್ರಪ್ರದೇಶ ಜನತೆಗೆ? ನಮ್ಮ ಮುಖ್ಯಮಂತ್ರಿಗಳು ಇದರಿಂದ ಮೊದಲೇ ಪಾಠ ಕಲಿಯುವರೇ?

## ಸಿಪಿಐ(ಎಂ) ಬಿಹಾರ ರಾಜ್ಯಸಮಿತಿ ಹೇಳಿಕೆ

# ಪೂರ್ಣಿಯ ಮತ್ತು ಭಾಗಲ್ಪುರಗಳಲ್ಲಿ ಮತದಾನದಲ್ಲಿ ಭಾರೀ ಅಕ್ರಮಗಳು

ಬಿಹಾರದ ಪೂರ್ಣಿಯ ಮತ್ತು ಭಾಗಲ್ಪುರಗಳಲ್ಲಿ ಮುಕ್ತ, ನ್ಯಾಯಯುತ ಲೋಕಸಭಾ ಚುನಾವಣೆ ನಡೆಸುವುದರಲ್ಲಿ ಚುನಾವಣಾ ಆಯೋಗ ಸೋತಿದೆ ಎಂದು ಬಿಹಾರ ಸಿಪಿಐ(ಎಂ) ರಾಜ್ಯ ಸಮಿತಿ ಅಕ್ಟೋಬರ್ 28 ರ ಸಭೆಯ ನಂತರ ಹೇಳಿದೆ. ಈ ಎರಡೂ ಕ್ಷೇತ್ರಗಳಲ್ಲಿ ದಲಿತರು, ಆದಿವಾಸಿಗಳು ಮತ್ತು ಬಡವರನ್ನು ಮತಚಲಾಯಿಸದಂತೆ ಪೋಲೀಸರು ಮತ್ತು ರ್‍ಯಾಪಿಡ್ ಆಕ್ಷನ್ ಫೋರ್ಸ್ ಮಾಡಿತು ಎಂದು ಸಮಿತಿ ಆಪಾದಿಸಿದೆ. ಪೋಲೀಸರು ಕೆಲವು ಕಡೆ ಮಹಿಳೆಯರ ಜೊತೆ ಅಸಭ್ಯವಾಗಿ ನಡೆದುಕೊಂಡರು. ಯುವಕರನ್ನು ಹೊಡೆದೋಡಿಸಿದರು. ಹಲವು ಮತಗಟ್ಟೆಗಳಲ್ಲಿ ಮತದಾರರನ್ನು ಓಡಿಸಿದರು ಎಂದಿದೆ.

ಪೂರ್ಣಿಯಾದಲ್ಲಿ ಬಿಜೆಪಿ ಮತ್ತು ಪಪ್ಪು ಯಾದವ್ ಪರ ಜಿಲ್ಲಾ ಆಡಳಿತ, ಪೋಲೀಸು ಮತ್ತು ಗೂಂಡಾಗಳ ಕೂಟ ಕೆಲಸ ಮಾಡಿತು. ಮಧ್ಯಾಹ್ನದ ನಂತರ ಸಿಪಿಐ(ಎಂ) ಪರ ಯಾವುದೇ ಮತವಾಗದಂತೆ ಅರ್ಧಕ್ಕೂ ಹೆಚ್ಚು ಮತಗಟ್ಟೆಗಳಲ್ಲಿ ವ್ಯವಸ್ಥಿತವಾಗಿ ಕೆಲಸ ಮಾಡಿದೆ ಎಂದು ಬಿಹಾರ ರಾಜ್ಯ ಸಮಿತಿ ತಿಳಿಸಿದೆ.

ಭಾಗಲ್ಪುರ ಲೋಕಸಭಾ ಕ್ಷೇತ್ರದಲ್ಲಿ ಮಹಾಗಾಂವ, ಭಾಗಲ್ಪುರ, ಪಿರ್‌ಪೈಂಟಿ ವಿಧಾನಸಭಾ ಕ್ಷೇತ್ರದ ಹಲವು ಮತಗಟ್ಟೆಗಳಲ್ಲಿ ಬಿಜೆಪಿ ಪರ ಮತಗಟ್ಟೆ ಅಧಿಕಾರಿಗಳು ಮತ್ತು ಪೋಲೀಸರು ಸಿಪಿಐ(ಎಂ) ಬಲವಾಗಿರುವ ಕಡೆ ಮತದಾನವನ್ನು ಹಲವು ನೆಪ ಬಳಸಿ ನಿಧಾನವಾಗಿ ಆಗುಂತೆ, ಸುಗಮವಾಗಿ ಆಗದಂತೆ ನೋಡಿಕೊಂಡರು. ಹಲವು ಸಿಪಿಐ(ಎಂ) ಕಾರ್ಯಕರ್ತರ ಮೇಲೆ ಹಲ್ಲೆ ಮಾಡಿ ಆಸ್ಪತ್ರೆಗೆ ಕಳಿಸುವ ಸ್ಥಿತಿ ತಂದಿದ್ದರು. ಬಿಜೆಪಿ ಪರ ಬೋಗಸ್ ಮತದಾನವನ್ನು ಆನಂತರ ಬಿರುಸಿನಲ್ಲಿ ನಡೆಸಿದರು.

ಸಿಪಿಐ(ಎಂ) ಈ ಮತಗಟ್ಟೆಗಳಲ್ಲಿ ಪುನಃ ಮತದಾನಕ್ಕೆ ಒತ್ತಾಯಿಸಿದ್ದು ಅಲ್ಲಿ ಪ್ರತಿಭಟನಾ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ.

# ಬಿಹಾರ: ಲಾಲೂ ಪ್ರಭಾವ ನಿಜವಾಗಿಯೂ ಕುಸಿದಿದೆಯೇ?

ಲಾಲೂ ಪ್ರಸಾದ್ ಯಾದವ್‌ರವರ ಆರ್.ಜೆ.ಡಿ. ಪಕ್ಷದ ಬಲ 17 ರಿಂದ 7 ಕ್ಕಿಳಿದಿದೆ. (ಅಕ್ಟೋಬರ್ 28 ರಂದು ಉಳಿದ 4 ಸ್ಥಾನಗಳಿಗೂ ಚುನಾವಣೆ ನಡೆದಿದೆ). ಕೊನೆಗೂ ಬಿಜೆಪಿ-ಸಮತಾ ಕೂಟ ಲಾಲೂರವರ ಪ್ರಭಾವವನ್ನು ತೀವ್ರವಾಗಿ ಇಳಿಸುವಲ್ಲಿ ಯಶಸ್ವಿಯಾಗಿವೆ ಎಂದು ಕೆಲವರು ಹೇಳಿದರೆ, ಈ ವಿಶ್ಲೇಷಣೆ ಸರಿಯಲ್ಲ ಎಂದು ಇನ್ನು ಕೆಲವರು ಹೇಳುತ್ತಿದ್ದಾರೆ. ಏಕೆಂದರೆ ಸ್ಥಾನಗಳ ಸಂಖ್ಯೆಯಲ್ಲಿ ಇಷ್ಟೊಂದು ತೀವ್ರ ಕಡಿತವಾಗಿಯೂ ಮತ ಗಳಿಕೆಯ ಶೇಕಡಾವಾರು ಹೆಚ್ಚಿದೆ. ಕಳೆದ ಬಾರಿ 26.6% ಮತ ಪಡೆದಿದ್ದು, ಈ ಬಾರಿ ಅದು 29.37% ಕ್ಕೇರಿದೆ. ಬಿಜೆಪಿಯ ಮತಗಳಿಕೆ 24 ಅ ದಿಂದ 22.78% ಕ್ಕಿಳಿದಿದೆ. ಆದರೆ ಸ್ಥಾನಗಳು 2 ಹೆಚ್ಚಿವೆ. ಸಮತಾಪಕ್ಷ ಹಾಗೂ ಜನತಾದಳದ ವಿಲೀನಧ ಫಲ ಇಲ್ಲಿ ಕರ್ನಾಟಕದ ತದ್ವಿರುದ್ಧವಾದಂತಿದೆ. ಸಮತಾ ಪಕ್ಷ ಕಳೆದ ಬಾರಿ10 ಸ್ಥಾನ ಪಡೆದಿದ್ದರೆ ಜನತಾದಳ (ಸಂಯುಕ್ತ) ಈ ಬಾರಿ 18 ಸ್ಥಾನ ಪಡೆದಿದೆ. ಈ ಪಕ್ಷದ ಮತಗಳಿಕೆ ಬಿಜೆಪಿಗಿಂತಲೂ ಹೆಚ್ಚಿದೆ - 23.6% ಕಾಂಗ್ರೆಸ್‌ನ ಮತಗಳಿಕೆ 7.3% ದಿಂದ 8.4% ಕ್ಕೇರಿದರೂ ಸ್ಥಾನಗಳ ಸಂಖ್ಯೆ 5 ರಿಂದ 3 ಕ್ಕಿಳಿದಿದೆ. ಅಂದರೆ ಈಗಲೂ ಆರ್.ಜೆ.ಡಿ. ರಾಜ್ಯದಲ್ಲಿ ಅತ್ಯಂತ ಹೆಚ್ಚು ಮತಗಳಿಸಿದ ಪಕ್ಷ. ತನ್ನ ಪಕ್ಷದ ಬೆಂಬಲಿಗರನ್ನು ಮತದಾನ ಮಾಡದಂತೆ ತಡೆಯಲಾಗಿದೆ ಎಂದು ಲಾಲೂರವರು ಹೇಳಿದರೆ, ಚುನಾವಣೆಯ ಮೊದಲು ಚುನಾವಣಾ ಆಯೋಗದ ಮೇಲೆ ಹರಿಹಾಯುತ್ತಿದ್ದ ಫರ್ನಾಂಡೀಸ್, ನಿತಿಶ್ ಕುಮಾರ್, ಶರದ್ ಯಾದವ್ ಇದ್ದಕ್ಕಿದ್ದಂತೆ ಸುಮ್ಮನಾಗಿದ್ದಾರೆ - ಅವರ ಆಪಾದನೆಗಳೆಲ್ಲಾ ಟೊಳ್ಳು ಬೊಬ್ಬೆಯಾಗಿದ್ದವೆ? ಇಂತಹ ಟೊಳ್ಳು ಬೊಬ್ಬೆಯ ಹಿಂದಿದ್ದ ಉದ್ದೇಶವೇನು? ಈ ಪ್ರಶ್ನೆಗಳ ಬಗ್ಗೆ ಇನ್ನೂ ಜಿಜ್ಞಾಸೆ ನಡೆದಿದೆ.

# ಸಿಟಿಬಿಟಿ ಮತ್ತು ಭಾರತ



ಪ್ರಕಾಶ್ ಕಾರಟ್

ಪರಮಾಣು ಪರೀಕ್ಷಣೆಗಳನ್ನು ಕುರಿತ ಸಿಟಿಬಿಟಿ ಅಥವಾ ಸಮಗ್ರ ಪರೀಕ್ಷಣಾ ನಿಷೇಧ ಸಂಧಿಯನ್ನು ಊರ್ಜಿತಗೊಳಿಸಲು ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಸಂಸತ್ತಿನ ಮೇಲ್ಮನೆ ಸೆನೆಟ್ ನಿರಾಕರಿಸಿದೆ. ಇದನ್ನು ಊರ್ಜಿತಗೊಳಿಸಲು ಸದನದಲ್ಲಿ ಮೂರನೇ ಎರಡು ಬಹುಮತ ಬೇಕಿತ್ತು. ಸೆನೆಟ್‌ನಲ್ಲಿ ರಿಪಬ್ಲಿಕನ್ ಪಕ್ಷದ ಬಹುಮತವಿದೆ(ಅಧ್ಯಕ್ಷ ಕ್ಲಿಂಟನ್ ಡೆಮಾಕ್ರಟಿಕ್ ಪಕ್ಷದವರು) ಸೆನೆಟ್‌ನ ಈ ಕ್ರಮ ಪರಮಾಣು ಶಸ್ತ್ರಾಸ್ತ್ರಗಳ ಮೇಲಿನ ಹತೋಟಿಯ ಮೇಲೆ ಹಾಗೂ ಅಮೆರಿಕಾದ ನೇತೃತ್ವದ ಕೂಟ ತಮ್ಮ ಪರಮಾಣು ಪ್ರಾಬಲ್ಯವನ್ನು ಉಳಿಸಿಕೊಂಡು ಪರಮಾಣು ಶಸ್ತ್ರಾಸ್ತ್ರಗಳನ್ನು ಕಡಿತ ಮಾಡುವ ಯೋಜನೆಗಳ ಮೇಲೆ ಭಾರಿ ಪರಿಣಾಮ ಬೀರುವಂತದ್ದು.

ನಮ್ಮ ಮಟ್ಟಿಗೆ ಸೆನೆಟ್‌ನ ಈ ನಿರ್ಣಯದ ತಕ್ಷಣದ ಫಲಿತಾಂಶವೆಂದರೆ ಸಿಟಿಬಿಟಿಗೆ ಸಹಿ ಮಾಡಬೇಕೆಂದು ಅಮೆರಿಕಾ ಭಾರತದ ಮೇಲೆ ಹಾಕುತ್ತಿರುವ ಒತ್ತಡ ಸ್ವಲ್ಪ ಕಮ್ಮಿಯಾಗುತ್ತದೆ. ಸದ್ಯಕ್ಕೆ ವಾಜಪೇಯಿ ಸರಕಾರ ಪಾರಾದಂತಾಗಿದೆ. ಆದರೆ ಹಿಂದಿನ 13 ತಿಂಗಳ ಆಳ್ವಿಕೆಯಲ್ಲಿ ಈ ಸರಾಕರ ನಿರಂತರ ಅಮೆರಿಕನ್ ಒತ್ತಡದೆದುರು ಕುಸಿದು ಸಿಟಿಬಿಟಿಗೆ ಸಹಿ ಹಾಕುವುದಾಗಿ ಮಾತು ಕೊಟ್ಟಿತು ಎಂಬುದನ್ನು ನೆನಪಿಸಿಕೊಳ್ಳುವುದು ಅಗತ್ಯ.

## ಪೋಖ್ರಾನ್ ಫಲ!

ಮೇ 1998 ರಲ್ಲಿ ಪೋಖ್ರಾನ್ ಪರೀಕ್ಷಣೆಯ ಪರಿಣಾಮವಾಗಿ ವಾಜಪೇಯಿ ಸರಕಾರ ಅಮೆರಿಕಾದ ಜತೆ ರಹಸ್ಯ ಮಾತುಕತೆಗಿಳಿಯಿತು. ಜಸ್ವಂತ್ ಸಿಂಗ್ - ಸ್ಟ್ರೋಬ್ ಟಾಲ್ಬೋಟ್ ನಡುವೆ ಎಂಟು ತಿಂಗಳು ನಡೆದ ಈ ರಹಸ್ಯ ಮಾತುಕತೆಗಳ ಫಲವೆಂದರೆ ಈ ಸಂಧಿಗೆ ಸೇರಬೇಕಾದ ಅಂತಿಮ ಗಡುವಾದ ಸೆಪ್ಟೆಂಬರ್ 1999 ರೊಳಗೆ ಅದಕ್ಕೆ ಸಹಿ ಹಾಕುವುದಾಗಿ ಬಿಜೆಪಿ ನೇತೃತ್ವದ ಸರಕಾರ ಅಮೆರಿಕಾದ ಆಳರಸರಿಗೆ ಮಾತು ಕೊಟ್ಟಿತು. ನವೆಂಬರ್ 1998 ರಲ್ಲಿ ವಾಜಪೇಯಿ ಸರಕಾರ ಈ ಪ್ರಶ್ನೆಯ ಮೇಲೆ ಒಮ್ಮತ ರೂಪಿಸಲು ಸ್ವಲ್ಪ ಸಮಯ ಕೊಡಿ ಎಂದು ಅಮೆರಿಕಾವನ್ನು ಕೇಳಿತು. ಏಪ್ರಿಲ್ 1998 ರಲ್ಲಿ ಸರಕಾರದ ಪತನದಿಂದಾಗಿ ಒಂದು ಉಸ್ತುವಾರಿ ಸರಕಾರ ಇಂತಹ ನಿರ್ಣಯ ಕೈಗೊಳ್ಳಲು ಸಾಧ್ಯವಿಲ್ಲ ಎಂಬ ಕಾರಣದ ಮೇಲೆ ಈ ಬಗ್ಗೆ ನಿರ್ಣಯವನ್ನು ಮುಂದೂಡಲು ಅದಕ್ಕೆ ಅನುವು ದೊರೆಯಿತು.

ಚುನಾವಣಾ ಪ್ರಚಾರದಾದ್ಯಂತ ಬಿಜೆಪಿ ಮುಖಂಡತ್ವ ಈ ಬಗ್ಗೆ ಅಮೆರಿಕಾಕ್ಕೆ ಮತ್ತೆ - ಮತ್ತೆ ಭರವಸೆ ನೀಡುತ್ತಲೇ ಇತ್ತು - ತಾನು ಸಿಟಿಬಿಟಿಗೆ ಸಹಿ ಹಾಕಲು ಬದ್ಧವಾಗಿದ್ದೇನೆ, ಚುನಾವಣೆಗಳ ನಂತರ ಹೊಸ ಸರಕಾರ ಇದನ್ನು ಕೈಗೆತ್ತಿಕೊಳ್ಳುತ್ತದೆ ಎಂದು.

ಚುನಾವಣೆಗಳ ನಂತರ ಹೊಸ ಬಿಜೆಪಿ ನೇತೃತ್ವದ, ಸರಕಾರ ರಚನೆಯಾದಾಗ ಪ್ರಧಾನ ಮಂತ್ರಿ ವಾಜಪೇಯಿ ಸಿಟಿಬಿಟಿಯ ಬಗ್ಗೆ ಒಂದು ಸ್ಪಷ್ಟ ಹೇಳಿಕೆ ನೀಡಿದರು. ಇದು ಅಮೆರಿಕಾದ ಸೆನೆಟ್ ಈ ಸಂಧಿಯನ್ನು ತಿರಸ್ಕರಿಸುವ ಮೊದಲು ನೀಡಿದ ಹೇಳಿಕೆ. ಅಕ್ಟೋಬರ್ 18 ರಂದು ಅಮೆರಿಕನ್ ಮ್ಯಾಗಝಿನ್ 'ನ್ಯೂಸ್ ವೀಕ್' ಗೆ ನೀಡಿದ ಸಂದರ್ಶನದಲ್ಲಿ ಅವರು ಹೀಗೆ ತಿಳಿಸಿದ್ದರು -

'ನಾವು ಸಿಟಿಬಿಟಿ ಬಗ್ಗೆ ಒಂದು ರಾಷ್ಟ್ರೀಯ ಒಮ್ಮತ ಕಟ್ಟುವ ಪ್ರಕ್ರಿಯೆಯಲ್ಲಿದ್ದಾಗ ಆಂತರಿಕ ರಾಜಕೀಯ ಬೆಳವಣಿಗೆಗಳಿಂದಾಗಿ ಮಧ್ಯಾವಧಿ ಚುನಾವಣೆ ನಡೆಯಬೇಕಾಗಿ ಬಂತು. ಈಗ ಹೊಸ ಸರಕಾರ ಬಂದ ಕೂಡಲೇ ಒಂದು ರಾಷ್ಟ್ರೀಯ ಒಮ್ಮತ ಪಡೆಯುವ ಆ ಪ್ರಕ್ರಿಯೆಯನ್ನು ಮುಂದುವರೆಸಲಾಗುವುದು. ನಮ್ಮ ಜೊತೆ ಸಂವಾದದಲ್ಲಿರುವ ಪ್ರಮುಖರು ಇದಕ್ಕೆ ಸರಿಹೊಂದುವ ಏನಾದರೂ ಕ್ರಮ ಕೈಗೊಂಡರೆ ಒಮ್ಮತ ಕಟ್ಟಲು ನಮಗೆ ನೆರವಾಗುತ್ತದೆ"

## ನಮ್ಮ ವಿರೋಧ ಏಕೆ?

ಸಿಪಿಐ(ಎಂ) ಸತತವಾಗಿ ಸಿಟಿಬಿಟಿಗೆ ಸಹಿ ಹಾಕುವುದನ್ನು ವಿರೋಧಿಸಿಕೊಂಡು ಬಂದಿದೆ. ಏಕೆಂದರೆ ಇದು ಒಂದು ಅಸಮಾನ ಹಾಗೂ ಪಕ್ಷಪಾತಪೂರ್ಣ ಸಂಧಿ. ಭಾರತ ಇದರಲ್ಲಿ ಭಾಗಿಯಾಗಬಾರದು ಎಂಬುದು ಸಿಪಿಐ(ಎಂ) ನಿಲುವು. ಅದೇ ವೇಳೆಗೆ ಪರಮಾಣು ಶಸ್ತ್ರ ತಯಾರಿಸುವ ವಾಜಪೇಯಿ ಸರಕಾರದ ನಿರ್ಣಯವನ್ನೂ ಸಿಪಿಐ(ಎಂ) ವಿರೋಧಿಸಿದೆ. ನಮ್ಮ ಮುಂದಿರುವ ಅತ್ಯುತ್ತಮ ದಾರಿಯೆಂದರೆ ಪರಮಾಣು ಅಸ್ತ್ರ ಹೊಂದಿರುವ ದೇಶಗಳು ತಮ್ಮೆಲ್ಲಾ ಪರಮಾಣು ಅಸ್ತ್ರಗಳನ್ನು ಒಂದು ಸಮಯ ಚೌಕಟ್ಟಿನೊಳಗೆ ನಾಶ ಮಾಡಲು ಒಪ್ಪುವಂತೆ ಮಾಡಿ ಸಾರ್ವತ್ರಿಕ ಪರಮಾಣು ನಿಶ್ಶಸ್ತ್ರೀಕರಣಕ್ಕೆ ಪ್ರಯತ್ನ ಮುಂದುವರೆಸುವುದು. ಅದುವರೆಗೆ ಭಾರತ ಈ ಅಸಮಾನ ಪರಮಾಣು ವ್ಯವಸ್ಥೆಯನ್ನು ಒಪ್ಪಲು ನಿರಾಕರಿಸುತ್ತಲೇ ಪರಮಾಣು ಪರೀಕ್ಷಣೆ ನಡೆಸುವುದಾಗಲೀ, ಪರಮಾಣು ಅಸ್ತ್ರಗಳನ್ನು ತಯಾರಿಸುವುದಾಗಲೀ ಮಾಡಬಾರದು.

## ನಿರ್ಬಂಧಗಳ ಬೆದರಿಕೆಯ ಛಾಯೆ

ಆದರೆ ಬಿಜೆಪಿ ನೇತೃತ್ವದ ಸರಕಾರ ಪರಮಾಣು ಪರೀಕ್ಷಣೆ ನಡೆಸುವ, ಪರಮಾಣು ಅಸ್ತ್ರಗಳನ್ನು ತಯಾರಿಸಬೇಕೆನ್ನುವ ವಿಪತ್ಕಾರಿ ಮಾರ್ಗವನ್ನೇ ಹಿಡಿಯಿತು. ಇದಕ್ಕೆ ಪಾಕಿಸ್ತಾನದ ಪ್ರತಿಕ್ರಿಯೆಯಿಂದಾಗಿ ನಮ್ಮ ಉಪಖಂಡದಲ್ಲಿ ಪರಮಾಣು ಶಸ್ತ್ರಾಸ್ತ್ರ ಪೈಪೋಟಿ ಆರಂಭವಾಗುವಂತಾಯಿತು. ಇಂತಹ ಒಂದು ಪರಮಾಣು ನೀತಿ ಅನುಸರಿಸಿದ ಕೂಡಲೇ ವಾಜಪೇಯಿ ಸರಕಾರ ಅಮೆರಿಕನ್ ಒತ್ತಡದೆದುರು ಕುಸಿಯಿತು. ಪೋಖ್ರಾನ್ ಪರೀಕ್ಷೆ ನಡೆಸಿದ ಆರೇ ತಿಂಗಳೊಳಗೆ ಸಿಟಿಬಿಟಿಗೆ ಸಹಿ ಹಾಕುವುದಾಗಿ ಮಾತು ಕೊಟ್ಟಿತು. ಪರೀಕ್ಷಣೆಯ ನಂತರ ತನ್ನನ್ನು ಪರಮಾಣು ಶಸ್ತ್ರ ಸಂಪನ್ನ ದೇಶ ಎಂದು ಘೋಷಿಸಿದ ಮೇಲೆ ಭಾರತ ಈಗ ಪರಮಾಣು ಅಸ್ತ್ರ ದೇಶಗಳ ಕ್ಲಬ್ ಸೇರಿ, ಈ ಕ್ಲಬ್ಬಿನ ಹೊರಗಿನವರನ್ನು ಹೊರಗೇ ಇಡುವ ಅಸಮಾನ ಪರಮಾಣು ವ್ಯವಸ್ಥೆಯನ್ನು ಜಾರಿಗೆ ತರುವಲ್ಲಿ ಭಾಗಿಯಾಗಬೇಕೆಂಬುದು ಇದಕ್ಕೆ ಕೊಟ್ಟ ಮೋಸದ ಸಮರ್ಥನೆ.

ಬಲಪ್ರಯೋಗದ ಬೆದರಿಕೆಯ ನೆರಳಲ್ಲಿ ಸಿಟಿಬಿಟಿಗೆ ಸಹಿ ಹಾಕುವ ನಿರ್ಣಯ ಕೈಗೊಳ್ಳಲಾಯಿತು. ಅಮೆರಿಕಾ ಮತ್ತು ಇತರ G-7 ಶ್ರೀಮಂತ ದೇಶಗಳು ಹಾಕಿದ ನಿರ್ಬಂಧಕ್ಕೆ ಒಳಪಟ್ಟು ವಾಜಪೇಯಿ ಸರಕಾರ ಭಾರತ ಸಾರ್ವಭೌಮತೆ ಹಾಗೂ ಸ್ವತಂತ್ರ ಅಧಿಕಾರಗಳನ್ನು ಒತ್ತೆಯಿಟ್ಟು ಸಿಟಿಬಿಟಿಗೆ ಸಹಿ ಹಾಕುವುದಾಗಿ ಹೇಳಿತು.

## ಅಮೆರಿಕನ್ ಆಳರಸರ ತರ್ಕ

ವಾಜಪೇಯಿ ಸರಕಾರದ ಅವಸರದ ನಿರ್ಣಯ ಭಾರತಕ್ಕೆ ವಿಪತ್ಕಾರಿ ಎಂಬುದು ಸಿಟಿಬಿಟಿಯನ್ನೂ ಅಮೆರಿಕಾದ ಸೆನೆಟ್ ತಿರಸ್ಕರಿಸಿರುವ ಹಿನ್ನೆಲೆಯಲ್ಲಿ ಈಗ ಸ್ಪಷ್ಟವಾಗಿದೆ. ಅಮೆರಿಕಾ ಈಗ 6000 ಪರಮಾಣು ಅಸ್ತ್ರಗಳನ್ನು ಹೊಂದಿದೆ. ಇದು 1980ರ ದಶಕದಲ್ಲಿ ಅದು ಹೊಂದಿದ್ದುದರ ಅರ್ಧದಷ್ಟು. ಆದರೂ ಇದು ಬೇರೆ ಪರಮಾಣು ಅಸ್ತ್ರ ಸಂಪನ್ನ ದೇಶಗಳು ಹೊಂದಿರುವುದಕ್ಕಿಂತ ಬಹಳ ಹೆಚ್ಚು. Start-II (ಸಾಮರಿಕ ಶಸ್ತ್ರಾಸ್ತ್ರ ಕಡಿತ ಸಂಧಿ-II) ಜಾರಿಯಾಗುವ ಸಂಭವಂತೂ ಕಡಿಮೆಯಿದೆ. ಒಂದು ವೇಳೆ ಇದು ಜಾರಿಯಾದರೂ ಆಗಲೂ ಅಮೆರಿಕಾದ ಬಳಿ 3000 ಪರಮಾಣು ಅಸ್ತ್ರಗಳಿರುತ್ತವೆ. ಅಂದರೆ ಆಗಲೂ ಅಮೆರಿಕಾದ ಬಳಿ ಜಗತ್ತಿನ ಅತ್ಯಂತ ಬಲಿಷ್ಟ ಪರಮಾಣು ಶಸ್ತ್ರಾಗಾರ ಇರುತ್ತದೆ. ಸಿಟಿಬಿಟಿಗೆ ಅಮೆರಿಕಾ ಸಹಿ ಹಾಕಲು ಕ್ಲಿಂಟನ್ ಆಡಳಿತ ಮತ್ತು ಅವರ ಡೆಮಾಕ್ರೆಟಿಕ್ ಪಕ್ಷದ ತರ್ಕವೆಂದರೆ ಮುಂದೆ ಪರಮಾಣು ಅಸ್ತ್ರ ಪಡೆಯುವ ಸಾಮರ್ಥ್ಯ ಇರುವ ದೇಶಗಳು ಇನ್ನು ಮುಂದೆ ಪರೀಕ್ಷಣೆ ನಡೆಸದಂತಾಗಿ ಅವು ಪರಮಾಣು ಅಸ್ತ್ರ ತಯಾರಿಸದಂತೆ ಸಿಟಿಬಿಟಿ ಪರಿಣಾಮಕಾರಿಯಾಗಿ ತಡೆಯುತ್ತದೆ, ಇತ್ತ ಅಮೆರಿಕ ತಾನು ಹೊಂದಿರುವ ಶಸ್ತ್ರ ಭಂಡಾರದಿಂದಾಗಿ ತನ್ನ ಪ್ರಾಬಲ್ಯವನ್ನು ಮುಂದುವರೆಸಲು ಸಾಧ್ಯ.

ಆದರೆ ಆಕ್ರಮಣಕಾರಿ, ಸಂಕುಚಿತವಾದೀ ಸಂಪ್ರದಾಯಶರಣ ರಿಪಬ್ಲಿಕನ್ ಪಕ್ಷದವರಿಗೆ ಇದು ಕೂಡಾ ಸಾಲದಂತೆ, ಯಾವುದೇ ಶಸ್ತ್ರಾಸ್ತ್ರ ನಿಯಂತ್ರಣ ಕ್ರಮಗಳಿರಬಾರದು. ಹೊಸ ಪರಮಾಣು ಶಸ್ತ್ರಗಳನ್ನು ಕ್ಷಿಪಣಿ ವ್ಯವಸ್ಥೆಗಳನ್ನು ತಯಾರಿಸಲು ಯಾವುದೇ ಲಂಗು ಲಗಾಮಿಲ್ಲದ ಹಕ್ಕು ಅಮೆರಿಕಾಕ್ಕೆ ಇರಬೇಕು ಎಂಬುದು ಅವರ ನಿಲುವು. ಅಮೆರಿಕನ್ ಸೆನೆಟ್‌ನ ತಿರಸ್ಕಾರ ಕಂಡ ಮೇಲಾದರೂ ಸಿಟಿಬಿಟಿಗೆ ಸೇರುವುದೇ ಪರಮಾಣು ನಿಶ್ಶಸ್ತ್ರೀಕರಣವನ್ನು ತರಲು ಅತ್ಯುತ್ತಮ ಆಯ್ಕೆ ಎಂದು ವಾದಿಸುವವರು ಪುನರಾಲೋಚನೆ ಮಾಡಬೇಕು. ಅಮೆರಿಕನ್ ಆಳುವ ವಲಯಗಳು ಪರಮಾಣು ಯಜಮಾನಿಕೆಯನ್ನು ಬಿಟ್ಟುಕೊಡುತ್ತವೆ ಎಂದು ನಿರೀಕ್ಷಿಸುವುದು ಅವಾಸ್ತವಿಕತೆಯಾಗುತ್ತದೆ. ನಿಜ ಸಂಗತಿಯೆಂದರೆ ಕ್ಲಿಂಟನ್ ಆಡಳಿತ ಅಮೆರಿಕಾ ತನ್ನ ಬಳಕೆಗೆ ಹೊಸ ಕ್ಷಿಪಣಿ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಿರುವುದು ಹಾಗೂ ಪೂರ್ವಏಶ್ಯಾದಲ್ಲಿ ಒಂದು ಹೊಸ 'ಥಿಯೇಟರ್ ಕ್ಷಿಪಣಿ ರಕ್ಷಣಾ ಕಾರ್ಯಕ್ರಮ' ಆರಂಭಿಸಿರುವುದು ರಶ್ಯಾ ಮತ್ತು ಚೀನಾ ಪ್ರತಿಕ್ರಮಗಳನ್ನು ಕೈಗೊಳ್ಳುವಂತೆ ಮಾಡಿದೆ.

ಅಮೆರಿಕಾಕ್ಕೆ ಸಿಟಿಬಿಟಿ ಪರಮಾಣು ಅಸ್ತ್ರಗಳು ಪರಮಾಣು ಕ್ಲಬ್ಬಿನ ಐದು ದೇಶಗಳ ಕೈಯಲ್ಲೇ ಇರುವಂತೆ ನೋಡಿಕೊಳ್ಳುವ ಹಾಗೂ ಭಾರೀ ಪ್ರಮಾಣದಲ್ಲಿ ಅಮೆರಿಕನ್ ಪರಮಾಣು ಪ್ರಾಬಲ್ಯ ಇರುವಂತೆ ಮಾಡುವ ಒಂದು ಪರಮಾಣು ಪ್ರಸರಣ-ನಿರೋಧಕ ಕ್ರಮವಷ್ಟೆ.

ನಿಜ, ಸೆನೆಟ್‌ನ ಬಹುಮತದ ನಿರ್ಣಯ ಅಮೆರಿಕನ್ ಸಾಮ್ರಾಜ್ಯಶಾಹಿಯ ಹೆಚ್ಚು ಪ್ರತಿಗಾಮಿಯಾದ ಮುಖವನ್ನು ಪ್ರತಿನಿಧಿಸುತ್ತದೆ. ಆದರೆ ಅಣ್ವಸ್ತ್ರ ಪ್ರಸರಣ ನಿಷೇಧ ಕುರಿತ ಅಮೆರಿಕಾದ ನಿಲುವು ಗೋಸುಂಬೆತನ, ಇಬ್ಬಂದಿತನದಿಂದ ತುಂಬಿದೆ. ಅಮೆರಿಕನ್ ಆಳುವ ವರ್ಗಗಳು ತಮ್ಮ ಪ್ರಾಬಲ್ಯ ಮೆರೆಸಲು ಪರಮಾಣು ಅಸ್ತ್ರಗಳನ್ನು ಒಂದು ಸಾಮರಿಕ ಸಾಧನವಾಗಿ ಬಳಸುವುದನ್ನು ಕೈಬಿಡಲು ಒಪ್ಪುವವರೆಗೆ ನೈಜ ಪರಮಾಣು ನಿಶ್ಶಸ್ತ್ರೀಕರಣದತ್ತ ಸಾಗಲು ಸಾಧ್ಯವಿಲ್ಲ.

## ಸರಿಯಾದ ದಾರಿ

ಅದುವರೆಗೆ ವಾಜಪೇಯಿ ಸರಕಾರ ಪರೀಕ್ಷಣೆ ನಡೆಸಿ ಪರಮಾಣು ಅಸ್ತ್ರ ತಯಾರಿಸಲು ನಿರ್ಧರಿಸುವ ಮೊದಲು ಭಾರತ ಅಂಗೀಕರಿಸಿದ್ದ ನಿಲುವೇ ಭಾರತಕ್ಕೆ ತೆರೆದಿರುವ ಅತ್ಯುತ್ತಮ ದಾರಿ. ಯಾವುದೇ ಪಕ್ಷಪಾತಪೂರ್ಣ ಸಂಧಿಯಲ್ಲಿ ಭಾಗವಹಿಸದೆ, ಪರಮಾಣು ಶಸ್ತ್ರೀಕರಣ ನಡೆಸದೆ ಸಂಪೂರ್ಣ ಪರಮಾಣು ನಿಶ್ಶಸ್ತ್ರೀಕರಣಕ್ಕೆ ಸಕ್ರಿಯವಾಗಿ ದುಡಿಯುವುದು ಭಾರತದ ಸಾಮರಿಕ ಹಿತಾಸಕ್ತಿಗಳಿಗೆ ಹಾಗೂ ವಿಶ್ವ ರಂಗದಲ್ಲಿ ಅದರ ಒಂದು ಪ್ರಗತಿಪರ ಪಾತ್ರಕ್ಕೆ ಅನುರೂಪವಾದ ನಿಲುವು.

ಆದರೆ ಬಿಜೆಪಿ ನೇತೃತ್ವದ ಸರಕಾರ ಇಂತಹ ದಾರಿಯಿಂದ ಬಹಳ ದೂರವಾಗಿದೆ. ಅಮೆರಿಕನ್ ಸೆನೆಟ್ ಸಿಟಿಬಿಟಿಯನ್ನು ತಿರಸ್ಕರಿಸಿದ ನಂತರವೂ ನಮ್ಮ ಸರಕಾರ ಸಿಟಿಬಿಟಿಗೆ ಸಹಿ ಹಾಕಲು ಒಂದು ಒಮ್ಮತ ನಿರ್ಮಿಸಲು ಬದ್ಧವಾಗಿದೆ ಎನ್ನುತ್ತಿದೆ. ಸಿಟಿಬಿಟಿ ಪ್ರಶ್ನೆ ಕುರಿತ ಭಾರತದ ನಿಲುವು ಸೆನೆಟ್‌ನ ತಿರಸ್ಕಾರದಿಂದೇನೂ ಬದಲಾಗುವುದಿಲ್ಲ ಎಂದು ವಿದೇಶಾಂಗ ಮಂತ್ರಿ ಜಸ್ವಂತ್ ಸಿಂಗ್ ಒತ್ತಿ ಹೇಳಿದ್ದಾರೆ. ಇದು ಸಿಟಿಬಿಟಿ ಜಾರಿಗೆ ಬರುವುದಕ್ಕೆ ಭಾರತದಿಂದೇನೂ ಅಡ್ಡಿ ಬರದು ಎಂದು ಕಳೆದ ವರ್ಷ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಪ್ರಧಾನಿಗಳು ತಿಳಿಸಿದ ನಿಲುವಿನ ಪುನರಾವರ್ತನೆಯಷ್ಟೆ. ಬಿಜೆಪಿ ನೇತೃತ್ವದ ಸರಕಾರ ಈ ನಿಲುವಿಗೆ ಅಂಟಿಕೊಂಡಿರುವುದು ಅಮೆರಿಕನ್ ಆಡಳಿತಕ್ಕೆ ಈ ಸರಕಾರದ ಬದ್ಧತೆ ಎಷ್ಟು ಆಳವಾಗಿದೆ ಎಂಬುದನ್ನು ತೋರಿಸುತ್ತದೆ.

## ಪಾಕಿಸ್ತಾನದ ಆತಂಕಕಾರಿ ಬೆಳವಣಿಗೆ

ಪಾಕಿಸ್ತಾನದಲ್ಲಿನ ಗಂಭೀರ ಬೆಳವಣಿಗೆಗಳೂ ಸರಕಾರದ ಯೋಚನೆಗಳ ಮೇಲೆ ಯಾವುದೇ ಪರಿಣಾಮ ಬೀರಿದಂತಿಲ್ಲ. ಪಾಕಿಸ್ತಾನದ ಬೆಳವಣಿಗೆಗಳಿಂದಾಗಿ ಸಿಟಿಬಿಟಿ ಯಲ್ಲಿ ಯಾವುದೇ ಬದಲಾವಣೆ ಮಾಡುವ ಅಗತ್ಯವೇನಿಲ್ಲ ಎಂದು ಜಸ್ವಂತ್ ಸಿಂಗ್ ಸಾರಿದ್ದಾರೆ. ಪಾಕಿಸ್ತಾನದಲ್ಲಿನ ಕ್ಷಿಪ್ರ ಕ್ರಾಂತಿಯಿಂದಾಗಿ ಮಿಲಿಟರಿ ಅಧಿಕಾರ ವಹಿಸಿಕೊಂಡಿದೆ. ಕೆಲವೇ ತಿಂಗಳ ಹಿಂದೆ ಈ ಶಕ್ತಿಗಳೊಡನೆ ಕಾರ್ಗಿಲ್‌ನಲ್ಲಿ ಒಂದು ಮಿಲಿಟರಿ ಸಂಘರ್ಷ ನಡೆದಿದೆ. ವಿಶ್ವಾಸ ಬೆಳೆಸುವ ಮಾತುಗಳು ಬಹಳ ಕೇಳಿಬಂದರೂ ಈಗ ಎರಡೂ ದೇಶಗಳು ಪರಮಾಣು ಶಸ್ತ್ರೀಕರಣದ ದಾರಿ ಹಿಡಿದಿವೆ. ಪಾಕಿಸ್ತಾನದಲ್ಲಿನ ಹೊಸ ಬೆಳವಣಿಗೆಗಳಿಂದಾಗಿ ಮೂಲಭೂತವಾದಿ ಶಕ್ತಿಗಳೊಂದಿಗೆ ಕೈಮಿಲಾಯಿಸಿರುವ ಮಿಲಿಟರಿ ಅಧಿಕಾರ ವಹಿಸಿಕೊಂಡಿರುವುದು ಸಹಜವಾಗಿಯೇ ಭಾರತಕ್ಕೆ ಮತ್ತು ವಿಶ್ವಕ್ಕೆ ಆತಂಕದ ಸಂಗತಿ. ಪಾಕಿಸ್ತಾನದ ಬೆಳವಣಿಗೆಗಳು ದಕ್ಷಿಣ ಏಶಿಯಾದಲ್ಲಿ ಪರಮಾಣು ಶಸ್ತ್ರೀಕರಣದ ಅಪಾಯಗಳನ್ನು ಎತ್ತಿ ತೋರಿದೆ. ಸನ್ನಿವೇಶಗಳಲ್ಲಿನ ಅಪಾಯಗಳನ್ನು ಕಾಣುವಾಗ ಪರಮಾಣು ತಡೆಯೊಂದಿದ್ದರೆ ಈ ಪ್ರದೇಶದಲ್ಲಿ ಶಾಂತಿ, ಭದ್ರತೆ ನೆಲೆಸುತ್ತದೆಂಬ ತರ್ಕ ಕೇವಲ ಟೊಳ್ಳು ಶಬ್ದಾಡಂಬರವಾಗಿ ಕೇಳಿಸುತ್ತದೆ.

ಅಮೆರಿಕನ್ ಸೆನೆಟ್‌ನ ನಿರ್ಣಯದ ನಂತರ ಸಿಟಿಬಿಟಿಗೆ ಆಗಿರುವ ಹಿನ್ನಡೆ ಹಾಗೂ ಪಾಕಿಸ್ತಾನದಲ್ಲಿನ ಮಿಲಿಟರಿ ಕ್ಷಿಪ್ರಕ್ರಾಂತಿಯ ಸಂದರ್ಭದಲ್ಲಿ ವಾಜಪೇಯಿ ಸರಕಾರ ಅಂಗೀಕರಿಸಿದ ದಾರಿಯು ಗಂಭೀರ ಮರುವಿಮರ್ಶೆಯಾಗಬೇಕು. ಸಿಟಿಬಿಟಿಗೆ ಸಹಿ ಹಾಕುವ ಮಾತು ಕೈಬಿಡಬೇಕು. ಸಂಸತ್ತಿನಲ್ಲಿ ಸೂಕ್ತ ಶಾಸನ ಅಂಗೀಕರಿಸಿ ಭಾರತ ಇನ್ನುಮುಂದೆ ಪರಮಾಣು ಪರೀಕ್ಷಣೆ ನಡೆಸುವುದಿಲ್ಲ ಎಂದು ಮತ್ತೆ ದೃಢ ಪಡಿಸಬೇಕು. ತಾನು ಪರಮಾಣು ಶಸ್ತ್ರೀಕರಣ ಮಾಡುವುದಿಲ್ಲ ಎಂದು ದೃಢವಾಗಿ ಸಾರಿ ಪಾಕಿಸ್ತಾನವೂ ಇಂತಹುದೇ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಕರೆ ನೀಡಬೇಕು. ಸಾಮ್ರಾಜ್ಯಶಾಹಿ ಗಳ ಒತ್ತಡಗಳಿಗೆ ಪ್ರತ್ಯುತ್ತರ ನೀಡಿ ಶಾಂತಿ ಮತ್ತು ಪರಮಾಣು ನಿಶ್ಶಸ್ತ್ರೀಕರಣಕ್ಕೆ ಭಾರತದ ಬದ್ಧತೆಯನ್ನು ಮತ್ತೊಮ್ಮೆ ಒತ್ತಿಹೇಳುವುದೇ ಏಕೈಕ ಹಾಗೂ ಸರಿಯಾದ ದಾರಿ.

ಪೋಖ್ರಾನ್ ಸ್ಫೋಟದ ನಂತರ ಸಿಟಿಬಿಟಿಗೆ ಸಹಿ ಹಾಕಲು ಭಾರತವನ್ನು ಪೀಡಿಸುತ್ತಿರುವ ಅಮೆರಿಕಾದಲ್ಲೇ ಅಲ್ಲಿಯ ಸೆನೆಟ್ ಸಿಟಿಬಿಟಿಗೆ ಮಂಜೂರಾತಿ ನೀಡಲು ನಿರಾಕರಿಸಿದೆ. ಆದರೂ ವಾಜಪೇಯಿ ಸರಕಾರ ಸಿಟಿಬಿಟಿಗೆ ಸಹಿ ಹಾಕಲು ಈಗಲೂ ಸಿದ್ಧ ಎಂದು ಹೇಳುತ್ತಾ ಅಮೆರಿಕಾದ ಆಳರಸರೆದುರು ಎಷ್ಟು ತಲೆಬಾಗುತ್ತಿದೆ ಎಂಬುದನ್ನು ಬಯಲು ಮಾಡಿಕೊಂಡಿದೆ.

ಅಮೆರಿಕನ್ ಸೆನೆಟ್‌ನ ತಿರಸ್ಕಾರ ಮತ್ತು ಪಾಕಿಸ್ತಾನದಲ್ಲಿ ಮಿಲಿಟರಿ ಆಡಳಿತದ ಸಂದರ್ಭದಲ್ಲಿ ವಾಜಪೇಯಿ ಸರಕಾರ ಅಂಗೀಕರಿಸಿದ ಈ ದಾರಿಯ ಗಂಭೀರ ಮರುವಿಮರ್ಶೆಯಾಗಬೇಕು, ಸಿಟಿಬಿಟಿಗೆ ಸಹಿ ಹಾಕುವ ಮಾತನ್ನು ನಿಲ್ಲಿಸಬೇಕು, ಸಂಸತ್ತಿನಲ್ಲಿ ಒಂದು ಸೂಕ್ತ ಶಾಸನ ಅಂಗೀಕರಿಸಿ ಭಾರತ ಇನ್ನು ಮುಂದೆ ಪರಮಾಣು ಪರೀಕ್ಷಣೆ ನಡೆಸುವುದಿಲ್ಲ, ಪರಮಾಣು ಶಸ್ತ್ರೀಕರಣ ಮಾಡುವುದಿಲ್ಲ, ಪಾಕಿಸ್ತಾನವೂ ಇಂತಹುದೇ ಕ್ರಮಗಳನ್ನು ಕೈಗೊಳ್ಳಬೇಕೆಂದು ಕರೆ ನೀಡಬೇಕು ಎನ್ನುತ್ತಾರೆ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರಟ್. ಸಾಮ್ರಾಜ್ಯಶಾಹಿಗಳ ಒತ್ತಡಗಳನ್ನು ಲೆಕ್ಕಿಸದೆ, ಶಾಂತಿ ಮತ್ತು ಪರಮಾಣು ನಿಶ್ಶಸ್ತ್ರೀಕರಣಕ್ಕೆ ಭಾರತ ಬದ್ಧತೆಯನ್ನು ಪುನರುಚ್ಚರಿಸುವುದೇ ಏಕೈಕ ಸರಿಯಾದ ಮಾರ್ಗ ಎನ್ನುತ್ತಾರೆ ಅವರು.

# ಇಂಡೋನೇಶ್ಯಾದಲ್ಲಿ ಹೊಸ ಪ್ರಜಾಸತ್ತೆಯ ಯುಗ ಆರಂಭ

## ವಾಹಿದ್ ಅಧ್ಯಕ್ಷ - ಮೇಘವತಿ ಉಪಾಧ್ಯಕ್ಷೆ : ಸುಹಾರ್ತೋ ಬೆಂಬಲಿಗರಿಲ್ಲದ ಸರ್ಕಾರ

**ಇಂಡೋನೇಶ್ಯಾದ ಅಧ್ಯಕ್ಷೀಯ ಚುನಾವಣೆಗಳು ಮುಗಿದು ಆಶ್ಚರ್ಯಕರ ಸ್ವರೂಪದ ಹೊಸ ಸರ್ಕಾರ ಅಧಿಕಾರಕ್ಕೆ ಬಂದಿದೆ. ವ್ಯಾಪಕವಾಗಿ ನಿರೀಕ್ಷಿಸಿದಂತೆ ಪಾರ್ಲಿಮೆಂಟಿನಲ್ಲಿ ಅತಿ ದೊಡ್ಡ ಪಕ್ಷದ ಅಭ್ಯರ್ಥಿ ಮೇಘವತಿ ಅಧ್ಯಕ್ಷರಾಗಿ ಆಯ್ಕೆಯಾಗಿಲ್ಲ, ಬದಲಾಗಿ ಪಾರ್ಲಿಮೆಂಟಿನ ಚುನಾವಣೆಯಲ್ಲಿ ಮೂರನೇ ಸ್ಥಾನ ಗಳಿಸಿದ ರಾಷ್ಟ್ರೀಯ ಜಾಗೃತಿ ಪಕ್ಷದ ವಾಹಿದ್ ಆಯ್ಕೆಯಾಗಿದ್ದಾರೆ. ಮಾಜಿ ಸರ್ವಾಧಿಕಾರಿ ಸುಹಾರ್ತೋರ ಗೋಲ್ಕರ್ ಪಕ್ಷ ಮತ್ತು ಮಿಲಿಟರಿ ಇದರಲ್ಲಿ ಪ್ರಮುಖ ಪಾತ್ರವಹಿಸಿತ್ತು, ಇದು ವ್ಯಾಪಕ ದಂಗೆಗೆ ದಾರಿ ಮಾಡಿಕೊಟ್ಟಿತು. ಈ ಜನಾಂದೋಲನದ ನೆರಳಿನಲ್ಲಿ ಮೇಘವತಿ ಉಪಾಧ್ಯಕ್ಷೆಯಾಗಿ ಆಯ್ಕೆಯಾಗಿದ್ದಾರೆ. ಮಾಜಿ ಅಧ್ಯಕ್ಷ ಸುಹಾರ್ತೋ, ಅವರ ಗೋಲ್ಕರ್ ಪಕ್ಷ ಮತ್ತು ಸೈನ್ಯದ ಮೇಲೆ ಆಧಾರಿತ ಸರ್ಕಾರ ಮುಂದುವರೆಸುವ ಅವರ ಪಿತೂರಿಗಳನ್ನು ಪುನಃ ಜನಾಂದೋಲನ ಹಿಮ್ಮೆಟ್ಟಿಸಿವೆ. ಇದು ಇಂಡೋನೇಶ್ಯಾದ ಹೊಸ ಪ್ರಜಾಸತ್ತೆಯ ಯುಗ ಆರಂಭ ಎಂದು ಧಾರಾಳವಾಗಿ ಹೇಳಬಹುದಾದರೂ, ಜನರ ಆಶೋತ್ತರಗಳನ್ನು ಈಡೇರಿಸಬಲ್ಲ ಇಂಡೋನೇಶ್ಯಾದ ಇತ್ತೀಚಿನ ವಿದ್ಯಮಾನಗಳ ವಿಶ್ಲೇಷಣೆ ಮಾಡುವ ಒಂದು ವರದಿ**



ಉಪಾಧ್ಯಕ್ಷೆ ಮೇಘವತಿ ಮತ್ತು ಅಧ್ಯಕ್ಷ ವಾಹಿದ್

ಇಂಡೋನೇಶ್ಯಾದಲ್ಲಿ ಪ್ರಜಾಸತ್ತೆಯ ಹೊಸ ಯುಗ ಆರಂಭವಾಗಿದೆ. ಸರ್ವಾಧಿಕಾರಿ ಸುಹಾರ್ತೋ ಸ್ಥಾಪಿಸಿದ ದಳ್ಳಾಳಿ ಬಂಡವಾಳಶಾಹಿಯ ಮಿಲಿಟರಿ ಸರ್ವಾಧಿಕಾರ ಮುರಿದು ಬಿದ್ದಿದೆ. ಜನಾಂದೋಲನದಲ್ಲಿ ಸುಹಾರ್ತೋ ಉರುಳಿದ್ದೂ ಅವನ ಭಟ್ಟಂಗಿಗಳಾದ (ಆಗಿನ) ಉಪಾಧ್ಯಕ್ಷ ಹಬೀಬಿ ಮತ್ತು ಸೇನಾ ಮುಖ್ಯಸ್ಥ ವಿರಾಂತೋ ಮೂಲಕ. ಅದೇ ದುಷ್ಟಕೂಟ ಸರ್ವಾಧಿಕಾರ ಮುಂದುವರೆಸುವ ಪಿತೂರಿ ಎಲ್ಲಾ ವಿಫಲವಾಗಿದೆ. ಸುಹಾರ್ತೋ ಬೆಂಬಲಿಗರು ಹೆಚ್ಚುಕಡಿಮೆ ಇಲ್ಲದ ಸರ್ಕಾರ ಸ್ಥಾಪನೆಯಾಗಿದೆ, ಚುನಾವಣಾ ಫಲಿತಾಂಶಗಳನ್ನು ವಿಕೃತಗೊಳಿಸುವ ಪ್ರಯತ್ನಕ್ಕೆ ಅಡ್ಡಗಾಲು ಹಾಕಿ ಪುನಃ ಜನಾಂದೋಲನದ ಅಲೆ ಎದ್ದು ನಿಂತಿತ್ತು.

ಜೂನ್‌ನಲ್ಲಿ ನಡೆದ ಇಂಡೋನೇಶ್ಯಾದ ಪಾರ್ಲಿಮೆಂಟರಿ ಚುನಾವಣೆಗಳಲ್ಲಿ ಮೇಘವತಿಯ ಪಿಡಿಐ(ಪಿ) ಅತ್ಯಂತ ದೊಡ್ಡ ಪಕ್ಷವಾಗಿ ಹೊಮ್ಮಿತ್ತು. ಎರಡನೇ ಸ್ಥಾನದಲ್ಲಿ ಸುಹಾರ್ತೋ ಗೊಲ್ಕರ್ ಪಕ್ಷ, ಮೂರನೇ ಸ್ಥಾನದಲ್ಲಿ ಈಗ ಅಧ್ಯಕ್ಷರಾಗಿ ಆಯ್ಕೆ(ಚುನಾವಣಾ ಫಲಿತಾಂಶದ ವಿವರಗಳಿಗೆ ಬಾಕ್ಸ್ ನಲ್ಲಿ ನೋಡಿ)ಆಗಿರುವ ವಾಹಿದ್‌ರ ರಾಷ್ಟ್ರೀಯ ಜಾಗೃತಿ(ಪಿಕೆಬಿ) ಪಕ್ಷ ಇತ್ತು. ಸುಹಾರ್ತೋನ ಬಾಲಬಡುಕರು ಪುನಃ ಆಡಳಿತದಲ್ಲಿ ಪ್ರಭಾವ ಹೊಂದಿರದ ಸರ್ಕಾರ ಬರಬೇಕೆಂಬುದು ಜನರ ಆಶಯವಾಗಿತ್ತು. ಮೇಘವತಿಯ ಪಕ್ಷಕ್ಕೆ ಪಾರ್ಲಿಮೆಂಟಿನಲ್ಲಾಗಲೀ(ಡಿಪಿಆರ್), ಅಧ್ಯಕ್ಷರನ್ನು ಆರಿಸುವ ಎಂ.ಪಿ.ಆರ್.ನಲ್ಲಾಗಲೀ ಸ್ಪಷ್ಟ ಬಹುಮತ ಇರಲಿಲ್ಲ. (ವಿವರಗಳಿಗೆ 'ಅಧ್ಯಕ್ಷೀಯ ಚುನಾವಣಾ ಪದ್ಧತಿ- ಬಾಕ್ಸ್ ನೋಡಿ). ಅಧ್ಯಕ್ಷೀಯ ಚುನಾವಣೆಗೆ ಪ್ರಸ್ತುತ ಅಧ್ಯಕ್ಷ ಹಬೀಬಿ ಮತ್ತು ಮೇಘವತಿ ನಡುವೆ ಸ್ಪರ್ಧೆ ನಡೆಯುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಗೋಲ್ಕರ್ ಪಕ್ಷದ ಅಧ್ಯಕ್ಷ ಹಬೀಬಿಗೆ ಯಾವ ಪಕ್ಷದ ಬೆಂಬಲವೂ ಸಿಗದೆ, ಮೇಘವತಿ ಸುಲಭವಾಗಿ ಅಧ್ಯಕ್ಷರಾಗಿ ಆಯ್ಕೆಯಾಗುತ್ತಾರೆ ಅಂತ ಜನರ ನಿರೀಕ್ಷೆಯಾಗಿತ್ತು.

### ಮೇಘವತಿ ಸೋಲಿಸಲು ಹುನ್ನಾರ

ಅಧ್ಯಕ್ಷ ಹಬೀಬಿಯವರ ಗೋಲ್ಕರ್ ಪಕ್ಷ ಮೊದಮೊದಲು ಸುಹಾರ್ತೋರ ಬಾಲಬಡುಕ ಕೂಟದ ಅಧಿಕಾರವನ್ನು ಹಾಗೆ ಮುಂದುವರೆಸಿಕೊಂಡು ಹೋಗಬೇಕು ಎಂಬ ಪ್ರಯತ್ನ ನಡೆಸಿತು. ಅಧ್ಯಕ್ಷ ಹಬೀಬಿ ಬದಲು, ಸೇನಾ ಮುಖ್ಯಸ್ಥ ವಿರಾಂತೋರನ್ನು ಗೋಲ್ಕರ್ ಅಭ್ಯರ್ಥಿ ಮಾಡಿ 'ರಾಷ್ಟ್ರೀಯ ಸಹಮತ' ದ ಹೆಸರಲ್ಲಿ ಬೆಂಬಲ ಗಳಿಸಲು ಪ್ರಯತ್ನಿಸಿತು. ಈ ಕೂಟಕ್ಕೆ ಮೇಘವತಿ ಅಧ್ಯಕ್ಷರಾಗುವುದು ಬೇಕಿರಲಿಲ್ಲ. ಅದಕ್ಕೆ ಮಸಲತ್ತು ಆರಂಭವಾಯಿತು. ಉಳಿದ ಪಕ್ಷಗಳನ್ನು ಮೇಘವತಿಯ ಪಿಡಿಐ-ಪಿ ವಿರುದ್ಧ ಎತ್ತಿಕಟ್ಟುವ ಕೆಲಸ ಆರಂಭವಾಯಿತು. ಇಸ್ಲಾಮಿಕ್ ಪಕ್ಷಗಳಲ್ಲಿ ಒಂದರ ಅಭ್ಯರ್ಥಿಯನ್ನು ನಿಲ್ಲಿಸಿ, ಅವರಿಗೆ ಬೆಂಬಲಿಸಿ ಮೇಘವತಿಯನ್ನು ಸೋಲಿಸುವ ದುಷ್ಟಕೂಟದ ತಂತ್ರ ಫಲಿಸಿತು. ಬಹುಮತ ಇಲ್ಲದಿದ್ದರೂ ತಾನೇ ಗೆಲ್ಲುವುದು ಖಚಿತ ಎಂದು ಆರಾಮವಾಗಿದ್ದ, ಉಳಿದ ಪಕ್ಷಗಳನ್ನು ಸಂಪರ್ಕಿಸಿ ಸುಹಾರ್ತೋ ಕೂಟ ವಿರುದ್ಧ ಐಕ್ಯರಂಗ ಕಟ್ಟುವ ಮುತುವರ್ಜಿ ಮೇಘವತಿ ವಹಿಸದ್ದರಿಂದ ಈ ತಂತ್ರ ಫಲಿಸಿತು. ಅಧ್ಯಕ್ಷೀಯ ಚುನಾವಣೆಯಲ್ಲಿ ಎಂ.ಪಿ.ಐರ್. 373-313 ಮತಗಳಿಂದ ಪಿಕೆಬಿ ಅಭ್ಯರ್ಥಿ ಅಬ್ದುಲ್ ರಹಮಾನ್ ವಾಹಿದ್, ಪಿಡಿಪಿ-ಐ ನ ಅಭ್ಯರ್ಥಿ ಮೇಘವತಿಯನ್ನು ಸೋಲಿಸಿದರು. ವಾಹಿದ್‌ರಿಗೆ ಅವರ ಪಕ್ಷ ಅಲ್ಲದೆ ಇತರ ಎರಡು ಮೂರು ಇಸ್ಲಾಮಿಕ್ ಪಕ್ಷಗಳು ಮತ್ತು ಸುಹಾರ್ತೋರ ಗೋಲ್ಕರ್ ಪಕ್ಷದ ಬೆಂಬಲ ಸಿಕ್ಕಿತ್ತು. ಮೇಘವತಿಗೆ ಪಿಡಿಐ-ಪಿ ಅಲ್ಲದೆ ಇತರ ಎಲ್ಲಾ ಜಾತ್ಯಾತೀತ ಪಕ್ಷಗಳ ಬೆಂಬಲ ಸಿಕ್ಕಿತ್ತು. ಮೇಘವತಿಯನ್ನು ಸೋಲಿಸುವುದಕ್ಕೆ , ಮಹಿಳೆಯೊಬ್ಬಳು ದೇಶದ ಮುಖ್ಯಸ್ಥೆಯಾಗುವುದು ಇಸ್ಲಾಮಿಕ್ ಧರ್ಮಕ್ಕೆ ವಿರುದ್ಧ ಎಂಬ ಪ್ರಚಾರವನ್ನು ಗೋಲ್ಕರ್ ಬಳಸಿಕೊಂಡಿತ್ತು. ಇದಕ್ಕೆ ಎರಡು ಮೂರು ಚಿಕ್ಕ ಇಸ್ಲಾಮಿಕ್ ಪಕ್ಷಗಳು ಬಲಿಬಿದ್ದವು. ಆದರೆ ಈ ಹುನ್ನಾರದ ವಿರುದ್ಧ ಜನ ದಂಗೆಯೆದ್ದು ಬೀದಿಗಿಳಿದರು. ಮೇಘವತಿಯನ್ನು ಅಧ್ಯಕ್ಷ ಸ್ಥಾನದಿಂದ ವಂಚಿತ ಮಾಡುವುದರಲ್ಲಿ ಸುಹಾರ್ತೋ ಕೂಟ ಸಫಲವಾಯಿತು ಎನ್ನುವ ಸುದ್ದಿ ಹರಡುತ್ತಿದ್ದಂತೆ ಜಕಾರ್ತ ಮತ್ತು ಇತರೆಡೆ ವ್ಯಾಪಕ ದಂಗೆಗಳಾದವು. ಜಕಾರ್ತದಲ್ಲಿ ಹತ್ತು - ಸಾವಿರಕ್ಕೂ ಹೆಚ್ಚಿನ ಜನ ಬೀದಿಗಿಳಿದರು. ಪಾರ್ಲಿಮೆಂಟಿನ ಭವನದ ಮುಂದೆ ಭಾರಿ ಪ್ರದರ್ಶನ ನಡೆಸಿದರು. ಪ್ರಜಾಸತ್ತೆ-ವಿರೋಧಿ ಅಧ್ಯಕ್ಷೀಯ ಪದ್ಧತಿ ಕಿತ್ತುಹಾಕಬೇಕು. ಎಂ.ಪಿ.ಆರ್.ನಲ್ಲಿ ನೇಮಕಾತಿ ಹೊಂದಿರುವ ಸದಸ್ಯರನ್ನು ಕಿತ್ತುಹಾಕಬೇಕು. ಸಂವಿಧಾನದಲ್ಲಿ ಆಮೂಲಾಗ್ರ ಬದಲಾವಣೆ ಮಾಡಬೇಕು ಎಂಬ ಕೂಗು ಮತ್ತೆ ಎದ್ದಿತು. ಕೇವಲ 2" ದಿನಗಳ ದೇಶವ್ಯಾಪಿ ದಂಗೆಗಳಲ್ಲಿ ಜನ ಪೋಲೀಸ್, ಮಿಲಿಟರಿ ಮೇಲೆ ಕಲ್ಲು, ಪೆಟ್ರೋಲ್ ಬಾಂಬ್‌ಗಳಿಂದ ದಾಳಿ ನಡೆಸಿದರು. ಈ ದಂಗೆಗಳಲ್ಲಿ ಸುಮಾರು ಎರಡುಕೋಟಿ ಡಾಲರುಗಳಷ್ಟು ಆಸ್ತಿ-ಪಾಸ್ತಿ ನಷ್ಟವಾಗಿದೆ ಎಂದು ವರದಿಯಾಗಿದೆ.

ಇದರಿಂದ ಹೆದರಿದ ಸುಹಾರ್ತೋ-ಕೂಟ ಉಪಾಧ್ಯಕ್ಷ ಚುನಾವಣೆಯಲ್ಲೂ ತಾನು ನಿಲ್ಲಿಸಬೇಕಾದ ಅಭ್ಯರ್ಥಿ ಸೇನಾ ಮುಖ್ಯಸ್ಥ ವಿರಾಂತೋ ರನ್ನು ಹಿಂತೆಗೆದು ಕೊಂಡಿತು. ಕಣದಲ್ಲಿ ಉಳಿದದ್ದು ಮೇಘವತಿ ಮತ್ತು ಇನ್ನೊಂದು ಇಸ್ಲಾಮಿಕ್ ಪಕ್ಷ ಪಿ.ಪಿ.ಪಿ.ಯ ಹಮ ರಾಜ್ ಹಜ್ ಮಾತ್ರ. ಈ ಪಿ.ಪಿ.ಪಿ. ಮಾತ್ರ ಇಂಡೋನೇಶ್ಯಾದ ಮೂರು-ನಾಲ್ಕು ಇಸ್ಲಾಮಿಕ್ ಪಕ್ಷಗಳಲ್ಲಿ ರಾಜಕೀಯ-ಸಾಮಾಜಿಕ ಜೀವನದಲ್ಲಿ ಇಸ್ಲಾಮ್‌ಗೆ ಪ್ರಾಧಾನ್ಯ ಕೊಡಬೇಕು ಮತ್ತು ಧಾರ್ಮಿಕ ಘೋಷಣೆಗಳನ್ನು ಎತ್ತುತ್ತಿರುವ ಪಕ್ಷ ಎಂದು ಗಮನಿಸಬೇಕು. ಮೇಘವತಿ ನೂರು ಮತಗಳ ಅಂತರದಿಂದ ಸುಲಭದ ಜಯ ಗಳಿಸಿದರು. ಈ ಚುನಾವಣೆಯಲ್ಲಿ ಸುಹಾರ್ತೋ-ಕೂಟ ಗೋಲ್ಕರ್ ಪಕ್ಷ ಮೇಘವತಿಗೆ ಬೆಂಬಲ ನೀಡಿತು. ಉಪಾಧ್ಯಕ್ಷ ಚುನಾವಣೆಯಲ್ಲೂ ಮೇಘವತಿಯನ್ನು ಸೋಲಿಸಿದರೆ ಇಡೀ ಚುನಾವಣೆ ಫಲಿತಾಂಶವನ್ನು ಜನ ತಿರಸ್ಕರಿಸುವ, ಆಮೂಲಾಗ್ರ ಬದಲಾವಣೆಗೆ ಜನ ಒತ್ತಾಯಿಸಿ ತೀವ್ರ ಆಂದೋಲನ ನಡೆಸುವ ಸಾಧ್ಯತೆ ಇತ್ತು.

ಮೇಘವತಿಯನ್ನು ಸರ್ಕಾರದಿಂದ ಹೊರಗಿಡುವ ಸುಹಾರ್ತೋ- ದುಷ್ಟಕೂಟದ ಪ್ರಯತ್ನ ಸಫಲವಾಗಲಿಲ್ಲ. ಆದರೆ ಜಾತ್ಯಾತೀತ ಪ್ರಜಾಸತ್ತೆಯ ಮರು ಸ್ಥಾಪನೆಗೆ ತೀವ್ರಗಾಮಿ ಸುಧಾರಣೆಗಳನ್ನು ತರಬಲ್ಲ ಪಕ್ಷಗಳ ಶಕ್ತಿಯನ್ನು ಸರ್ಕಾರವು ಕಡಿಮೆ ಮಾಡುವುದರಲ್ಲಿ ಸಫಲವಾಗಿದೆ. ಅಧ್ಯಕ್ಷರಾಗಿ ಆಯ್ಕೆಯಾದ ವಾಹಿದ್ ದೇಶದ್ದಾದ್ಯಂತ ಗೌರವಾನ್ವಿತ ವ್ಯಕ್ತಿ. ಅವರ ಪಕ್ಷ ಇಸ್ಲಾಮಿಕ್ ಎಂದು ಹೇಳಿಕೊಂಡರೂ ದೇಶದ ಜಾತ್ಯಾತೀತ ಸ್ವರೂಪವನ್ನು ಕಾಪಾಡಲು, ಅಲ್ಪಸಂಖ್ಯಾತರ ಹಕ್ಕು ರಕ್ಷಿಸಲು ಬದ್ಧವಾಗಿದೆ. ಆದರೆ ಅಧ್ಯಕ್ಷ ಸುಹಾರ್ತೋರನ್ನು ವಿಚಾರಣೆಗೆ ಗುರಿಪಡಿಸಿ ಶಿಕ್ಷೆ ಕೊಡಬೇಕು ಎನ್ನುವುದರ ಬಗ್ಗೆ ಅವರು ಅಷ್ಟು ಬೆಂಬಲ ತೋರಿಸಿಲ್ಲ. ಅಲ್ಲದೆ ಪಾರ್ಲಿಮೆಂಟರಿ ಚುನಾವಣೆಗಳಲ್ಲಿ ಸುಹಾರ್ತೋ-ಪುತ್ರಿ ಜತೆ ಪ್ರಚಾರ ಮಾಡಿದ್ದರು. ಇವೆರಡು ಬಿಟ್ಟರೆ ಅವರ ಪಕ್ಷ ಸುಹಾರ್ತೋ-ಕೂಟವನ್ನು ಅಧಿಕಾರದಿಂದ ಕಿತ್ತುಹಾಕಿ ಪ್ರಜಾಸತ್ತೆ ಸ್ಥಾಪಿಸುವುದಕ್ಕೆ ಬದ್ಧವಾಗಿದೆ. ಆದರೆ 59 ವರ್ಷದ ಅಧ್ಯಕ್ಷ ವಾಹಿದ್‌ರ ಆರೋಗ್ಯ ಕಳವಳಕ್ಕೀಡು ಮಾಡುವಂತದ್ದು. ಎರಡು ಬಾರಿ ಹೃದಯಾಘಾತವಾಗಿರುವ ವಾಹಿದರ ದೃಷ್ಟಿ ಪೂರ್ತಿ ಮಂಜಾಗಿದೆ. ಮನೆಯಲ್ಲಿ ಹೊರಗೂ ಓಡಾಡಲು ಯಾರಾದರು ಸಹಾಯಕರು ಬೇಕು. (ವಾಹಿದರ ಕಿರು ಪರಿಚಯಕ್ಕೆ ಬಾಕ್ಸ್ ನೋಡಿ)

ಈ ಹಿನ್ನೆಲೆಯಲ್ಲಿ ಮೇಘವತಿ ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವುದು ಗಮನಾರ್ಹ ಬೆಳವಣಿಗೆ. ಇಂಡೋನೇಶ್ಯಾದ ಸಂವಿಧಾನದ ಪ್ರಕಾರ, ಅಧ್ಯಕ್ಷರು ಮಡಿದರೆ ಅಥವಾ ಸರ್ಕಾರ ನಡೆಸುವ ಸ್ಥಿತಿಯಲ್ಲಿ ಇಲ್ಲದಿದ್ದರೆ ಉಪಾಧ್ಯಕ್ಷರು ಅಧ್ಯಕ್ಷರಾಗುತ್ತಾರೆ. ಈ ನಿಯಮದ ಪ್ರಕಾರವೇ ಅಧ್ಯಕ್ಷ ಸುಹಾರ್ತೋ ಜನಾಂದೋಲನದ ಒತ್ತಡದಿಂದ ಅಧಿಕಾರ ಬಿಡಬೇಕಾಗಿ ಬಂದಾಗ ಉಪಾಧ್ಯಕ್ಷ ಹಬೀಬಿ ಅಧ್ಯಕ್ಷರಾಗಿದ್ದು. ಸಾಮಾನ್ಯವಾಗಿ ಇಂಡೋನೇಶ್ಯಾದ ಸಂವಿಧಾನದ ಪ್ರಕಾರ ಉಪಾಧ್ಯಕ್ಷ ಅಲಂಕಾರಿಕ. ಅಂತಹ ಅಧಿಕಾರವೇನೂ ಇಲ್ಲ. ಆದರೆ ಮೇಲೆ ಹೇಳಿದ ವಿಶಿಷ್ಟ ಹಿನ್ನೆಲೆಯಲ್ಲಿ ಮೇಘವತಿ ಸರ್ಕಾರದಲ್ಲಿ ಗಮನಾರ್ಹ ಮತ್ತು ದೊಡ್ಡ ಪಾತ್ರ ವಹಿಸುವ ನಿರೀಕ್ಷೆ ಇದೆ. ಆಕೆ ಪಾರ್ಲಿಮೆಂಟಿನ

ಪುಟ 8 ನೋಡಿ

### ಉದಾರವಾದಿ ವಾಹಿದ್

**59 ವರ್ಷದ ಅಬ್ದುಲ್ ರಹಮಾನ್ ವಾಹಿದ್ ಉದಾರವಾದಿ ಮುಸ್ಲಿಂ ನಾಯಕ. ಆತನ ತಾತ 1926 ರಲ್ಲಿ ಸ್ಥಾಪಿಸಿದ ದೇಶದ ಅತಿದೊಡ್ಡ ಮುಸ್ಲಿಂ ಸಾಮಾಜಿಕ ಸಂಘಟನೆ ನಹಪಾಲಾತುಲ್ ಲಾಲಮಾದ ನಾಯಕ. ಅದರ ಸದಸ್ಯತ್ವ ಈಗ ಮೂರು ಕೋಟಿ. ಇದು ಆತನ ಜನಬೆಂಬಲದ ನೆಲೆ. ವಾಹಿದ್ ತಂದೆಯೂ ಹಿಂದೆ ಧಾರ್ಮಿಕ ವ್ಯವಹಾರಗಳ ಮಂತ್ರಿಯಾಗಿದ್ದವರು. ವಾಹಿದ್ ಸಾಹಿತ್ಯ ಮತ್ತು ಸಮಾಜ ವಿಜ್ಞಾನಗಳನ್ನು ಇರಾಕ್, ಈಜಿಪ್ಟ್, ಕೆನಡಾಗಳಲ್ಲಿ ಅಧ್ಯಯನ ಮಾಡಿದರು. ಅವರ ಪಿಕೆಬಿ ಪಕ್ಷ ಸ್ಥಾಪನೆಯಾಗಿದ್ದು ಸುಹಾರ್ತೋ ಉರುಳಿ ಹೊಸ ಪ್ರಜಾಸತ್ತೆಗೆ ತಯಾರಿ ನಡೆದಾಗ. ಅಧಿಕಾರದ ಆಸೆ ಇಲ್ಲದ, ಆದರೆ ಎಲ್ಲಾ ರಾಜಕೀಯ ಪಕ್ಷಗಳ ಜತೆ ಸಂಬಂಧ ಹೊಂದಿ, ಅವರ ನಡುವೆ ಸಹಮತ ಮೂಡಿಸಬಲ್ಲ ವ್ಯಕ್ತಿತ್ವ ಹೊಂದಿರುವಾತ. "ಇಂಡೋನೇಶ್ಯಾವನ್ನು ಇಸ್ಲಾಮಿಕ್ ದೇಶ ಎಂದು ಘೋಷಿಸುವುದು ನನ್ನ ಪ್ರಕಾರ ದೇಶದ್ರೋಹದ ಕೆಲಸ. ಯಾಕೆಂದರೆ ಆಗ ಈ ದೇಶದ ಧಾರ್ಮಿಕ ಅಲ್ಪಸಂಖ್ಯಾತರು ಎರಡನೇ ದರ್ಜೆ ಪ್ರಜೆಗಳಾಗುತ್ತಾರೆ' ಎಂಬ ಸ್ಪಷ್ಟ ಧಾರ್ಮಿಕ ಮೂಲಭೂತವಾದ -ವಿರೋಧಿ ನೀತಿ ಹೊಂದಿರುವವರು. ಸುಹಾರ್ತೋರನ್ನು ವಿಚಾರಣೆ-ಶಿಕ್ಷೆಗೆ ಒಳಪಡಿಸುವುದು ಇವರಿಗೆ ಇಷ್ಟವಿಲ್ಲ. ಸುಹಾರ್ತೋ ತಾನೇ ತಪ್ಪು ಒಪ್ಪಿಕೊಂಡು ಅದಕ್ಕೆ ದಂಡ ತೆತ್ತು, ಈ ಅಧ್ಯಾಯ ಮುಗಿಸಲು ಆತಪ್ರಯತ್ನಿಸುತ್ತಿದ್ದಾರೆ ಎಂದು ವದಂತಿ**

### ಅಧ್ಯಕ್ಷೀಯ ಚುನಾವಣಾ ಪದ್ಧತಿ


**ಇಂಡೋನೇಶ್ಯಾದಲ್ಲಿ ಎರಡು ಸದನಗಳಿವೆ. ಕೆಳಸದನಕ್ಕೆ ಡಿಪಿಆರ್ ಅಂತಾರೆ. 500 ಸದಸ್ಯರ ಈ ಸದನದಲ್ಲಿ 462 ನೇರವಾಗಿ ಚುನಾಯಿತರಾದವರು. ಜೂನ್‌ನಲ್ಲಿ ಚುನಾವಣೆ ನಡೆದ್ದದ್ದು ಇದಕ್ಕೆ. 38 ಸೀಟುಗಳನ್ನು ಮಿಲಿಟರಿಗೆ ಕಾದಿರಿಸಲಾಗಿದೆ. ಇನ್ನೊಂದು ಸದನ ಎಂ.ಪಿ.ಆರ್. ಅಲ್ಲಿ 700 ಸದಸ್ಯರಿರುತ್ತಾರೆ. ಕೆಳ ಸದನದ ಎಲ್ಲಾ 500 ಸದಸ್ಯರೂ ಇಲ್ಲೂ ಸದಸ್ಯರು. ಇದಲ್ಲದೆ 27 ಪ್ರಾಂತೀಯ ಅಸೆಂಬ್ಲಿಗಳಿಂದ 5 ಸದಸ್ಯರನ್ನು ಆರಿಸಲಾಗುತ್ತದೆ. ಉಳಿದ 65 ಸದಸ್ಯರನ್ನು ಪ್ರಾಂತಿಯ ಸಾಮಾಜಿಕ ಸಂಘಟನೆಗಳಿಂದ ಆಯ್ಕೆ ಮಾಡಲಾಗುತ್ತದೆ. ಡಿಪಿಆರ್ ಆಗಾಗ ಸಭೆ ಸೇರಿ ಕಾನೂನು, ಬಜೆಟ್ ಇತ್ಯಾದಿ ಮಂಜೂರು ಮಾಡುತ್ತಾರೆ. ಎಂ.ಪಿ.ಆರ್. ಸಭೆ ಸೇರುವುದು ಅಧ್ಯಕ್ಷರನ್ನು ಚುನಾಯಿಸಲಿಕ್ಕೆ ಮತ್ತು ವಿಶೇಷ ಸಂದರ್ಭಗಳಲ್ಲಿ ಮಾತ್ರ. ಅಧ್ಯಕ್ಷರನ್ನು, ಉಪಾಧ್ಯಕ್ಷರನ್ನು ಆರಿಸುತ್ತದೆ. ಈ ಎಂ.ಪಿ.ಆರ್. ನ್ನು ಕಿತ್ತುಹಾಕಬೇಕು ಎಂದು ಜನಾಂದೋಲನದ ಬೇಡಿಕೆ. ಅದೇ ರೀತಿ ಮಿಲಿಟರಿಗೆ ಮೀಸಲಾತಿಯನ್ನು ಕ್ರಮೇಣ ಕಿತ್ತುಹಾಕಬೇಕೆಂದು ಬೇಡಿಕೆ. ಎಂ.ಪಿ.ಆರ್. ನ ಈ ಸ್ವರೂಪದಿಂದಾಗಿ ದೇಶದ ಅತಿದೊಡ್ಡ ಪಕ್ಷವನ್ನು, ಜನಾಂದೋಲನದ ಒತ್ತಡವಿಲ್ಲದಿದ್ದರೆ ಸರ್ಕಾರದಿಂದ ಸಂಪೂರ್ಣ ಹೊರಗಿಡುವ ಹುನ್ನಾರ ನಡೆದದ್ದು.**

### ಹಿಂದೂಜಾಗಳ ಮೇಲೆ ಏಕಿಲ್ಲ ಚಾರ್ಜ್ ಶೀಟ್?

# ಬೋಫೋರ್ಸ್: ರಾಜೀವ್ ಸೇರಿ ಐವರ ಮೇಲೆ ಚಾರ್ಜ್‌ಶೀಟ್

**ಬೋಫೋರ್ಸ್ ತೋಪುಗಳ ಖರೀದಿಯಲ್ಲಿ ಭ್ರಷ್ಟಚಾರದ ಕೇಸ್ ಹದಿಮೂರು ವರ್ಷ ಹಳೆಯದು. ದೇಶದ ಅತ್ಯಂತ ಉನ್ನತ ಪದವಿ ಅಲಂಕರಿಸಿದ ಪ್ರಧಾನಿ ಮೇಲೆ ಮೊದಲ ಬಾರಿಗೆ ಸಾರ್ವಜನಿಕ ಸಂಶಯದ ದೃಷ್ಟಿ ಹರಿದ ಕೇಸ್. ದೇಶದಲ್ಲಿ ರಾಜಕೀಯ ಅಲ್ಲೋಲ-ಕಲ್ಲೋಲ ಮಾಡಿದ ಈ ಕೇಸ್ ನಲ್ಲಿ ಸಿಐಬಿ ಈಗ ಐವರ ಮೇಲೆ ಚಾರ್ಜ್ ಶೀಟ್ ಹಾಕಿದೆ. ಆಪಾದಿತರೆಂದು ಹೆಸರಿಸಿರುವವರಲ್ಲಿ ರಾಜೀವ್ ಗಾಂಧಿ ಒಬ್ಬರು. ಕಾಂಗ್ರೆಸ್ ಇದಕ್ಕೆ ಖಾರವಾಗಿ ಪ್ರತಿಕ್ರಿಯಿಸಿದೆ, ಪಾರ್ಲಿಮೆಂಟಿನಲ್ಲಿ ಗದ್ದಲ ಮಾಡಿದೆ. ಸರ್ಕಾರದ ಜತೆ ಸಹಕಾರ ಮೂಡುವುದಿಲ್ಲ ಎಂದು ಕೂಗಾಡಿದೆ. ಬೋಫೋರ್ಸ್ ಭ್ರಷ್ಟಚಾರದ ಕಾಂಡ ಮತ್ತು ಕೇಸ್‌ನ ಇಂದಿನ ಸ್ಥಿತಿ, ಅದರ ಪರಿಣಾಮಗಳ ಕಿರುಪರಿಚಯ.**

ಸಿಬಿಐ ಬೋಫೋರ್ಸ್ ಕೇಸ್ ನಲ್ಲಿ ಕೊನೆಗೂ ಚಾರ್ಜ್ ಶೀಟ್ ಹಾಕಿದೆ. ಬಿಜೆಪಿ ನಾಯಕತ್ವದ ಎನ್.ಡಿ.ಎ ಸರ್ಕಾರ ಅಧಿಕಾರ ವಹಿಸಿಕೊಂಡ ಕೂಡಲೇ ತರಾತುರಿಯಿಂದ ಚಾರ್ಜ್ ಶೀಟ್ ಹಾಕಲಾಗಿದೆ. ಸಿಬಿಐ ಪ್ರಕಾರ ಈ ಕೇಸ್ ನಲ್ಲಿ ಐವರು ಆಪಾದಿತರೆಂದರೆ ಆಗಿನ ಪ್ರಧಾನಿ ರಾಜೀವ್ ಗಾಂಧಿ, ಭಾರತದಲ್ಲಿ ಬೋಫೋರ್ಸ್ ಏಜೆಂಟ್ ವಿನ್ ಚಡ್ಡಾ, ಇಟಾಲಿಯನ್ ವ್ಯಾಪಾರಿ ಒಟ್ಟಾವಿಯೊ ಕ್ವಟ್ರೋಚಿ, ಆಗಿನ ರಕ್ಷಣಾ ಖಾತೆ ಕಾರ್ಯದರ್ಶಿ ಎಸ್.ಕೆ. ಭಟ್ನಾಗರ್, ಆಗಿನ ಬೋಫೋರ್ಸ್ ಕಂಪನಿಯ ಅಧ್ಯಕ್ಷ ಮಾರ್ಟಿನ್ ಆರ್ಡ್‌ಬೋ. ಈ ಐವರಲ್ಲಿ ಮೂವರು ವಿದೇಶಗಳಲ್ಲಿ ಆರಾಮಾಗಿ ಇದ್ದು, ಅವರನ್ನು ಪ್ರಶ್ನಿಸಿ ತನಿಖೆ ಮಾಡಬೇಕಾದರೂ ಸಂಕೀರ್ಣ ಅಂತರ್‌ರಾಷ್ಟ್ರೀಯ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ರಾಜೀವ್ ಗಾಂಧಿ ನಿಧನ ಹೊಂದಿದ್ದಾರೆ. ನವೆಂಬರ್ 3 ರಿಂದ ಆರಂಭವಾಗುವ ವಿಚಾರಣೆಯಲ್ಲಿ ಕೋರ್ಟ್ ಸಮನ್ಸ್ ನೀಡಬಹುದಾದ್ದು ಭಟ್ನಾಗರ್ ಮೇಲೆ ಮಾತ್ರ.



ವಿನ್ ಛಡ್ಡಾ — ಕ್ವಟ್ರೋಚಿ — ಭಟ್ನಾಗರ್ — ಆರ್ಡ್‌ಬೋ — ರಾಜೀವ್ ಗಾಂಧಿ

ಎನ್.ಡಿ.ಎ ಸರ್ಕಾರದ ತರಾತುರಿ ಸ್ವಲ್ಪ ಆಶ್ಚರ್ಯಕರವಾದದ್ದು. ಬೋಫೋರ್ಸ್ ಗೆ ಸಂಬಂಧಿಸಿದ ವಿವರಗಳನ್ನೊಳಗೊಂಡ ದಾಖಲೆಗಳ ಎರಡನೇ ಕಂತು ಸ್ವಿಸ್ ಸರ್ಕಾರ ಸಿಬಿಐಗೆ ಇನ್ನೇನು ಕೊಡುವುದರಲ್ಲಿದೆ. ಅದನ್ನು ಕೊಡುವುದರ ವಿರುದ್ಧ ಸ್ವಿಸ್ ಕೋರ್ಟ್‌ನ ಮೊರೆ ಹೋಗಿರುವವರ ಅರ್ಜಿಯ ಮೇಲಿನ ಕೊನೆಯ ತೀರ್ಮಾನಕ್ಕೆ ಇನ್ನೇನು ಬರುವ ಸೂಚನೆ ಇರುವಾಗ ತರಾತುರಿಯಲ್ಲಿ ಚಾರ್ಜ್‌ಶೀಟ್ ಹಾಕಿದ್ದು 'ರಾಜಕೀಯ ದುರುದ್ದೇಶ ಪೂರಿತ' ಎಂಬ ಟೀಕೆಗೆ ಸರ್ಕಾರವನ್ನು ಗುರಿಮಾಡಿದೆ. 1993 ಜುಲೈನಲ್ಲೇ ಬಹಿರಂಗವಾದಂತೆ ಏಳು ಅರ್ಜಿಗಳನ್ನು ಹಾಕಲಾಗಿತ್ತು. ಸ್ವಿಸ್ ಕೋರ್ಟುಗಳಲ್ಲಿ- ಬೋಫೋರ್ಸ್ ಸಂಬಂಧಿಸಿದ ಸ್ವಿಸ್ ಬ್ಯಾಂಕ್ ದಾಖಲೆಗಳನ್ನು ಸಿಬಿಐಗೆ ಕೊಡುವುದರ ವಿರುದ್ಧ, ಎಲ್ಲಾ ಅರ್ಜಿಗಳನ್ನು ಸ್ವಿಸ್ ಕೋರ್ಟುಗಳು ತಿರಸ್ಕರಿಸಿದ್ದು. ಅದರಲ್ಲಿ ಒಬ್ಬರು ವಾದಿ ಮಾತ್ರ ಅಪೀಲ್ ಮೇಲೆ ಅಪೀಲ್ ಹಾಕುತ್ತಾ ವಿಳಂಬ ಮಾಡುತ್ತಿದ್ದಾರೆ.

**ಹಿಂದೂಜಾಗಳನ್ನು ಬಚಾವು ಮಾಡಲು ತರಾತುರಿ**

ಕುತೂಹಲ ಸಂಗತಿ ಅಂದರೆ ಈ ಅಫೀಲ್ ಹಾಕಿರುವವರು ಲಂಡನ್‌ನಲ್ಲಿ ನೆಲೆಸಿರುವ ಭಾರತೀಯ ಸಂಜಾತ ಮತ್ತು ರಾಜಕೀಯವಾಗಿ ಅತ್ಯಂತ ಪ್ರಭಾವಿತರಾದ ಹಿಂದೂಜಾ ಗುಂಪಿನ ಗೋಪಿಚಂದ್ ಮತ್ತು ಶ್ರೀಚಂದ್ ಹಿಂದೂಜಾ ಸೋದರರದ್ದು. ಅವರು ಮೂರು ಹಂತಗಳ ಕೋರ್ಟುಗಳಲ್ಲಿ ಸೋತಿದ್ದು, ಕೊನೆಯ ಕ್ರಮವಾಗಿ ಸ್ವಿಸ್ ಫೆಡರಲ್ ಕೌನ್ಸಿಲರಿಗೆ ಅಫೀಲ್ ಹೋಗಿದ್ದಾರೆ. ಕೆಳಗಿನ ಎಲ್ಲಾ ಕೋರ್ಟುಗಳ ತೀರ್ಪನ್ನು ಈ ಕೌನ್ಸಿಲರ್ ತಳ್ಳಿಹಾಕಿದ್ದು ಅಪರೂಪ. ಫೆಡರಲ್ ಕೌನ್ಸಿಲ್‌ಗೆ ಅಫೀಲ್ ಮಾಡುವುದೇ ಅತಿ ಅಪರೂಪವಂತೆ. ಈ ನಿರ್ಧಾರ ಸದ್ಯದಲ್ಲೇ ಬರಲಿದ್ದು, ಅದರೊಳಗೆ ತರಾತುರಿಯಲ್ಲಿ ಸರ್ಕಾರ ಒತ್ತಡ ಹಾಕಿ ಸಿಬಿಐಗೆ ಚಾರ್ಜ್‌ಶೀಟ್ ಹಾಕಲು ಹೇಳಿದೆ ಎಂಬ ಆರೋಪಕ್ಕೆ ಹಾದಿ ಮಾಡಿಕೊಟ್ಟಿದೆ. ಈಗಾಗಲೇ ಚಾರ್ಜ್‌ಶೀಟ್ ಹಾಕಿದರೆ ಹಿಂದೂಜಗಳನ್ನು ಆಪಾದಿತ ಪಟ್ಟಿಯಲ್ಲಿ ಸೇರಿಸದಿರುವುದಕ್ಕೆ ಈ ಅಫೀಲಿನ ಸಬೂಬು ಹೇಳಬಹುದು. ಎಲ್ಲಾ ದಾಖಲೆಗಳು ಬಂದ ಮೇಲೆ ಹಿಂದೂಜಾಗಳನ್ನು ಆಪಾದಿತರಲ್ಲಿ ಸೇರಿಸದಿರುವುದು ಬಹಳ ಕಷ್ಟವಾಗುತ್ತದೆ. ಇದು ವಿಳಂಬ ತಂತ್ರ ಹೂಡಿ ಹಿಂದೂಜಾಗಳನ್ನು ಬಚಾವು ಮಾಡುವ ತಂತ್ರ ಎನ್ನುವ ಆಪಾದನೆ ಮಾಡಲಾಗಿದೆ. ಹಿಂದೂಜಾಗಳು ಸ್ವಿಸ್ ಬ್ಯಾಂಕ್ ದಾಖಲೆಗಳನ್ನು ಸಿಬಿಐಗೆ ಕೊಡುವುದರ ವಿರುದ್ಧ ಇಷ್ಟು ಪ್ರಚಂಡವಾಗಿ ಕಾನೂನು ಕ್ರಮ ಹೋರಾಟ ಮಾಡುತ್ತಿರುವುದು- ಅವರು ಬೋಫೋರ್ಸ್ ಕಾಂಡದಲ್ಲಿ ಭಾಗಿಗಳು ಎಂದು ತೋರಿಸುವುದಿಲ್ಲವೇ? ಎಂದು ಕಾಂಗ್ರೆಸ್ಸೇತರ ಎಲ್ಲಾ ವಿರೋಧ ಪಕ್ಷಗಳು( ಎಡ ಪಕ್ಷಗಳು, ಸಮಾಜವಾದಿ ಪಕ್ಷ, ಆರ್‌ಜೆಡಿ ಸೇರಿದಂತೆ) ಕೇಳಿವೆ.


**'ಬೋಫೋರ್ಸ್ ಪ್ರಶ್ನೆಗಳಿಗೆ ಉತ್ತರ ಸಿಕ್ಕಿತೆ?'**

ಬೋಫೋರ್ಸ್ ಕೇಸ್ ಕಳೆದ ಹದಿಮೂರು ವರ್ಷಗಳಲ್ಲಿ ಹಲವು ಹಂತಗಳನ್ನು ಹಾದು ಬಂದಿದೆ. ಬೋಫೋರ್ಸ್ ಕೇಸ್‌ನಲಿ ಇರುವ ಪ್ರಶ್ನೆಗಳ ನಿಗೂಢ ರಹಸ್ಯ ಒಂದೊಂದಾಗಿ ಬಗೆಹರಿಯುತ್ತಾ ಹೋಗಿ, ಸ್ವಿಸ್ ಬ್ಯಾಂಕ್‌ನಲ್ಲಿ ಸೇರಿಸಿಟ್ಟ ಲಂಚದ ಹಣ ಇರುವ ಅಕೌಂಟ್‌ಗಳ ನಿಗೂಢತೆಯಲ್ಲಿ ಸಿಕ್ಕಿಹಾಕಿಕೊಂಡಿದೆ. ಈ ನಡುವೆ ಕಾಂಗ್ರೆಸ್ ಸರ್ಕಾರದ ( ಮುಖ್ಯವಾಗಿ ಪಿ.ವಿ.ನರಸಿಂಹರಾವ್ ಸರ್ಕಾರ) ತನಿಖೆಗೆ ಅಡ್ಡಗಾಲು ಹಾಕುವ ಪ್ರಯತ್ನದಿಂದಾಗಿಯೂ ತನಿಖೆ ಮಂದಗತಿಯಲ್ಲಿ ನಡೆದಿತ್ತು. ಪಿ.ವಿ.ನರಸಿಂಹರಾವ್ ಸರ್ಕಾರದಲ್ಲಿ ವಿದೇಶ ಸಚಿವರಾಗಿದ್ದ ಮಾಧವ ಸಿಂಹ ಸೋಲಂಕಿ ಸ್ವಿಸ್ ವಿದೇಶ ಸಚಿವರಿಗೆ ಒಂದು ಕೈಯಲ್ಲಿ ಬರೆದ ಚೀಟಿ ಮೆತ್ತಗೆ ಕೊಟ್ಟ ಪ್ರಕರಣ ಬಯಲಾಗಿದ್ದು ಈ ಕೇಸಿನಲ್ಲಿ ಪ್ರಥಮ ತಿರುವಾಗಿತ್ತು. ಈ ಚೀಟಿಯ ಮೂಲಕ ಸ್ವಿಸ್ ಸರ್ಕಾರ ಬ್ಯಾಂಕ್ ದಾಖಲೆಗಳನ್ನು ಸಿಬಿಐಗೆ ಕೊಡದಂತೆ ಮಾಡಲು ಪ್ರಯತ್ನಿಸಲಾಯಿತು ಎಂಬ ಆಪಾದನೆ ಬಂದಿತ್ತು.

ಸಂಯುಕ್ತ ರಂಗದ ಸರ್ಕಾರದ ಅವಧಿಯಲ್ಲಿ ಜೋಗಿಂದರ್ ಸಿಂಗ್ ಸಿಬಿಐ ಡೈರೆಕ್ಟರ್ ಆಗಿದ್ದಾಗ, ನಡೆಸಿದ ಸತತ ಪ್ರಯತ್ನದಿಂದ ಸ್ವಿಸ್ ಬ್ಯಾಂಕ್‌ನ ದಾಖಲೆಗಳ ಮೊದಲ ಕಂತು ಸಿಬಿಐಗೆ ದಕ್ಕಿತ್ತು. ಈ ಕೇಸ್‌ನ ತನಿಖೆಯಲ್ಲಿ, ಸ್ಪಷ್ಟ ಪುರಾವೆಗಳು ಸಿಕ್ಕಿ ಹೆಚ್ಚಿನ ಪ್ರಶ್ನೆಗಳಿಗೆ ಉತ್ತರ ಕೊಡಬಲ್ಲದು ಈ ದಾಖಲೆಗಳಲ್ಲಿ ಇವೆ ಎನ್ನಲಾಗಿತ್ತು. ಈಗಿನ ಸಿಬಿಐ ಚಾರ್ಜ್‌ಶೀಟ್ ಈ ದಾಖಲೆಗಳ ಮೇಲೆ ಆಧಾರಿತವಾದದ್ದು. ಆಮೇಲೆ ಒಂದು ದಾಖಲೆಗಳ ಪ್ರಕಾರ ಆಪಾದಿತರೆಂದು ಸಿಬಿಐ ಗುರುತಿಸಿದವರು" ಸಾರ್ವಜನಿಕ ಸೇವಕ" ರಾದ್ದರಿಂದ ಅವರ ಮೇಲೆ ತನಿಖೆ, ಆಪಾದನೆ ಹಾಕಲು ಅನುಮತಿಯ ಪ್ರಕ್ರಿಯೆ ವಿಳಂಬದಲ್ಲಿ ಸಿಲುಕಿಹಾಕಿಕೊಂಡಿತು. ಇನ್ನೊಂದು ಕಡೆ ಹಿಂದೂಜಾ ಮತ್ತು ಇತರರ ಸ್ವಿಸ್ ಕೋರ್ಟುಗಳಲ್ಲಿ ಈ ಕೇಸನ್ನು ಇನ್ನಷ್ಟು ವಿಳಂಬ ಮಾಡಿದೆ.


ಬೋಫೋರ್ಸ್ ಕೇಸ್‌ಲ್ಲಿ ಎದ್ದ ಹಲವಾರು ಪ್ರಶ್ನೆಗಳಿಗೆ ಉತ್ತರಕ್ಕಾಗಿ ಜನ ಕಾದಿದ್ದಾರೆ. ಈ ಉತ್ತರಗಳಲ್ಲಿ ಹಲವು ಭಾರತದ ರಾಜಕೀಯ ಜೀವನದಲ್ಲಿ ಭ್ರಷ್ಟಚಾರ- ರಹಿತ ಶುದ್ಧತೆಯ ವಿಷಯಗಳು ಅಡಕವಾಗಿವೆ. ಸಿಬಿಐ ನ ಚಾರ್ಜ್ ಶೀಟ್ ಈ ನಿಟ್ಟಿನಲ್ಲಿ ಮೊದಲ ಹೆಜ್ಜೆಯಂತೆ ಕಂಡರೂ ಹಿಂದೂಜಾಗಳನ್ನು ಕೈ ಬಿಟ್ಟಿರುವುದು ತೀವ್ರ ಸಂಶಯಕ್ಕೆಡೆ ಮಾಡಿದೆ. ಹಿಂದೂಜಾಗಳು ಈಗ ಬಿಜ… ಸರ್ಕಾರದ ಅದರಲ್ಲೂ ಪ್ರಧಾನಿ ವಾಜಪೇಯಿಗೆ ತ… ಬೇಕಾದವರು. ಕಳೆದ ಸರ್ಕಾರ ಹಿಂದೂಜಾಗಳ ಪಾ… ಟ್ರಾಕ್ ಪವರ್ ಪ್ರಾಜೆಕ್ಟ್‌ಗೆ ಎಲ್ಲಾ ನಿಯಮಗಳ… ಮುರಿದು, ಪ್ರಧಾನಿಗಳ ನೇರ ಒತ್ತಡದಿಂದ ಅನುಮ… ನೀಡಲಾಗಿತ್ತು ಎಂದು ಆಗ ಆರ್ಥಿಕ ಖಾತೆಯಲ್ಲಿ ವಿಶೇ… ಸಲಹೆಗಾರರಾಗಿದ್ದು ಆಮೇಲೆ ರಾಜಿನಾಮೆ ನೀಡ… ಮೋಹನ್ ಗುರುಸ್ವಾಮಿಯೇ ಆಪಾದಿಸಿದ್ದರು ಎಂದು … ನೆನಪಿಸಿಕೊಳ್ಳಬಹುದು.

ಬೋಫೋರ್ಸ್‌ನಲ್ಲಿ ಲಂಚ ತೆಗೆದುಕೊ… ಅಪರಾಧಿಗಳು ಯಾರು? ಬೋಫೋರ್ಸ್ ಖರೀದಿಯ… ಲಂಚದಿಂದಾಗಿ, ನಮ್ಮ ಅಗತ್ಯಗಳಿಗೆ ವಿಪರೀತವಾ… ತೋಪುಗಳನ್ನು ಖರೀದಿಸಲಾಯಿತೆ ಎಂಬ ಪ್ರಶ್ನೆಗ… ಉತ್ತರ ಸಿಕ್ಕೀತೆ?.




## ಬೋಫೋರ್ಸ್ ಕೇಸ್‌ನ ಪ್ರಶ್ನೆಗಳು

- ಒಟ್ಟು ಸಾವಿರ ಕೋಟಿ ರೂಗಳಿಗೂ ಹೆ… ಬೆಲೆ ಬಾಳುವ ಬೋಫೋರ್… ತೋಪುಗಳನ್ನು ಆಯ್ಕೆಮಾಡಲು ಸೈನ್ಯ… ಅಧಿಕಾರಿಗಳ ಮೇಲೆ ಮತ್ತು ರಕ್ಷಣಾ… ಖಾತೆ ಮತ್ತು ಪ್ರಧಾನಿಗಳ ಕಛೇರಿಯಿಂ… ಒತ್ತಡ ತರಲಾಯಿತೆ?
- ಭಾರತ ಸರಕಾರ ಈ ಖರೀದಿಯ… ಯಾವುದೇ ರೀತಿಯ ಕಮಿಷನ್ ಯಾರಿಗ… ಕೊಡಬಾರದು ಎಂದರು ಅದನ… ಉಲ್ಲಂಘಿಸಿ ಒಟ್ಟೇವಿಯೋ ಕ್ವಟ್ರೋಚಿಯ… ಕಂಪನಿಗೆ ಏಕೆ ಬೋಫೋರ್ಸ್ ಕಮಿಷನ… ಕೊಟ್ಟಿತು?
- ಕಮಿಷನ್ ಎಂದು ಕರೆಯುವ ಈ… ಲಂಚಕ್ಕಾಗಿ ಸ್ವಿಸ್ ಬ್ಯಾಂಕ್‌ನ ಹಲವ… ಅಕೌಂಟ್‌ಗಳಲ್ಲಿ ಹಲವು ಬಾ… ಸ್ಥಳಾಂತರಗೊಂಡಿದ್ದು ಯಾಕೆ?. ಕೊನೆ… ಯಾರಿಗೆ ಎಷ್ಟು ಸಂದಿತು?
- ಈ ಕೇಸಿಗೆ ಸಂಬಂಧಿದ ಕ್ವಟ್ರೋಚಿ ಮತ್ತು… ವಿನ್ ಚಿಡ್ಡ ದೇಶ ಬಿಟ್ಟು ಓಡಿಹೋ… ವಿದೇಶಗಳಲ್ಲಿ ನೆಲಸಿದ್ದು ಏಕೆ?. ಕ್ವಟ್ರೋಚಿ… ರಾಜೀವ್ ಕುಟುಂಬದ ಹತ್ತಿರ… ಸ್ನೇಹಿತರಾಗಿದ್ದುದ್ದು ಬೋಫೋರ್… ಖರೀದಿಗೆ ಪ್ರಭಾವ ಬೀರಲು… ಸಹಾಯವಾಯಿತೆ?.
- ಕ್ವಟ್ರೋಚಿಗೆ ಸಂದ ಕಮಿಷನ್(ಲಂಚ)ನಲ… ರಾಜೀವ್ ಕುಟುಂಬದ್ದು ಒಂದು ಪಾಲು… ಇದೆಯೇ?.
- ಪ್ರಧಾನಿ ರಾಜೀವ್ ಗಾಂಧಿ ಮತ್ತ… ಕಾಂಗ್ರೆಸ್ ಸರ್ಕಾರಗಳು ನಿಜ ಮುಚ್ಚಿಡಲು… ತನಿಖೆ ದಿಕ್ಕೆಡಿಸುವ ಪ್ರಯತ್ನ ನಡೆಸಿದರೆ… ಸರಕಾರಿ ಯಂತ್ರ ಬಳಸಿ.
- ಈಗಿನ ಸರಕಾರ ನಿಕಟವಾಗಿರುವ… ಹಿಂದೂಜಾಗಳಿಗೂ ಈ ಲಂಚದ ಹಣದ… ಭಾಗ ಸಂದಿದೆಯೇ?.




ನ್ಯೂಜಿಲೆಂಡ್ ವಿರು… ಟೆಸ್ಟ್ ಸರಣಿಯಲ್ಲಿ 2ನೇ ಟೆಸ್ಟ್‌ನ… ಸಚಿನ್‌ರ ಪ್ರಥಮ ದ್ವಿಶತ… ಭಾರತವನ್ನು ಗೆಲುವಿನ ಹಾದಿ… ಕೊಂಡೊಯ್ದಿದೆ…

Reg.No.17015/64 KRNM/BGS-405 MAG(2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ